ಬೇಂದ್ರೆ ಸ್ಮೃತಿ

ಸಂಪಾದಕರು :
ಪ್ರೊ|| ಎಂ. ವಿ. ಸೀತಾರಾಮಯ್ಯ
ಡಾ|| ಗೋ. ಅ. ಜಾಲಿಹಾಳ



ಬಿ. ಎಂ. ಶ್ರೀ.
ಸ್ಮಾರಕ ಪ್ರತಿಷ್ಠಾನ
ಬೆಂಗಳೂರು-೧೯

ಡಾ|| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿಯ

ನೆರವನ್ನು ನೆನೆದು

ಈ 'ಸ್ಮೃತಿ' ಹೊತ್ತಿಗೆಯನ್ನು

ರಾಜರತ್ನಂ

ಅವರ 'ಸ್ಮೃತಿ'ಗೆ

ಮುಡಿಪಾಗಿ

ಇರಿಸಿದೆ.

ಬೇಂದ್ರೆ ಸ್ಮೃತಿ

ಸಂಪಾದಕರು :

ಪ್ರೊ॥ ಎಂ. ವಿ. ಸೀತಾರಾಮಯ್ಯ

ಡಾ॥ ಗೋ. ಅ. ಜಾಲಿಹಾಳ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

೫೪, ಅರವಿಂದ, ೩ನೆಯ ಅಡ್ಡಬೀದಿ

ಗವಿಪುರಂ ವಿಸ್ತರಣ

ಬೆಂಗಳೂರು–೫೬೦ ೦೧೯

೧೯೮೩

BENDRE SMRITI (Bendre Remembered): A collection of Reminiscential Articles, Excerpts from Newspaper Articles and Reports published after the demise of Dr. D. R. Bendre, a front-rank Poet of Karnataka. Published by B. M. Sri. Memorial Foundation, 54, Aravinda, III Cross, Gavipuram Extension, Bangalore-560019. Editors: Prof. M. V. Seetharamiah and Dr. G. A. Jalihal. Demy 8vo pp. viii + 56; 1982.

Price: Rs. 5-00.

Printed by

Sri Lakshmi Printers

91/9, Nethaji Road

Thyagarajanagar

Bangalore - 560028

ಮುನ್ನುಡಿ

ದಿವಂಗತ ಡಾ|| ದ. ರಾ. ಬೇಂದ್ರೆಯವರು ಕರ್ನಾಟಕದ ಅಗ್ರಮಾನ್ಯ ಕವಿಗಳಲ್ಲಿ ಒಬ್ಬರು. ಸಾಹಿತ್ಯ-ಸಂಶೋಧನ ಕ್ಷೇತ್ರದಲ್ಲೂ ಗಣ್ಯವಾದ ಕೆಲಸ ಮಾಡಿದ್ದರು. ಬಿ. ಎಂ. ಶ್ರೀ.ಯವರಲ್ಲಿ ಅಪಾರ ಗೌರವ ಹೊಂದಿದ್ದ ಅವರು ಪ್ರತಿಷ್ಠಾನದ ಗೌರವ ಸದಸ್ಯರಾಗಿರಲು ಒಪ್ಪಿಕೊಂಡು, ಅದರ ಘನತೆ ಗೌರವಗಳನ್ನು ಹೆಚ್ಚಿಸಿದ್ದರು ಹೀಗಿರುತ್ತ, ಇವರ ನಿಧನದಿಂದ ಪ್ರತಿಷ್ಠಾನಕ್ಕೆ ತುಂಬ ನಷ್ಟವಾಗಿದೆ ಎಂದು ಬೇರೆಯಾಗಿ ಹೇಳಬೇಕಾದ ಅಗತ್ಯ ಇಲ್ಲ. ಅವರ ಸಂಸ್ಮರಣಾರ್ಥವಾಗಿ **ಬೇಂದ್ರೆ ಸ್ಮೃತಿ** ಎಂಬ ಈ ಕಿರುಹೊತ್ತಗೆಯನ್ನು ಪ್ರತಿಷ್ಠಾನ ಹೊರತರುತ್ತಿರುವುದು ಅತ್ಯಂತ ಉಚಿತವಾಗಿದೆ ಎಂದು ನಾನು ಭಾವಿಸಿದ್ದೇನೆ.

ಈ ಪುಸ್ತಕ ಇನ್ನೂ ಮೈತುಂಬಿಕೊಂಡು ಬರಬೇಕಾಗಿತ್ತು ಎಂಬ ಅರಿವು ನಮಗಿದೆ. ಸಾಧ್ಯವಾದಷ್ಟು ಬೇಗ ಇದನ್ನು ಹೊರತರಬೇಕೆಂಬ ಸಹಜವಾದ ಅಪೇಕ್ಷೆ ಸಂಪಾದಕರಿಗೆ ಇದ್ದುದು ಒಂದು ಕಾರಣವಾದರೆ, ಈ ಅಲ್ಪಾವಧಿಯಲ್ಲೇ ಈ ಪ್ರಕಟನೆಗಾಗಿ ಕೂಡಿಸಲು ಸಾಧ್ಯವಾದ ಹಣದ ಪರಿಮಿತಿ ಇನ್ನೊಂದು ಕಾರಣ. ಇಷ್ಟಾದರೂ ನಡೆದಿರುವುದಕ್ಕೆ ಡಾ|| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿಯವರೂ, ಹಾಗೂ ಪ್ರತಿಷ್ಠಾನದ ಆಜೀವ ಸದಸ್ಯೆ ಆಗಿರುವ ಶ್ರೀಮತಿ ಪ್ರಭಾವತಿ ವಿದ್ಯಾಶಂಕರ್ ಅವರೂ ದಯಮಾಡಿ ನೀಡಿರುವ ಸಹಾಯ ಧನ ಇವೇ ಮೂಲ ಬಂಡವಾಳ. ಈ ಗ್ರಂಥದ ಪ್ರತಿಗಳ ಮಾರಾಟದಿಂದ ದೊರೆಯುವ ಲಾಭಾಂಶವನ್ನು ಪ್ರತಿಷ್ಠಾನದ ಪ್ರಕಾಶನ ನಿಧಿಗೆ ಸೇರಿಸಲಾಗುವುದು.

ಈ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ಒಂದೆರಡು ವಿಷಯಗಳನ್ನು ಹೇಳುವುದರ ಮೂಲಕ ಶ್ರೀ ಬೇಂದ್ರೆಯವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಬಯಸುತ್ತೇನೆ.

ಸುಮಾರು ಅರುವತ್ತು ವರುಷಗಳ ಹಿಂದೆ ನನಗೆ ಅವರ ಪ್ರತ್ಯಕ್ಷ ಸಂಪರ್ಕ ವೊದಗಿ ಅಂದಿನಿಂದ ಅವರ ಕಡೆಯ ಕಾಲದವರೆಗೂ ಅವರ ಪ್ರೀತ್ಯಾದರಗಳನ್ನು ಪಡೆಯುವ ಭಾಗ್ಯ ನನಗೆ ದೊರೆಯಿತು. ಅವರು ನಮ್ಮ ಮನೆಯ ಹಿರಿಯರಂತೆ ನಮ್ಮನ್ನು ನಡೆಸಿಕೊಂಡು ಬಂದರು. ಇತ್ತೀಚೆಗೆ ಅವರು ಚಿಕಿತ್ಸೆಗಾಗಿ ಧಾರವಾಡದ ಖಾಸಗಿ ವೈದ್ಯಶಾಲೆಯಲ್ಲಿದ್ದಾಗ ಅವರನ್ನು ಕಾಣಲು ಹೋಗಿ ಅವರೊಡನೆ ಎರಡು ದಿನಗಳನ್ನು ಕಳೆದೆನು. ನನ್ನನ್ನು ಕಂಡೊಡನೆಯೇ ನನ್ನನ್ನು ತಬ್ಬಿಕೊಂಡು ಪ್ರೀತಿಯ ಮಾತುಗಳನ್ನಾಡಿ ಬರಮಾಡಿಕೊಂಡರು. ತಮ್ಮ ದೇಹಸ್ಥಿತಿಯ ಲಕ್ಷ್ಯವಿಲ್ಲದೆ ಅವರಿಗೆ ಸಹಜವಾದ ಲವಲವಿಕೆಯಿಂದ ಸುಖಸಂಕಥಾ ವಿನೋದದಲ್ಲಿ ಮುಳುಗಿಸಿದರು

ಇದೇ ಸನ್ನಿವೇಶದಲ್ಲಿ ಅವರದೊಂದು ಹೆಬ್ಬಯಕೆ ಕೈಗೂಡಿತು. ಕೆಲವು ವರ್ಷಗಳಿಂದೀಚೆಗೆ ಅವರು ನನ್ನನ್ನು ಕಂಡಾಗಲೆಲ್ಲಾ ನನ್ನ ಅಳಿಯಂದಿರಾದ ಪ್ರೊ|| ಸುದರ್ಶನರವರನ್ನು ಕಾಣಬೇಕೆಂಬ ತಮ್ಮ ತೀವ್ರವಾದ ಇಚ್ಛೆಯನ್ನು ನನಗೆ ತಿಳಿಸುತ್ತಿದ್ದರು, ಕಾಗದಗಳನ್ನೂ ಬರೆದಿದ್ದರು. ಅವರಿಗೆ ಸಂಖ್ಯಾಶಾಸ್ತ್ರದಲ್ಲಿ ಆಳವಾದ ಆಸಕ್ತಿಯಿದ್ದು ಅದಕ್ಕೆ ಸಂಬಂಧಪಟ್ಟ ಅನ್ವೇಷಣೆಯಲ್ಲಿ ಸದಾ ನಿರತರಾಗಿರುತ್ತಿದ್ದುದು ಅನೇಕರಿಗೆ ಗೊತ್ತು. ಪ್ರೊ|| ಸುದರ್ಶನರು ಭೌತಶಾಸ್ತ್ರ ಗಣಿತಶಾಸ್ತ್ರಗಳಲ್ಲಲ್ಲದೆ, ಆಧ್ಯಾತ್ಮಿಕ ಕ್ಷೇತ್ರದಲ್ಲೂ ಆಸಕ್ತಿಯುಳ್ಳವರೆಂದು ಗೊತ್ತಾಗಿ ಅವರನ್ನು ಕಾಣಲು ಅತ್ಯಂತ ಉತ್ಸುಕರಾಗಿದ್ದರು. ಈ ಬಾರಿ ಪ್ರೊ|| ಸುದರ್ಶನರೂ ನಾನೂ ಜೊತೆಗೆ ಹೋಗಿ ಅವರೊಡನೆ ಆ ಎರಡು ದಿನ ಕಳೆದೆವು. ಅವರಿಬ್ಬರ ವಿಚಾರ ವಿನಿಮಯ ಕನಿಷ್ಠ ಪಕ್ಷ ಏಳೆಂಟು ತಾಸಾದರೂ ನಡೆಯಿತು. ಬೇಂದ್ರೆಯವರಿಗೆ ಇದರಿಂದ ತೃಪ್ತಿಯೂ ಆನಂದವೂ ಉಂಟಾದುವೆಂದು ಸ್ಪಷ್ಟವಾಗಿ ಕಾಣುತ್ತಿತ್ತು. ಇದಕ್ಕೂ ಮಿಗಿಲಾಗಿ ಪ್ರೊ|| ಸುದರ್ಶನರು ಬೇಂದ್ರೆಯವರ ಆತ್ಮೀಯ ಬಳಗದವರಾದರು.

ಇದಾದ ಕೆಲವು ವಾರಗಳ ನಂತರ ನಾನು ಪುನಃ ಧಾರವಾಡಕ್ಕೆ ಹೋಗುವವನಾಗಿದ್ದೆ. ಆಗ ಮತ್ತೆ ಭೇಟಿಯಾಗುವೆವೆಂದು ಪರಸ್ಪರ ಹೇಳಿಕೊಂಡ ಮೇಲೆ ಅವರು ಅತ್ಯಂತ ಪ್ರೀತಿಯಿಂದ ಅವರ ಪುಸ್ತಕವೊಂದರ ಮೇಲೆ ನಾವು ಮೊಟ್ಟಮೊದಲು ಸಂಧಿಸಿದ ಕಾಲವನ್ನು ಬರೆದು ನನಗೆ ಕೊಟ್ಟು ಅತ್ಯಂತ ಆದರದಿಂದ ಬೀಳ್ಕೊಟ್ಟರು. ಅದೇ ನನಗೆ ಅವರ ಕಡೆಯ ಸಂದರ್ಶನವಾಯಿತು.

ಕನ್ನಡಿಗರು ಈ ಪ್ರಕಟನೆಯ ಎಲ್ಲ ಪ್ರತಿಗಳೂ ಬೇಗನೆ ಖರ್ಚಾಗುವ ಅವಕಾಶವನ್ನು ಕಲ್ಪಿಸಿಕೊಟ್ಟು, ಪ್ರತಿಷ್ಠಾನದ ಸಂಕಲ್ಪ ನೆರವೇರಲು ಸಹಕರಿಸಬೇಕೆಂದು ವಿನಂತಿ.

ಬೆಂಗಳೂರು
೨೨–೨–೧೯೮೨

ನಿಟ್ಟೂರು ಶ್ರೀನಿವಾಸ ರಾವ್
ಅಧ್ಯಕ್ಷ

ಬಿನ್ನಹ

ವರಕವಿ ಡಾ|| ದ. ರಾ. ಬೇಂದ್ರೆಯವರು 26-10-1981ರಂದು ನಿಧನರಾದ ಕೂಡಲೆ ನಾಡಿನ ಕನ್ನಡ, ಇಂಗ್ಲಿಷ್, ಮರಾಠಿ ಪತ್ರಿಕೆಗಳಲ್ಲಿ ಪ್ರಖ್ಯಾತ ಸಾಹಿತಿಗಳು, ರಾಜಕಾರಣಿಗಳು, ಪತ್ರಿಕಾಕರ್ತರು, ಸಂಘ ಸಂಸ್ಥೆಗಳು, ಮುಂತಾದವರೆಲ್ಲರೂ ದಿವಂಗತರ ವ್ಯಕ್ತಿಗುಣ, ಕಾವ್ಯದ ಹಿರಿಮೆ ಮತ್ತು ವೈಶಿಷ್ಟ್ಯ, ಕಾವ್ಯಗಾಯನದ ಗಾರುಡಿಗತನ ಇವನ್ನು ಕುರಿತು ಹೃದಯಸ್ಪರ್ಶಿಯಾಗಿ ಹೇಳಿಕೆಗಳನ್ನು ನೀಡಿದರು; ಲೇಖನಗಳನ್ನು ಬರೆದರು; ಶ್ರದ್ಧಾಂಜಲಿಯನ್ನು ಅರ್ಪಿಸಿದರು; ವರದಿಗಳನ್ನು ಪ್ರಕಟಿಸಿದರು; ಸಂಪಾದಕೀಯಗಳ ಮೂಲಕ ಗೌರವ ತೋರಿದರು; ನಿಧನ ಸ್ಥಳವಾದ ಬೊಂಬಾಯಿಯಿಂದ ಮೃತರ ಚಿತಾಭಸ್ಮವನ್ನು ಧಾರವಾಡದಲ್ಲೂ ಬೆಂಗಳೂರಿನಲ್ಲೂ ಪ್ರದರ್ಶನ ಮಾಡಿ ಅಂತ್ಯದರ್ಶನದ ಸಂಧಿಯನ್ನು ಕಳೆದುಕೊಂಡ ಜನರಿಗೆ ಕವಿಯ ದಿವ್ಯ ಸಂಸ್ಮರಣಕ್ಕೆ ಅವಕಾಶವನ್ನು ದಿವಂಗತರ ಬಂಧುಗಳು, ಅಭಿಮಾನಿಗಳು, ಕಲ್ಪಿಸಿಕೊಟ್ಟರು. ಪ್ರತಿಷ್ಠಾನವು ನಾಡಿನ ಶ್ರದ್ಧಾಂಜಲಿಯಲ್ಲಿ ವಿಶಿಷ್ಟ ರೀತಿಯಲ್ಲಿ ಭಾಗಿಯಾಗಬೇಕೆಂಬ ಉದ್ದೇಶದಿಂದ; ಹಾಗೂ ಈ ಎಲ್ಲ ಅವಿಸ್ಮರಣೀಯ ಸಂಗತಿಗಳನ್ನು ಒಂದೆಡೆ ಸಂಕಲಿಸಿ ಮುಂದಿನ ಪೀಳಿಗೆಯ ಜನ ನೆನಪಿನಲ್ಲಿ ಸದಾ ಉಳಿಸಿಕೊಳ್ಳುವ ಸಲುವಾಗಿ, ಕವಿಯ ವ್ಯಕ್ತಿತ್ವ ವಿಚಾರವಾಗಿ ಸಂಶೋಧನೆ ನಡೆಸಬೇಕೆನ್ನುವವರಿಗೆ ಸ್ವಲ್ಪ ಪ್ರಮಾಣದಲ್ಲಾದರೂ ಮಾಹಿತಿಯನ್ನು ದಾಖಲೆ ಇಡಬೇಕೆಂಬ ಉದ್ದೇಶದಿಂದ, ಈ ಕಿರು ಹೊತ್ತಿಗೆಯನ್ನು ಪ್ರಕಟಿಸಿದೆ.

ಡಾ|| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿಯ ಪರವಾಗಿ ಅದರ ಸಂಚಾಲಕರಾದ ಶ್ರೀ ಬಿ. ಎಸ್. ಗುಂಡೂರಾವ್ ಅವರು ರಾಜರತ್ನಂ ಅವರ ನೆನಪನ್ನು ಯಾವುದಾದರೂ ಸಾಹಿತ್ಯ ಕಾರ್ಯದ ಮೂಲಕ ಸ್ಥಾಯಿಯಾಗಿ ಮಾಡಬೇಕೆಂದು ಕೋರಿ 250 ರೂಪಾಯಿಗಳನ್ನು ದಾನ ಮಾಡಿರುತ್ತಾರೆ. "ಬೇಂದ್ರೆ ಸ್ಮೃತಿ"ಯ ಮುದ್ರಣದ ವೆಚ್ಚಕ್ಕಾಗಿ ಹೊಬಲಗನ್ನು ಬಳಸಿಕೊಳ್ಳುವ ಮೂಲಕ ಸಮಿತಿಯ ಆಶಯವನ್ನು ನೆರವೇರಿಸಬಹುದು ಎಂಬ ನಮ್ಮ ಸೂಚನೆಯನ್ನು ಮಾನ್ಯ ಮಾಡಿದ್ದಕ್ಕಾಗಿ ಸಮಿತಿಗೂ ಶ್ರೀ ಗುಂಡೂರಾವ್ ಅವರಿಗೂ ಪ್ರತಿಷ್ಠಾನ ಕೃತಜ್ಞತೆಯುಳ್ಳದ್ದಾಗಿದೆ. ಅಂತೆಯೇ, ಈಚೆಗೆ ಪ್ರತಿಷ್ಠಾನದ ಆಜೀವ ಸದಸ್ಯೆಯಾಗಿ ಸೇರಿರುವ ಕನ್ನಡ ಅಧ್ಯಾಪಿಕೆ ಶ್ರೀಮತಿ ಪ್ರಭಾವತಿ ವಿದ್ಯಾಶಂಕರ್ ಅವರು ಪ್ರತಿಷ್ಠಾನದ ಪ್ರಕಾಶನ ನಿಧಿಗೆಂದು 250 ರೂಪಾಯನ್ನು ಕೊಟ್ಟಿರುತ್ತಾರೆ. ಈ ಕೊಡುಗೆಯಿಂದಲೂ ಈ ಪುಸ್ತಿಕೆಯ ಪ್ರಕಟನೆಗೆ ನೆರವಾಗಿದೆ. ಇವರಿಗೂ ಪ್ರತಿಷ್ಠಾನ ಕೃತಜ್ಞವಾಗಿದೆ.

ನಾವು ಕೇಳಿದ ಕೂಡಲೆ ವಿಶೇಷ ಲೇಖನವನ್ನು ಬರೆದು ಕೊಟ್ಟ ಸನ್ಮಾನ್ಯ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ಎಂ. ವಿ. ಸೀ. ಅವರ ಲೇಖನವೂ ಈ ಪ್ರಕಟನೆಗೆಂದೇ ಬರೆದದ್ದು. ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ|| ಕೀರ್ತಿನಾಥ ಕುರ್ತಕೋಟಿ, ಇವರ ಲೇಖನಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲು ಒಪ್ಪಿಗೆ ನೀಡಿದ್ದಕ್ಕಾಗಿ ಮಾನ್ಯ ಲೇಖಕರಿಗೂ ಅವುಗಳನ್ನು ಮೊದಲು ಪ್ರಕಟಿಸಿದ್ದ ಕನ್ನಡಪ್ರಭ ಮತ್ತು ಪ್ರಜಾವಾಣಿ ಪತ್ರಿಕೆಗಳ ಸಂಪಾದಕರುಗಳಿಗೂ ನಮ್ಮ ಕೃತಜ್ಞತೆಯ ವಂದನೆಗಳು. ಶ್ರೀಮತಿ ಶಕುಂತಲಾ ನಾಯಿಕ ಅವರು ತಮ್ಮ ಮರಾಠಿ ಲೇಖನದ ಕನ್ನಡ ಅನುವಾದವನ್ನು ಸೇರಿಸಿಕೊಳ್ಳಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅವರಿಗೂ, ಲೇಖನದ ಅನುವಾದಿಕೆ ಶ್ರೀಮತಿ ತಾರಾ ದೀಕ್ಷಿತ್ ಅವರಿಗೂ ಕೇಳಿದೊಡನೆಯೆ ಅನುವಾದವನ್ನು ಕಳಿಸಿಕೊಟ್ಟ ಡಾ|| ಜಿ. ಎಸ್. ದೀಕ್ಷಿತ್ ಅವರಿಗೂ ನಾವು ಉಪಕೃತರು.

ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಲೇಖನಗಳನ್ನೂ ವರದಿಗಳನ್ನೂ ಯಥೋಚಿತವಾಗಿ ಸಂಯೋಜನೆ ಮಾಡಿ ಸಂಪಾದಿಸಿಕೊಟ್ಟ ಡಾ|| ಗೋ. ಅ. ಜಾಲಿಹಾಳರಿಗೂ, ಬೇಂದ್ರೆ ಜೀವನ-ಕೃತಿಸೂಚಿಯನ್ನು ಶ್ರಮವಹಿಸಿ ಸಿದ್ಧಮಾಡಿಕೊಟ್ಟ ಶ್ರೀ ನಾ. ಗೀತಾಚಾರ್ಯ ಅವರಿಗೂ ನಾವು ವಿಶೇಷ ಕೃತಜ್ಞರು.

ಪತ್ರಿಕಾ ಲೇಖನಗಳನ್ನೂ ವರದಿಗಳ ಪ್ರಸಕ್ತ ಅವತರಣಿಕೆಗಳನ್ನೂ ಬಳಸಿಕೊಳ್ಳಲು ಒಪ್ಪಿಗೆ ನೀಡಿದ, ಈ ಹೊತ್ತಿಗೆಯಲ್ಲಿ ಉಕ್ತವಾದ ಎಲ್ಲ ಪತ್ರಿಕೆಗಳ ಸಂಪಾದಕರಿಗೂ ನಾವು ಆಭಾರಿಗಳಾಗಿದ್ದೇವೆ.

ಹೊದಿಕೆಯ ಮೇಲಿನ ಬೇಂದ್ರೆಚಿತ್ರವನ್ನು ಪಡಿಯಚ್ಚು ಮಾಡಿಸಿಕೊಳ್ಳಲು ತಾವು ಪ್ರಸಿದ್ಧಿಸಿದ ಬೇಂದ್ರೆಫೋಟೋ ಚಿತ್ರವನ್ನು ಉಪಯೋಗಿಸಿಕೊಳ್ಳಲು ಒಪ್ಪಿಗೆ ಕೊಟ್ಟದ್ದಲ್ಲದೆ, ಪ್ರಸಿದ್ಧ ಕಲಾವಿದ ದಿ|| ಆರ್. ಎಸ್. ನಾಯ್ಡು ಅವರ ಬೇಂದ್ರೆಯವರ ಮೂರ್ತಿಶಿಲ್ಪದ ಹಾಗೂ ರೇಖಾಚಿತ್ರದ ಪಡಿಯಚ್ಚುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಎರವಲು ನೀಡಿದ ಬೆಂಗಳೂರು ಕ್ರೈಸ್ಟ್ ಕಾಲೇಜಿನ ಕನ್ನಡ ಸಂಘಕ್ಕೂ ನಮ್ಮ ಕೃತಜ್ಞತೆ ಸಲ್ಲುತ್ತದೆ.

ಈ ಪ್ರಕಟನೆಯನ್ನು ಅತ್ಯಲ್ಪ ಕಾಲದಲ್ಲಿ ಚೆನ್ನಾಗಿ ಅಚ್ಚುಮಾಡಿಕೊಟ್ಟಿರುವ ಶ್ರೀ ಲಕ್ಷ್ಮಿ ಪ್ರಿಂಟರ್ಸ್ ಅವರಿಗೂ ನಾವು ಕೃತಜ್ಞರು.

ಬೆಂಗಳೂರು-೧೯
ದುರ್ಮತಿ ಸಂ|| ಶಿವರಾತ್ರಿ
೨೨-೨-೧೯೮೨

ಎಂ. ವಿ. ಸೀತಾರಾಮಯ್ಯ
ಸಂಸ್ಥಾಪಕ ಕಾರ್ಯದರ್ಶಿ
ಮತ್ತು
ಅಧ್ಯಯನ ನಿರ್ದೇಶಕ


ಸಂಧ್ಯಾರಾಗ

ಕನ್ನಡದ ವಾಣಿಯಾ ವೀಣೆಯಾ ಝೇಂಕಾರ
  ಮಧುರ ರಾಗದ ಭಾವಗಳು ಗರಿಯೊಡನೆ
  ಕುಣಿಯುತ್ತ ನಲಿಯುತ್ತ ಹೊರಹೊಮ್ಮಲಾವೊಡನೆ,
ಬೇಂದ್ರೆ, ವಾಣಿಯನೊಲಿಸಿಕೊಂಡ ನಾಡಿನ ಕುವರ,
ನೀವು ಮೀಟಿದ ನಾಕುತಂತಿ-ನಾದ(ದ)ಲೀಲೆ
  ಎಲ್ಲರೆದೆ ಮುಟ್ಟಿತ್ತು ನಾಡನೇ ಕಟ್ಟಿತ್ತು
  ಕನ್ನಡ ನಾಡವರ ನರನರವ ತಟ್ಟಿತ್ತು;
ಅದು ಎಂಥ ಮೋಡಿಯೋ ನಿಮ್ಮ ಕಾವ್ಯಕಲೆ!
ಆದರೇನೆಲ್ಲ ಮುಖದಲು ನಡೆಯಲಿಲ್ಲ ಕಜ್ಜ;
  ದೂರ ಶ್ರೀಮಾತಾ; ನುಡಿಯುತ್ತಲಿದ್ದರೂ
  ಸಂಧ್ಯಾರಾಗ; ಗಮನಿಸಲಿಲ್ಲ. ಏನಾದರೂ
ಮಾಡುವೆವಲಾ ಸ್ವಾರ್ಥಕಾಗಿ ಮಾತ್ರ; ಅಜ್ಜ,
  ಹಕ್ಕಿ ಹಾರುತಿದೆ ನೋಡಿದಿರಾ? ಎನ್ನುತದರ
  ವಿರಾಡ್ರೂಪವನು ತೋರತೋರುತ ಹಾರಿದಿರಾ?

—ಸಾ. ಗೀತಾಚಾರ್ಯ

ಪರಿವಿಡಿ

ಬೇಂದ್ರೆ ಸ್ಮೃತಿ



ಅಂಬಿಕಾತನಯದತ್ತ

ಚೆಲುವ ಕನ್ನಡ ನಾಡಿನಲಿ ಹೊಸ ಹಾಡ ಹೊನಲ
ಚೆಲುವಿನಲಿ ಹರಿಯಿಸಿದ ಹೊಸ ಹಾಡ ಹರಿಕಾರ!
ಒಲವಿನಲಿ ಬರೆದೆ ನೀ 'ಗರಿ'–ಗರೀ ಹೊಸದೆನಲು
ಹಲವು ಲಯ–ಛಂದದಲಿ ಹೊಸ ಹಾಡ ಶ್ರೀಕಾರ!
ನೀ ಬರೆದ ಶ್ರೀಕಾರ ಶ್ರೀಮಾನ್ಯ–ಸ್ವೀಕಾರ,
ಆಯಿತು ನುಡಿಯೊಡತಿಗದು ಮೆಚ್ಚುಗೆಯ ಹೊಸ ಹಾರ!
ನರ್ತಿಸಿದಳದ ಧರಿಸಿ ಸಂತಸದಿ ಹಲವಾರು
ಹೊಸ ಛಂದ–ಸಂಗೀತ–ತಾಳದಲಿ ಜೋರ್ದಾರು!

'ಕುಣಿಯೋಣ ಬಾ' ಎಂಬೀ ಕುಣಿತದ ಕವಿಭಣಿತದ
ಕರೆಗೆ ಓಗೊಟ್ಟು ಓಡಿಬಂದಿತು ನಾಡ ಜನಪದ,
ಕುಣಿಯಿತು ನಾಡ ನುಡಿಯ ಗುಡಿಯು ದಾಂಗುಡುವಂತೆ!
ಸಸ್ಯಶಾಮಲ 'ಸಾಧನಕೇರಿ'ಯಿಂದ 'ಭಾವದಂತೆ
ದೇವ'ವರೆಗೆ ಕಾವ್ಯಾನುಭಾವ ಸೋಪಾನ–ಪಥ!
ಇವರ ಕವಿತೆಯ ಜೊತೆಗೆ ಮುನ್ನಡೆಯಿತು ನುಡಿಯ ರಥ.

—ಜಾ. ಗೋ.

ಮೊದಲ ಮಾತು

ಆಧುನಿಕ ಕನ್ನಡದ ಶ್ರೇಷ್ಠ ಕವಿಗಳಲ್ಲೊಬ್ಬರೂ, ನಮ್ಮ ಪ್ರತಿಷ್ಠಾನದ ಗೌರವ ಸದಸ್ಯರಲ್ಲೊಬ್ಬರೂ, ಭಾರತೀಯ ಜ್ಞಾನಪೀಠದ ಪ್ರಶಸ್ತಿಯನ್ನು ಪಡೆದ ಭಾರತದ ಉತ್ತುಂಗ ಸಾಹಿತಿಗಳಲ್ಲೊಬ್ಬರೂ ಆಗಿದ್ದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ಅಂಬಿಕಾತನಯದತ್ತ) ಅವರು ದಿನಾಂಕ ೨೬–೧೦–೧೯೮೧ರಂದು (ಭಾರತೀಯ ಪಂಚಾಂಗದ ಪ್ರಕಾರ ದುರ್ಮತಿ ಸಂ|| ಅಶ್ವಯುಜ ಬಹುಳ ಚತುರ್ದಶಿ, ಸೋಮವಾರ) ಬೊಂಬಾಯಿಯ ಹರಕಿಸನ್‌ದಾಸ್ ಆಸ್ಪತ್ರೆಯಲ್ಲಿ ನಿಧನರಾದರು. ಮರಣ–ಕಾಲಕ್ಕೆ ಶ್ರೀಯುತ ಬೇಂದ್ರೆಯವರಿಗೆ ೮೬ ವರುಷ ವಯಸ್ಸಾಗಿತ್ತು. 'ಅಂಬಿಕಾತನಯದತ್ತ' ಎಂಬ ಕಾವ್ಯನಾಮವನ್ನು ಧರಿಸಿದ್ದ ದ. ರಾ. ಬೇಂದ್ರೆಯವರು ತಮ್ಮ ನಿಜನಾಮದಲ್ಲಿಯೇ ಕರ್ನಾಟಕದಾದ್ಯಂತ ಮತ್ತು ಕರ್ನಾಟಕದಾಚೆ ಕೂಡ ಪರಿಚಿತರಾಗಿದ್ದರು, ಪ್ರಸಿದ್ಧರಾಗಿದ್ದರು. ೧೯೧೬ರ ಸುಮಾರಿಗೆ ಕನ್ನಡದಲ್ಲಿ ಸಾಹಿತ್ಯ ಕೃಷಿಯನ್ನು ಪ್ರಾರಂಭಿಸಿದ್ದ ಶ್ರೀ ಬೇಂದ್ರೆಯವರು ೧೯೩೨ರಲ್ಲಿ ಪ್ರಕಟವಾದ 'ಗರಿ' ಎಂಬ ತಮ್ಮ ಕವನಸಂಕಲನದಿಂದ 'ಕವಿ' ಎಂದು—'ವರಕವಿ' ಎಂದು—ಪ್ರಸಿದ್ಧ ರಾದರು. ಕಾವ್ಯ, ವಿಮರ್ಶೆ, ಚಿಂತನೆ, ಸಂಶೋಧನೆ, ನಾಟಕ, ವಿಡಂಬನ ಮುಂತಾದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಹಲವಾರು ಯಶಸ್ವಿ ಮತ್ತು ಪ್ರಭಾವಿ ಕೃತಿಗಳನ್ನು ಕನ್ನಡದಲ್ಲಿ ರಚಿಸಿದ ಶ್ರೀ ಬೇಂದ್ರೆಯವರು ಸವ್ಯಸಾಚಿ ಆಗಿದ್ದರಾದರೂ ಅವರ ಮುಖ್ಯ ಮತ್ತು ಬಹುಕಾಲ ನಿಲ್ಲುವ ಸಾಹಿತ್ಯಕ ಕೆಲಸ ನಡೆದದ್ದು ಕಾವ್ಯಕ್ಷೇತ್ರದಲ್ಲಿಯೇ—ಅದರಲ್ಲೂ ಭಾವಗೀತಗಳ ಕ್ಷೇತ್ರದಲ್ಲಿಯೇ—ಎಂದು ನಾವು ನಿರ್ವಿವಾದವಾಗಿ ಹೇಳಬಹುದು. ಬೇಂದ್ರೆಯವರು ನಮ್ಮ ಕಾಲದ ಮತ್ತು ನಮ್ಮ ದೇಶದ (ಇಡೀ ಭಾರತ ದೇಶದ) ಅತ್ಯಂತ ಉಚ್ಚ ಮತ್ತು ಸೂಕ್ಷ್ಮ (subtle) ಭಾವಗೀತಕಾರ—(lyricist)—ಆಗಿದ್ದರಷ್ಟೇ ಅಲ್ಲ, ಕೆಲವು ಪರಿಣತ ಕಾವ್ಯವಿಮರ್ಶಕರ ಪ್ರಕಾರ ಇಡೀ ಪ್ರಪಂಚದ ಉಚ್ಚತಮ ಮತ್ತು ಸೂಕ್ಷ್ಮತಮ ಭಾವಗೀತಕಾರರಲ್ಲೂ ಒಬ್ಬ ರಾಗಿದ್ದರು

ಕಂಬನಿ ಮತ್ತು ಶ್ರದ್ಧಾಂಜಲಿ

ಶ್ರೀ ಬೇಂದ್ರೆಯವರು ದಿನಾಂಕ ೨೬–೧೦–೧೯೮೧ರಂದು ದಿವಂಗತರಾದ ಕೂಡಲೆ ನಮ್ಮ ನಾಡಿನ ಅನೇಕಾನೇಕ ಸಂಘ–ಸಂಸ್ಥೆಗಳು, ವೃತ್ತಪತ್ರಿಕೆಗಳು ಮತ್ತು ಸಾಹಿತ್ಯ–ಪತ್ರಿಕೆಗಳು ಅವರ ನಿಧನದ ವಾರ್ತೆಯನ್ನು ಅತ್ಯಂತ ದುಃಖ ಪೂರ್ವಕವಾಗಿ ಪ್ರಕಟಿಸಿದವು ಹಾಗೂ ನಮ್ಮ ನಾಡು–ನುಡಿಗಳಿಗೆ ಶ್ರೀ ಬೇಂದ್ರೆ ಯವರು ಸಲ್ಲಿಸಿದ ಬಹುಮುಖವಾದ ಸೇವೆಯನ್ನು ಕೊಂಡಾಡಿದವು. ಕರ್ನಾಟಕದ ರಾಜ್ಯಪಾಲರಾದ ಶ್ರೀ ಗೋವಿಂದ ನಾರಾಯಣ, ಮುಖ್ಯಮಂತ್ರಿಗಳಾದ ಶ್ರೀ ಆರ್. ಗುಂಡೂರಾವ್, ವಿದ್ಯಾ ಮಂತ್ರಿಗಳಾದ ಶ್ರೀ ಶಂಕರರಾವ್ ಮತ್ತು ಇತರ ರಾಜ್ಯ

ಮಂತ್ರಿಗಳು, ಕೇಂದ್ರ ಸರ್ಕಾರದ ನೌಕಾಯಾನ ಮತ್ತು ಸಾರಿಗೆ ಮಂತ್ರಿ ಶ್ರೀ ವೀರೇಂದ್ರ ಪಾಟೀಲ್, ಆರೋಗ್ಯ ಮಂತ್ರಿ ಶ್ರೀ ಶಂಕರಾನಂದ, ವಾರ್ತಾ ಮತ್ತು ಪ್ರಸಾರಮಂತ್ರಿ ಶ್ರೀ ವಸಂತ ಸಾಠೆ ಮುಂತಾದವರು; ಸರ್ವಶ್ರೀ ಮಾಸ್ತಿ, ಕುವೆಂಪು, ಶಂ. ಬಾ ಜೋಶಿ, ವಿ. ಕೃ. ಗೋಕಾಕ, ಪು. ತಿ. ನರಸಿಂಹಾಚಾರ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ. ವಿ. ಸೀತಾರಾಮಯ್ಯ, ಸಿದ್ಧಯ್ಯ ಪುರಾಣಿಕ, ಜಿ. ಎಸ್. ಶಿವರುದ್ರಪ್ಪ. ಬೆಟಗೇರಿ ಕೃಷ್ಣಶರ್ಮ, ಗೋಪಾಲಕೃಷ್ಣ ಅಡಿಗ, ಹಾ. ಮಾ. ನಾಯಕ ಮುಂತಾದ ನಾಡಿನ ಅನೇಕ ಗಣ್ಯ ಸಾಹಿತಿಗಳು ಕವಿ ಬೇಂದ್ರೆಯವರ ನಿಧನಕ್ಕಾಗಿ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತ ಸಾಹಿತ್ಯಕ್ಷೇತ್ರಕ್ಕೆ ಶ್ರೀ ಬೇಂದ್ರೆಯವರು ಸಲ್ಲಿಸಿದ ಅಮೋಘ ಸೇವೆಯನ್ನು ಶ್ಲಾಘಿಸಿದರು.

ರಾಜ್ಯಪಾಲ ಶ್ರೀ ಗೋವಿಂದ ನಾರಾಯಣ

ಕವಿ ಬೇಂದ್ರೆಯವರ ನಿಧನಕ್ಕೆ ತಮ್ಮ ಸಂತಾಪವನ್ನು ಸೂಚಿಸುತ್ತ ಕರ್ನಾಟಕದ ರಾಜ್ಯಪಾಲರಾದ ಶ್ರೀ ಗೋವಿಂದ ನಾರಾಯಣ ಅವರು "ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಡಾ|| ದ. ರಾ. ಬೇಂದ್ರೆಯವರ ನಿಧನದಿಂದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತುಂಬಲಾರದ ನಷ್ಟವುಂಟಾಗಿದೆ" ಎಂದು ಹೇಳಿದರು. ಶ್ರೀ ಗೋವಿಂದ ನಾರಾಯಣ್ ಹಾಗೂ ಅವರ ಪತ್ನಿ ಶ್ರೀಮತಿ ಚಂದ್ರಾ ಗೋವಿಂದ ನಾರಾಯಣ್ ಅವರು ಡಾ|| ಬೇಂದ್ರೆಯವರ ಕುಟುಂಬಕ್ಕೆ ತಮ್ಮ ಶೋಕವನ್ನು ಸೂಚಿಸಿದರು.

ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್

ಕವಿ ಬೇಂದ್ರೆಯವರನ್ನು "ಕನ್ನಡ ಸಾರಸ್ವತ ಲೋಕದ ಮಾಂತ್ರಿಕ" ಎಂದು ವರ್ಣಿಸಿದ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಆರ್. ಗುಂಡೂರಾವ್ ಅವರು "ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ಡಾ|| ದತ್ತಾತ್ರಯ ರಾಮಚಂದ್ರ ಬೇಂದ್ರೆಯವರ ನಿಧನದಿಂದ ಕರ್ನಾಟಕವು ಈ ಶತಮಾನದ ಉನ್ನತ ಕವಿವರ್ಯರನ್ನು ಕಳೆದುಕೊಂಡಿದೆ" ಎಂದು ಬೇಂದ್ರೆಯವರ ನಿಧನಕ್ಕೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು. "ಮಹಾನ್ ಕವಿ, ವಿಮರ್ಶಕ, ಚಿಂತನಶೀಲ ಹಾಗೂ ಭಾಷಣಕಾರರಾಗಿದ್ದ ವರಕವಿ ಬೇಂದ್ರೆಯವರ ವ್ಯಕ್ತಿತ್ವ ಕನ್ನಡ ಕಾವ್ಯಲೋಕದಲ್ಲಿ ಅಳಿಸಲಾರದ ಪ್ರಭಾವ ಬೀರಿದೆ" ಎಂದು ಮುಖ್ಯಮಂತ್ರಿಗಳು ಬೇಂದ್ರೆಯವರ ಗುಣಗಾನ ಮಾಡಿದರು. "ಬೇಂದ್ರೆಯವರು ಇಂದು ದೈಹಿಕವಾಗಿ ನಮ್ಮನ್ನು ಅಗಲಿದ್ದರೂ ಅವರು ಕನ್ನಡ ಸಾರಸ್ವತ ಲೋಕದಲ್ಲಿ ಅಮರರಾಗಿದ್ದಾರೆ" ಎಂದು ಹೇಳುತ್ತ ಮುಖ್ಯಮಂತ್ರಿಗಳು ದಿವಂಗತ ಬೇಂದ್ರೆಯವರ ಕುಟುಂಬಕ್ಕೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ಸರ್ಕಾರಿ ರಜೆ

ವರಕವಿ ಡಾ|| ದ. ರಾ. ಬೇಂದ್ರೆಯವರ ನಿಧನದ ಪ್ರಯುಕ್ತ ಕರ್ನಾಟಕ ರಾಜ್ಯ ಸರ್ಕಾರವು ಅಕ್ಟೋಬರ ೨೭, ೧೯೮೧ರಂದು ತನ್ನ ಎಲ್ಲ ಕಚೇರಿಗಳಿಗೆ ಒಂದು ದಿನದ ರಜೆಯನ್ನು ಘೋಷಿಸಿತು.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಶ್ರದ್ಧಾಂಜಲಿ

ಕವಿವರ್ಯ ಬೇಂದ್ರೆಯವರು ನಿಧನರಾದ ದಿನವೇ, ಎಂದರೆ ೨೬–೧೦–೧೯೮೧ರಂದೇ, ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಪರವಾಗಿ ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿಗಳಾದ ಪ್ರೊ|| ಎಂ. ವಿ. ಸೀತಾರಾಮಯ್ಯನವರು ಕವಿವರ್ಯರಿಗೆ ಈ ಕೆಳಗಿನಂತೆ ಪ್ರತಿಷ್ಠಾನದ ಶ್ರದ್ಧಾಂಜಲಿಯನ್ನು ಸಲ್ಲಿಸಿದರು :

"ನವೋದಯ ಕಾವ್ಯತ್ರಿಕೂಟಾಚಲದ ಶಿಖರಪ್ರಾಯರಲ್ಲಿ ಒಬ್ಬರಾಗಿದ್ದ ವರಕವಿ ಡಾ|| ದತ್ತಾತ್ರಯ ರಾಮಚಂದ್ರ ಬೇಂದ್ರೆ—'ಅಂಬಿಕಾತನಯದತ್ತ'—ಅವರು ಇಂದು (26-10-1981) ಮಧ್ಯಾಹ್ನ ಮುಂಬಯಿಯಲ್ಲಿ ನಿಧನರಾದ ವಾರ್ತೆ ಸಾರಸ್ವತ ಲೋಕವನ್ನು ಅಪಾರ ದುಃಖದಲ್ಲಿ ಮುಳುಗಿಸಿಬಿಟ್ಟಿದೆ. ಒಬ್ಬ ಶ್ರೇಷ್ಠ ಕವಿಗೆ ತನ್ನ ತಾಯ್ನಾಡಿನಲ್ಲಿ ಸಲ್ಲಬಹುದಾಗಿದ್ದ ಎಲ್ಲ ಗೌರವಗಳಿಗೂ ಪ್ರಶಸ್ತಿಗಳಿಗೂ ಪಾತ್ರರಾಗಿ ಆದರ್ಶಪ್ರಾಯವಾದ ಗೃಹಸ್ಥಜೀವನವನ್ನೂ ಉನ್ನತವಾದ ಕವಿಜೀವನವನ್ನೂ ನಡೆಸಿದ ಪುಣ್ಯಜೀವಿ ಅವರು. ಶಿಷ್ಟ ಕಾವ್ಯಕ್ಕೆ ಜಾನಪದ ಧಾತು–ಧಾಟಿಗಳನ್ನು ಧಾರೆಯೆರೆದು, ಅನನುಕರಣೀಯವಾದ ಕಾವ್ಯಶೈಲಿಯ ಪ್ರವರ್ತಕರಾಗಿ, ತಮ್ಮ ಕಾವ್ಯಗಾಯನದ ಗಾರುಡಿವಿದ್ಯೆಯಿಂದ ಪಂಡಿತ-ಪಾಮರ ಶ್ರೋತೃಸಮಾಜವನ್ನು ಮಂತ್ರಮುಗ್ಧವನ್ನಾಗಿ ಮಾಡಿದ ಬೇಂದ್ರೆಯವರಂಥ ಕವಿ ಬಹುಶಃ ಹಿಂದೆ ಹುಟ್ಟಿಲ್ಲ, ಮುಂದೆ ಹುಟ್ಟಲಿಕ್ಕಿಲ್ಲ. ಭೃಂಗದ ಬೆನ್ನೇರಿಬಂದ, ನಾದಲೀಲಾ-ವಿನೋದಿಯಾದ ಅವರ ಕಾವ್ಯಕಿನ್ನರಿ ಕನ್ನಡಿಗರ ಕರ್ಣರಸಾಯನವಾಗುವ ಭಾಗ್ಯ ಇನ್ನಿಲ್ಲವಾದರೂ ಅವರ ಹೃನ್ಮನಗಳಲ್ಲಿ ಸದಾ ಮೊರೆಯುತ್ತಿರುವುದು.

"ಬಿ ಎಂ ಶ್ರೀ.ಯವರಲ್ಲಿ ಅಪಾರ ಗೌರವವನ್ನು ಇಟ್ಟಿದ್ದ ಅವರು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗೌರವ ಸದಸ್ಯರಾಗಿರಲು ಒಪ್ಪಿ ಅದರ ಗೌರವ–ಪ್ರತಿಷ್ಠೆಗಳನ್ನು ಹೆಚ್ಚಿಸಿದ್ದರು. ಅವರ ನಿಧನದಿಂದ ಪ್ರತಿಷ್ಠಾನಕ್ಕೆ ತುಂಬಲಾಗದ ನಷ್ಟವಾಗಿದೆ. ಕಾವ್ಯಯೋಗದಿಂದ ತನ್ನ ಮುಕ್ತಿಯನ್ನು ಸಾಧಿಸಿಕೊಂಡಿರುವ ಕವಿವರೇಣ್ಯನಿಗೆ ಸದ್ಗತಿ ಕೋರುವುದು ಕೇವಲ ಔಪಚಾರಿಕ. ಕನ್ನಡ ಲೋಕದ ದುಃಖದಲ್ಲಿ ತಾನೂ ಭಾಗಿಯಾಗಿ ಪ್ರತಿಷ್ಠಾನ ತನ್ನ ಕಂಬನಿ ಕಾಣಿಕೆಯನ್ನು ದಿವಂಗತರ ನೆನಪಿಗೆ ಸಲ್ಲಿಸಬಯಸುತ್ತದೆ."

ಆ ರಾ ಧ ನ

– ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್

ಈಗ ಎರಡು ತಿಂಗಳ ಹಿಂದೆ ದಿವಂಗತರಾದ ಶ್ರೀ ದ. ರಾ. ಬೇಂದ್ರೆಯವರು ನಮ್ಮ ಸಾಹಿತ್ಯದ ಹೊಸ ಯುಗದ ಕವಿಗಳಲ್ಲಿ ಅತ್ಯಂತ ಶ್ರೇಷ್ಠರಾದ ಹಿರಿಯರ ಪಂಕ್ತಿಯಲ್ಲಿ ಒಬ್ಬರು. ಮನೆತನ ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದು. ಇವರ ಹಿರಿಯರು ಕೆಲವು ದಶಕಗಳ ಹಿಂದೆ ಕರ್ಣಾಟಕಕ್ಕೆ ಬಂದು ನೆಲಸಿರಬೇಕು. ಇವರ ತಂದೆ ಶ್ರೀ ರಾಮಚಂದ್ರ ಬೇಂದ್ರೆ ಶಿರಹಟ್ಟಿಯಲ್ಲಿ ಇದ್ದರು. ನಮ್ಮ ಕವಿ ದತ್ತಾತ್ರೇಯ ಹುಟ್ಟಿದ್ದು ಆ ಊರಿನಲ್ಲಿ. ಚಿಕ್ಕಂದಿನಲ್ಲೆ ತಂದೆ ತೀರಿಕೊಂಡು ತಾಯಿ ಮಗುವಿನೊಡನೆ ಧಾರವಾಡದಲ್ಲಿದ್ದ ತನ್ನ ತಾಯಿಯ ಮನೆಗೆ ಬಂದರು. ದತ್ತಾತ್ರೇಯ ಧಾರವಾಡದಲ್ಲಿ ಬೆಳೆದ. ವಿದ್ಯಾಭ್ಯಾಸ ಕ್ರಮವಾಗಿ ನಡೆದು ಬಿ. ಎ. ಪರೀಕ್ಷೆಯ ಮಟ್ಟವನ್ನು ಮುಟ್ಟಿತು. ಈ ವೇಳೆಗೇ ತರುಣನಿಗೆ ತನ್ನಲ್ಲಿ ಕಾವ್ಯಶಕ್ತಿ ಇದೆ ಎನ್ನುವುದು ಕಂಡಿತ್ತು. ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬೇಂದ್ರೆ ಧಾರವಾಡದ ಒಂದು ವಿದ್ಯಾಸಂಸ್ಥೆಯಲ್ಲಿ ಉಪಾಧ್ಯಾಯರಾದರು. ಆಗ ಧಾರವಾಡ ನಮ್ಮ ನಾಡುನುಡಿಗಳ ಪುನರುಜ್ಜೀವನದ ಉದ್ಯಮದ ಒಂದು ಕೇಂದ್ರವಾಗಿತ್ತು. ಹಿರಿಯ ತಲೆಮಾರಿನ ಹಲವರು ಪ್ರಮುಖರು ಸಾಹಿತಿಗಳಾಗಿ, ಪತ್ರಿಕಾಕರ್ತರಾಗಿ, ಸಮಾಜಸೇವಕರಾಗಿ, ಸಮಾಜಸುಧಾರಕರಾಗಿ, ಬಹುತೆರನ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ದುಡಿಯುತ್ತಿದ್ದರು ಈ ವಾತಾವರಣದಲ್ಲಿ ಬೆಳೆಯುತ್ತಿದ್ದ ಕವಿ ತನ್ನ ಕರ್ತವ್ಯವಾದ ಕೆಲಸದ ಜೊತೆಗೆ ತನ್ನ ಕಾವ್ಯರಚನೆಯ ಪ್ರವೃತ್ತಿಗೂ ಎಡೆ ಕೊಟ್ಟರು. ಬೇಂದ್ರೆಯವರ ಕಾವ್ಯಸ್ಫೂರ್ತಿ ಅವರ ವ್ಯಕ್ತಿತ್ವದ ಮೂಲದ ಸೆಲೆಗಳಲ್ಲಿ ಒಂದು. ತರುಣ ಸ್ವಭಾವವಾಗಿ ಜೊತೆಯ ಜನರೊಡನೆ ಬೆರೆತು ಬಾಳುವಾತ. ಇದರ ಫಲವಾಗಿ ಧಾರವಾಡದಲ್ಲಿ ಇವರ ಸುತ್ತ 'ಗೆಳೆಯರ ಬಳಗ' ಎಂಬ ಹೆಸರಿನಿಂದ ಸಾಹಿತಿಗಳ ಕೂಟ ಒಂದು ರೂಪುಗೊಂಡಿತು ನಮ್ಮ ಕವಿ ಗುಂಪಿನ ಪ್ರಮುಖನಾಗಿ ತಾವೂ ಕೃತಿಗಳನ್ನು ರಚಿಸಿದರು, ಜೊತೆಯ ತರುಣರನ್ನು ಲೇಖಕರಾಗಲು ಪ್ರೇರೇಪಿಸಿದರು.

ಬೇಂದ್ರೆಯವರ ಮೊದಲ ಕವಿತೆಗಳಲ್ಲಿ ಒಂದಾದ 'ಬೆಳಗು' ಎಂಬ ಕೃತಿ ನನ್ನ ಗಮನಕ್ಕೆ ಬಂದ ತೆರನನ್ನು ಈ ಮುನ್ನ ಬೇರೆ ಸಂದರ್ಭಗಳಲ್ಲಿ ನಾನು ಹೇಳಿದ್ದೇನೆ; ಆ ಕವಿತೆ ಹಾಗೆ ನನ್ನನ್ನು ಆಕರ್ಷಿಸಿದ್ದು ಏಕೆ ಎನ್ನುವುದನ್ನು ವಿವರಿಸಿದ್ದೇನೆ; ಹತ್ತಿರ ಹತ್ತಿರ ತೀರಾ ಮೊದಲನೆಯದೆಂದೇ ಹೇಳಬಹುದಾದ ಈ ಕೃತಿ ತೀರಾ ಸುಲಭವಾಗಿ ಸಾಹಿತ್ಯದ ಅತ್ಯಂತ ಉನ್ನತಿಯ ಮಟ್ಟವನ್ನು ಮುಟ್ಟಿದೆ. ಇದರ ಕಾರಣ, ಕವಿ, ದಿನದ ಉದಯದ ಸುಖಕ್ಕೆ ಮನಕೊಟ್ಟು, ಆ ಸುಖದ ವಿವರಗಳನ್ನು ಬುದ್ಧಿಗೆ ತಂದುಕೊಂಡು ತಿಳಿಯುವುದು, ಅವನ್ನು ಚೆಲುವಾದ ಮಾತುಗಳಲ್ಲಿ

ಎದುರಾಳಿಗೆ ಮನಮುಟ್ಟುವಂತೆ ನುಡಿಯುವುದು. ಇದು ಕವಿಯಾದವನಿಗೆ ಇರಲೇ ಬೇಕಾದ ಊಹನ, ಕಲ್ಪನ, ಉಕ್ತಿಶಕ್ತಿಯ ವ್ಯಾಪಾರ. ಊಹನ ಕಲ್ಪನ ಉಕ್ತಿಶಕ್ತಿ ಎಷ್ಟು ಹೆಚ್ಚಾಗಿರುತ್ತದೊ ಕೃತಿ ಅಷ್ಟು ಶ್ರೇಷ್ಠ ಆಗುತ್ತದೆ. ಬೇಂದ್ರೆಯವರ ಊಹನ ಕಲ್ಪನ ಉಕ್ತಿಶಕ್ತಿ ಕವಿಲೋಕದ ಅತ್ಯುನ್ನತ ಮಟ್ಟದ ಊಹನ ಕಲ್ಪನ ಉಕ್ತಿಗಳಿಗೆ ಎಣೆಯಾದದ್ದೆಂದು ನನಗೆ ಕಂಡಿತು. ನಾನು ಒಮ್ಮೆ ನನ್ನ ಈ ಸೋದರ ಕವಿಯ ಊಹನ ಶಕ್ತಿ ಷೇಕ್ಸ್‌ಪಿಯರ್ ಕವಿಯ ಊಹನ ಶಕ್ತಿಗೆ ಸಮನಾಗಿದೆ ಎಂದು ಹೇಳಿದೆನು. ನನ್ನ ಮಾತಿನ ಅರ್ಥವನ್ನು ಗಮನಿಸದೆ ಒಬ್ಬ ಮಿತ್ರರು ನಾನು ಬೇಂದ್ರೆಯವರನ್ನು ಷೇಕ್ಸ್‌ಪಿಯರ್‌ಗೆ ಸಮಾನ ಕವಿಯೆಂದು ಹೇಳಿದೆ ಎಂದುಕೊಂಡರು; ನನ್ನ ಹೊಗಳಿಕೆ ಅತಿಯಾಯಿತು ಎಂದು ಹೇಳಿದರು. ನಾನು ಹೇಳಿದ್ದು ಕವಿಯ ಊಹನ ಶಕ್ತಿ ಯಾವ ಎತ್ತರದ್ದು ಎಂದು. ಬೇಂದ್ರೆಯವರನ್ನು ಷೇಕ್ಸ್‌ಪಿಯರನ್ನು ಹೋಲಿಸುವುದು ನನ್ನ ಉದ್ದೇಶ ಆಗಿರಲಿಲ್ಲ. 'ಬೆಳಗು' ಕವಿತೆಯನ್ನು ಕುರಿತು ನಾನು ತಳೆದ ಭಾವ ಈ ಸೋದರರು 1929ರಲ್ಲಿ ಬೆಳಗಾಂ ನಗರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ತಮ್ಮ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವಿತೆಯನ್ನು ಓದಿದಾಗ ಖಚಿತವಾಯಿತು. ಆ ಸಮ್ಮೇಳನದ ಅಧ್ಯಕ್ಷನಾಗಿದ್ದ ನಾನು ಆ ಕವಿತೆ ಪ್ರಪಂಚದಲ್ಲಿ ಯಾವುದೇ ಸಾಹಿತ್ಯದ ಅತ್ಯುತ್ತಮ ಕೃತಿಗಳ ಜೊತೆಗೆ ನಿಲ್ಲಬಲ್ಲ ಕವಿತೆ ಎಂದು ಹೇಳಿದೆನು. ಕವಿಗೋಷ್ಠಿಯ ಅಧ್ಯಕ್ಷರಾಗಿದ್ದ ನನ್ನ ಪೂಜ್ಯ ವಿದ್ಯಾಗುರು ಶ್ರೀ ಬಿ. ಎಂ. ಶ್ರೀಕಂಠಯ್ಯನವರು ನನ್ನ ಮಾತನ್ನು ಒಪ್ಪಿದರು.

'ಬೆಳಗು', 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯಗಳು ನಮ್ಮ ಜನರಿಗೆ ತುಂಬ ಚೆನ್ನಾಗಿ ಮನಮುಟ್ಟಿರುವ ಕೃತಿಗಳು. 'ಬೆಳಗು' ಒಂದು ಉದಯದ ಚೆಲುವನ್ನು ಗ್ರಹಿಸಿ ಅಸಾಧಾರಣ ಆದ ಕಾವ್ಯಕೌಶಲದಿಂದ ಅದಕ್ಕೆ ರೂಪು ಕೊಟ್ಟಿರುವಂತೆ 'ಹಕ್ಕಿ ಹಾರುತಿದೆ ನೋಡಿದಿರಾ' ಕೃತಿ ಲೋಕದ ವಿಸ್ತಾರವಾದ ಇತಿಹಾಸವನ್ನು ದಿಟ್ಟಿಸಿ ನೋಡಿ, ಆ ನೋಟದಿಂದ ಮೂಡುವ ಮುಖ್ಯ ಭಾವದ ಸಾರವನ್ನು ಸರಳ ಸಹಜ ಸುಂದರ ಆದ ಮಾತುಗಳಲ್ಲಿ ಹೊರಗೆಡಹಿದೆ. 'ಬೆಳಗು' ಕವಿತೆಯಂತೆ ಈ ಕವಿತೆಯೂ ಈ ಕವಿಯ ಚೇತನಕ್ಕೆ ಮಾತ್ರ ಸಾಧ್ಯವಾದದ್ದು. ಆಮೇಲಿನ ದಿನಗಳಲ್ಲಿ ಬೇಂದ್ರೆಯವರು ಅನೇಕ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಹತ್ತಾರು ಕೃತಿ ಶ್ರೇಷ್ಠ ಕೃತಿಗಳಾಗಿವೆ. ಹಲವಾರು, ಹಲವು ಗಮಕಿಗಳು ಆಕಾಶವಾಣಿಯಲ್ಲಿ, ನೂರಾರು ಸಭೆಗಳಲ್ಲಿ, ಹಾಡಿ ಹೇಳಿ, ಜನರಿಗೆ ಅತ್ಯಂತ ಪ್ರಿಯ ಪರಿಚಿತ ಕವನಗಳಾಗಿವೆ. ಒಬ್ಬ ಕವಿಯ ಕೃತಿ ಹೀಗೆ ಜನಪ್ರಿಯ ಆಗುವುದು ಆತನ ಕಾವ್ಯಶಕ್ತಿಯ ಪ್ರಾಪ್ತಿಯಂತೆಯೇ ಅವನಿಗೆ ಒಂದು ಭಾಗ್ಯ. ಬೇಂದ್ರೆ ಈ ಭಾಗ್ಯವನ್ನು ಐವತ್ತು ವರ್ಷಗಳಲ್ಲಿ ನಮ್ಮ ಶ್ರೇಷ್ಠ ಕವಿಗಳಲ್ಲಿ ಬೇರೆ ಯಾರಿಗೂ ದೊರೆಯದಷ್ಟು ಪಡೆದು ಸುಖಿಸಿದರು.

ಈ ವಾಕ್ಯವನ್ನು ಓದುವ ಮಿತ್ರರು ಯಾರೂ ಇದರ ಅರ್ಥವನ್ನು ತಪ್ಪಾಗಿ ತಿಳಿಯದಿರಲಿ ಎನ್ನುವುದಕ್ಕಾಗಿ ಎಚ್ಚರದ ಒಂದು ಮಾತನ್ನು ಇಲ್ಲಿ ವಿಜ್ಞಾಪಿಸುತ್ತೇನೆ. ಬೇಂದ್ರೆ ನಮ್ಮ ಇತರ ಶ್ರೇಷ್ಠ ಕವಿಗಳಿಗಿಂತ ಶ್ರೇಷ್ಠರು ಎಂದು ನಾನು ಹೇಳುತ್ತಿಲ್ಲ. ಈಗ ನನ್ನ ಮನಸ್ಸಿದಲ್ಲಿರುವುದು ಜನಪ್ರಿಯತೆ; ಶ್ರೇಷ್ಠತೆ ಅಲ್ಲ. ಶ್ರೇಷ್ಠರಾದ ಕವಿಗಳು ಇಬ್ಬರನ್ನು ಕಂಡರೆ ಅವರಲ್ಲಿ ಯಾರು ಹೆಚ್ಚು ಎಂದು ತೂಕ ಮಾಡುವುದಕ್ಕೆ ಹೋಗುವುದು ಬೇಡ, ಇಬ್ಬರು ಇಂಥ ಶ್ರೇಷ್ಠ ಕವಿಗಳು ಇದ್ದಾರಲ್ಲ ಎಂದು ಸಂತೋಷ ಪಡಿ. ಎಂದು ಜರ್ಮನ್ ಕವಿ ಗಯಟೆ ಒಮ್ಮೆ ಹೇಳಿದರು. ಸಮಕಾಲೀನ ಕವಿಗಳ ವಿಷಯದಲ್ಲಿ ಆ ಸೂತ್ರವನ್ನು ಪಾಲಿಸುವುದು ವಿಮರ್ಶೆಯಲ್ಲಿ ಸೂಕ್ತ, ಹಾಗೆಯೇ ಕ್ಷೇಮ.

'ಬೆಳಗು', 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತೆಗಳು ಲೋಕಸಾಹಿತ್ಯದ ಅತ್ಯುತ್ತಮ ಕೃತಿಗಳ ಜೊತೆಗೆ ನಿಲ್ಲಬಲ್ಲವು ಎಂದು ಹೇಳಿದ್ದಾಗಿದೆ. ಇವನ್ನು ರಚಿಸಿದ ಕವಿಯ ಕವಿತೆ ಇನ್ನೂ ಹಲವು ಇದೇ ಉನ್ನತ ಮಟ್ಟದ ಕೃತಿಗಳಾಗಿವೆ. ಒಡನೆ ನೆನಪಿಗೆ ಬರುವುವೆಂದರೆ 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ', 'ಸಚ್ಚಿದಾನಂದ', 'ಪಾತರಗಿತ್ತಿ ಪಕ್ಕ' ಇವು ಒಂದೊಂದನ್ನು ಕುರಿತೂ ಅವು ಏಕೆ ಅಷ್ಟು ಶ್ರೇಷ್ಠ ಎಂದು ತಿಳಿಸಲು ನಾಲ್ಕು ಮಾತನ್ನು ಹೇಳಬಹುದು. ಆ ಮಾತನ್ನು ನಾನು ಈಗ ಹೇಳುವುದಿಲ್ಲ. ನನ್ನ ಈ ವಾಕ್ಯಗಳನ್ನು ಓದುವ ಮಿತ್ರರು, ಅದರಲ್ಲಿಯೂ ಕಿರಿಯ ವಯಸ್ಸಿನ ಕಾವ್ಯಪ್ರೇಮಿಗಳು, ಈ ಪದ್ಯಗಳನ್ನು ಮತ್ತೆ ಓದಿ, ಅವು ಶ್ರೇಷ್ಠ ಹೌದೇ ಎಂದು ಯೋಚಿಸಿ, ಹೌದು ಎಂದು ಕಂಡರೆ ಏಕೆ ಶ್ರೇಷ್ಠ ಎಂದು ವಿಚಾರ ಮಾಡಬೇಕು ಎಂದು ನನ್ನ ವಿಜ್ಞಾಪನೆ. ಕಾವ್ಯದ ಅನುಭವದಲ್ಲಿ ಮತ್ತೊಬ್ಬರ ಮೆಚ್ಚುಗೆಯನ್ನು ಒಪ್ಪುವುದಕ್ಕಿಂತ ಸ್ವತಃ ಗುಣವನ್ನು ಬೆದಕಿ ಸುಖಿಸಿ ಮೆಚ್ಚುವುದು ಹೆಚ್ಚಿನ ಶ್ರೇಯಸ್ಸಿನ ಮಾರ್ಗ. ಹೀಗೆ ವಿಚಾರ ಮಾಡಿದರೆ ಒಂದು ಸಂಗತಿ ಮನಮುಟ್ಟುತ್ತದೆ: ಬೇಂದ್ರೆಯವರ ಉನ್ನತ ಕವಿತೆಗಳಲ್ಲಿ ಒಂದು ಅಕ್ಷರವನ್ನು ಬಿಟ್ಟರೂ ಒಂದು ಅಕ್ಷರವನ್ನು ಸೇರಿಸಿದರೂ ಕೃತಿಯ ರೂಪು ಕೆಡುತ್ತದೆ. ಬೇಂದ್ರೆ ಹೇಗೆ ಬರೆದರೊ ಹಾಗೆಯೇ ಕೃತಿಯನ್ನು ಸ್ವೀಕರಿಸಬೇಕು. ಆಗ ಕೃತಿಯ ನಿರ್ದಿಷ್ಟ ಸೌಂದರ್ಯ ಪೂರ್ಣವಾಗಿ ಮನದಟ್ಟಾಗುತ್ತದೆ.

ಅಕ್ಷರ ಸೇರಬಾರದು ಏಕೆ ಎನ್ನುವುದು ತಿಳಿಯಲೆಂದು ಒಂದು ಉದಾಹರಣೆಯನ್ನು ಹೇಳುತ್ತೇನೆ. 'ಪಾತರಗಿತ್ತಿ ಪಕ್ಕ' ಪದ್ಯವನ್ನು ಹೊಗಳಿದ ಒಬ್ಬ ಮಿತ್ರರು ಅದನ್ನು ಪ್ರತಿ ಮಾಡುತ್ತಾ ಕೊನೆಯ ಪಂಕ್ತಿಯನ್ನು 'ನಂದನ ವನದ ತೋಟ' ಎಂದು ಬರೆದರು. ಮೂಲದ ಪದಗಳು 'ನಂದನದ ತೋಟ'. ಮಿತ್ರರು ಸೇರಿಸಿದ 'ವನ' ಪದ ಪಂಕ್ತಿಯ ಚೆಲುವಿಗೆ ಎಂಥ ಭಂಗವನ್ನು ತಂದಿದೆ ಎನ್ನುವುದು ಸ್ಪಷ್ಟ. ಕೃತಿಯನ್ನು ಹೀಗೆ ಪ್ರತಿ ಮಾಡಿದವರು ಪದ್ಯವನ್ನು ಮತ್ತೆ ಓದಿದರೆ ಇದನ್ನು ತಾವೇ ಕಂಡುಕೊಂಡಾರು.

ಅನುಚಿತ ಎಂಬ ಭಯ ಇದ್ದೂ, ಇಲ್ಲಿ ಒಂದು ಮಾತನ್ನು ನಾನು ಅರಿಕೆ ಮಾಡಬೇಕು. ಬೇಂದ್ರೆ ತಮ್ಮ ಕವಿತೆಗಳನ್ನು ತಾವೇ ಸಭೆಗಳಿಗೆ ಓದಿ ಹೇಳುತ್ತಿದ್ದರು. ಆಗ ಆ ಕೃತಿಗಳಿಂದ ಸಭೆಗಳ ಮೇಲೆ ಆದ ಪರಿಣಾಮ ವಿಲಕ್ಷಣವಾದದ್ದು. ಈಚೆಗೆ ಇತರರು ಇದೇ ಕೃತಿಗಳನ್ನು ತಮಗೆ ತಿಳಿದಂತೆ ಬಹು ಚೆನ್ನಾಗಿ ಹಾಡಿದ್ದಾರೆ. ಆದರೆ ಈ ಹಾಡುಗಾರಿಕೆ ಎಂದೂ ಕವಿಯ ಸ್ವಂತ ಹಾಡಿನ ಮೋಡಿಯನ್ನು ಸಾಧಿಸಿಲ್ಲ.

ಬೇಂದ್ರೆಯವರನ್ನು ಕುರಿತ ವಿಶೇಷ ಸಂಚಿಕೆಗಾಗಿ ಈ ನಾಲ್ಕು ಮಾತನ್ನು ಹೇಳಿದ್ದೇನೆ. ಇವು ಕವಿಯನ್ನು ಕುರಿತ ಅಕ್ಕರೆಯ ಮಾತು. ಅವರ ಕೃತಿಯನ್ನು ಕುರಿತ ವಿಮರ್ಶೆ ಅಲ್ಲ, ವಿವೇಚನೆ ಅಲ್ಲ. ಶ್ರೇಷ್ಠನಾದ ಕವಿಗೆ ಒಬ್ಬ ಸೋದರ ನಡೆಸಿರುವ ಆರಾಧನದ ಕ್ರಮವೊಂದು ಅಷ್ಟೆ.

ಇಂಥ ಕವಿಯನ್ನು ಪಡೆದದ್ದು ನಮ್ಮ ನಾಡುನುಡಿಗಳ ಭಾಗ್ಯ.

ಚಾರಣಕವಿ ಬೇಂದ್ರೆ

—ಪ್ರೊ॥ ಎಂ. ವಿ. ಸೀತಾರಾಮಯ್ಯ

ಡಾ॥ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ತೀರಿಕೊಂಡಾಗ ನನಗೆ ದುಃಖ ಎನಿಸಿದರೂ ದಿಗ್ಭ್ರಮೆ ಆಗಲಿಲ್ಲ ಮನಸ್ಸಿಗೆ ಆಘಾತ ಆಗಲಿಲ್ಲ; ಕನ್ನಡ ಲೋಕಕ್ಕೆ ಬಣ್ಣಬಣ್ಣದ ಬೆಳಕನ್ನು ನೀಡಿ, ಬೆಳಕಿನ ಹಬ್ಬದಂದು 'ಬೆಳಗ'ನ್ನು ಕಂಡು ಹಾಡಿದ ಕವಿ ಬೆಳಕಿನೊಂದಿಗೆ ಬೇಳಕಾದರು, ಎಂದುಕೊಂಡು ಸಮಾಧಾನವಾಯಿತು. ನನ್ನನ್ನು ಪ್ರೀತಿಯಿಂದ, ವಾತ್ಸಲ್ಯದಿಂದ ಕಾಣುತ್ತಿದ್ದ ಒಬ್ಬ ಅಣ್ಣ ಅಗಲಿಹೋದ ರಲ್ಲಾ, ನನ್ನ ಚೇತನಕ್ಕೆ ಒಂದು ಕಾಲದಲ್ಲಿ ಅಗತ್ಯವಾಗಿದ್ದ ಆಧ್ಯಾತ್ಮಿಕ ದೃಷ್ಟಿಯ ಅಗತ್ಯವನ್ನು ತೋರಿಕೊಟ್ಟು ಮಾರ್ಗದರ್ಶನ ಮಾಡಿದ ವ್ಯಕ್ತಿ ಇಲ್ಲವಾಗಿ ನಷ್ಟದ ಅನುಭವ ಆಯಿತು. ದೈವಚಿತ್ತ ಎಂದು ಸಮಾಧಾನಗೊಂಡೆ.

ಬೇಂದ್ರೆ ತೀವ್ರರೋಗಕ್ಕೆ ಒಳಗಾಗಿ ಶುಶ್ರೂಷಾಲಯದಲ್ಲಿ ಚಿಕಿತ್ಸೆ ಪಡೆದು, ಹೆಚ್ಚಿನ ಚಿಕಿತ್ಸೆಗಾಗಿ ಮುಂಬಯಿಗೆ ತೆರಳಿ ಅಲ್ಲಿ ವಿಶೇಷ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪತ್ರಿಕೆಗಳಲ್ಲಿ ಸುದ್ದಿಗಳು ಬರುಬರುತ್ತಿದ್ದಾಗಲೇ ಬೇಂದ್ರೆ ಇನ್ನು ನಮ್ಮ ನಡುವೆ ಬಹಳ ಕಾಲ ಇರುವುದಿಲ್ಲ ಎಂದು ಬೋಧೆಯಾಗಿತ್ತು. ಯಾಕೆ ಕೆಟ್ಟದ್ದನ್ನು ಬಗೆಯುತ್ತೀ ಎಲೆ ಖೋಡಿ ಮನವೇ ಎಂದು ನನ್ನ ಮನಸ್ಸನ್ನು ಛೇಡಿಸಿಕೊಂಡೆ. ಮನಸ್ಸು ಯಾವಾಗ ತಾನೆ ನಮ್ಮ ಅಂಕೆಯಲ್ಲಿರುತ್ತದೆ? ತನಗೆ ತೋರಿದಂತೆ ಮಂಗಾಟವಾಡುತ್ತದೆ. ಹಿಂದಿನದನ್ನು ಮುಕ್ಕಿ ಮೆಲುಕು ಹಾಕುತ್ತದೆ. ಮುಂದಿನ ದನ್ನು ತೆಕ್ಕೆಯಲ್ಲಿ ತಂದುಕೊಳ್ಳಲು ಹವಣಿಸುತ್ತದೆ. ಇಂಥ ಒಂದು ಮನಸ್ಸಿನ ಸ್ಥಿತಿಯಲ್ಲಿ, ಬೇಂದ್ರೆಯವರ ಕೊನೆ ಗಳಿಗಯ ಚಿತ್ರವನ್ನು ಮನಸ್ಸಿಗೆ ತಂದುಕೊಳ್ಳುತ್ತ ಅವರ ಅವಸಾನದ ಸುದ್ದಿಯನ್ನು ಸಮಾಧಾನಚಿತ್ತದಿಂದ ಸ್ವೀಕರಿಸುವ ಅನಿವಾರ್ಯ ಘಟನೆಗೆ ಹೊಂದಿಕೊಳ್ಳಲು ಸಿದ್ಧನಾಗುತ್ತಿದ್ದೆ. ಆದರೆ, ಕನ್ನಡ ಲೋಕ ಅವರ ನಿಧನ ವಾರ್ತೆಗೆ ಹೇಗೆ ಪ್ರತಿಕ್ರಿಯೆ ತೋರೀತು ಎನ್ನುವುದನ್ನು ಮಾತ್ರ ಮುಂಗಾಣಲು ನಾನು ಅಸಮರ್ಥನಾಗಿದ್ದೆ. ಒಮ್ಮಿಂದೊಮ್ಮೆ ಇಂಗ್ಲಿಷ್ ಕನ್ನಡ ಎಲ್ಲ ಪತ್ರಿಕೆಗಳಲ್ಲಿ ಸುದ್ದಿಯು ಸವಿವರವಾದ ವರದಿಗಳ, ಪ್ರಮುಖರ ಹೇಳಿಕೆಗಳ ಸುರಿಮಳೆಯನ್ನು ಕಂಡು ಎಲ್ಲ ಕನ್ನಡ ಜನದ ಮನಸ್ಸನ್ನು ಬೇಂದ್ರೆ ಹೇಗೆ ಸೂರೆಗೊಂಡಿದ್ದರು ಎಂಬ ಸತ್ಯ ಸಂಗತಿ ಮನದಟ್ಟಾಯಿತು. ಬೇಂದ್ರೆ ಇದ್ದಾಗ ಒಂದು ಬಗೆಯ ಪ್ರೀತಿ, ಗೌರವ; ಇಲ್ಲದಾಗಲೂ ಅದೇ ಪ್ರೀತಿ, ಗೌರವ; ರಾಮಚಂದ್ರ ಅಸ್ತಂಗತನಾದಾಗ ಆ ಭಾವ ಗಳ ಉಬ್ಬರ!

ಬೆಳಗಾಂ ಸಾಹಿತ್ಯ ಸಮ್ಮೇಳನದಲ್ಲಿ ಬೇಂದ್ರೆ ಅನನ್ಯ ರೀತಿಯಲ್ಲಿ ಕವಿತೆ ಹಾಡಿ ಶ್ರೋತೃಗಳ ಮೇಲೆ ಎಂಥ ಪರಿಣಾಮ ಬೀರಿದ್ದರು ಎಂಬ ಸಂಗತಿಯನ್ನು ಪೂಜ್ಯ ಮಾಸ್ತಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ಮನ ಮುಟ್ಟುವಂತೆ ಉಲ್ಲೇಖಿಸಿದ್ದಾರೆ.

ಬೇಂದ್ರೆ ಕವಿತೆಯನ್ನು ಹಾಡುವ ರೀತಿಯ ಬಗೆಗೆ ಅವರು ಉಪಯೋಗಿಸಿರುವ "ಗಾರುಡಿಗ", "ಮಾತಿನ ಮೋಡಿ" ಎಂಬ ಮಾತುಗಳು ಎಷ್ಟು ಉಚಿತ ಎನ್ನುವುದನ್ನು ಆ ಹಾಡಿಕೆಯನ್ನು ಕೇಳಿರುವವರೆಲ್ಲ ಒಪ್ಪಿಯಾರು ಅವರ ಹಾಡಿಕೆಯಲ್ಲಿ 'ಮೋಡಿ' ಮಾತ್ರವಲ್ಲ. 'ಗಾಡಿ'ಯೂ ಇತ್ತು. ಅವರಿಗೆ ಐವತ್ತು ತುಂಬಿದಾಗ ಒಂದು ಪದ್ಯ ಬರೆದು ಅವರಿಗೆ ಕಳಿಸಿದ್ದೆ. ಅದರಲ್ಲಿ, ಅವರನ್ನು 'ಪವಾಡಕಾರ' ಎಂದು ಕರೆದಿದ್ದೇನೆ. ಈ ಎಲ್ಲ ಮಾತು ಅವರೊಬ್ಬರಿಗೇ ಮೀಸಲು. ಬಲು ಹಿಂದೆ ಒಂದು ಕಾಲದಲ್ಲಿ, ಪ್ರಶಂಸಾಕಾವ್ಯವನ್ನು ಹಾಡುತ್ತಾ ಸಂಚರಿಸುತ್ತಿದ್ದ ಗಾಯಕರನ್ನು 'ಚಾರಣ'ರು ಎಂದು ಕರೆಯುತ್ತಿದ್ದರು. ಬೇಂದ್ರೆ ತಮ್ಮ ಕಾವ್ಯವನ್ನು ಜನ ಕರೆದಲ್ಲೆಲ್ಲ ಹೋಗಿ ಹಾಡುತ್ತಿದ್ದ ಕನ್ನಡ ಸಾರಸ್ವತ ಲೋಕದ ಹೊಸ ಯುಗದ ಚಾರಣ – ಕವಿ ಆಗಿದ್ದರು.

ಅವರ ಕಾವ್ಯಗಾಯನ ಸಹಜ ಮನೋಜ್ಞವಾದ ಜಾನಪದ ಧಾಟಿಯದು. ಎಲ್ಲ ಬಗೆಯ ರಚನೆಗಳನ್ನೂ ಈ ಧಾಟಿಯಲ್ಲಿ ಹಾಡಲು ಸಾಧ್ಯವಿಲ್ಲ. ಮಾತು, ಲಯ, ಎಲ್ಲ ಆ ಧಾಟಿಗೆ ತಕ್ಕವು ಆಗಿರಬೇಕು. ಶಿಷ್ಟಭಾಷೆಯು ಹಿಡಿತಕ್ಕೆ ಸಿಕ್ಕ ತಕ್ಕದ್ದಲ್ಲ ಆ ಧಾಟಿ. ಶಿಷ್ಟವಲ್ಲದ ಹಳ್ಳಿಯದೋ ಪಟ್ಟಣದ್ದೋ ಆದ ಆಡುನುಡಿಯ ಶಬ್ದದ್ರವ್ಯ ಅಥವಾ ಧಾತು ಆ ಧಾಟಿಗೆ ಒಗ್ಗಿಬಂದದ್ದು. ಉತ್ತರ ಕರ್ನಾಟಕದ ನೆಲದ ಸೊಗಡನ್ನು ಮೈಗೂಡಿಸಿಕೊಂಡು ಈ "ಸಾಜದ ತಿರುಳ್ಗನ್ನಡ"ವನ್ನು ಪರೀಘ ಸಾಹೇಬರು ತಮ್ಮ ತಾತ್ವಿಕ ಪದಗಳಿಗೆ ಆಗಲೇ ಯಶಸ್ವಿಯಾಗಿ ಬಳಸಿಕೊಂಡಿದ್ದರು. ಅವುಗಳ ಪ್ರಭಾವವೂ ಬೇಂದ್ರೆಯವರ ಮೇಲೆ ಆಗಿದ್ದೀತು. ಅದು ಹೇಗಾದರೂ ಇರಲಿ, ಬೇಂದ್ರೆಯವರು ತಮ್ಮ ಸಮಕಾಲದ ಕವಿಗಳಾದ ಪಂಜೆ, ಬಿ.ಎಂ.ಶ್ರೀ., ಗೋವಿಂದ ಪೈ, ಮಾಸ್ತಿ ಇವರ ಸರಳವಾದ ಹೊಸಗನ್ನಡದ ಶಿಷ್ಟಭಾಷಾಶೈಲಿಯ ಹೊಸಹಾದಿಯಲ್ಲಿ ನಡೆಯಲು ಇಷ್ಟಪಡದೆ ತಮ್ಮದೇ ಆದ ಹೊಸ ಹಾದಿಯನ್ನು ಹುಡುಕಿಕೊಳ್ಳುವ ಪ್ರಯತ್ನ ಮಾಡಿದರು. ಈ ಬಗೆಗೆ ಬೇಂದ್ರೆಯವರೇ ತಮ್ಮ 'ಗರಿ'ಯ (೧೯೩೨) ಮೊದಲನೆಯ ಆವೃತ್ತಿಗಾಗಿ ಬರೆದ ಮಾತು ಈ ಸಂದರ್ಭದಲ್ಲಿ ಗಮನಾರ್ಹ :

"ಈ ಕವನಗಳೊಳಗಿನ ಭಾಷಾಶೈಲಿಯ ಬಗೆಗೆ ಒಂದು ಮಾತು. ಇಲ್ಲಿ ತುಂಗಭದ್ರೆಯ ಉತ್ತರಾಪಥದ 'ದೇಸಿ'ಯ ಮಾರ್ಗವನ್ನು ಹುಡುಕುವ ಹಾಗೆಯೆ ಹುಟ್ಟಿಸುವ ಕುರುಹಿದೆ – ಹುಡುಕುವದಕ್ಕೆ ಹಾಯ್ದಾಡುವದರಿಂದಲೇ ಹಾದಿ ತಾನೆ ಹುಟ್ಟುವದು ? ಪಂಡಿತ ಪಾಮರ, ಬಡವ ಬಲ್ಲಿದ, ನಾಗರಿಕ ನಾಡಾಡಿ ಎಂಬ ಭೇದವನ್ನೆಲ್ಲಗಳೆದು ಕನ್ನಡ ಜೀವಾಳವು ಕನ್ನಡಿಗರಿಗಾಗಿ ಕನ್ನಡಿಸಲ್ಪಡಬೇಕಾಗಿದೆ. ಹಾದಿ ಬಹಳ ಸುತ್ತುಸುತ್ತು ಎನಿಸಬಹುದಾದರೂ ಎಲ್ಲವನ್ನೂ ಸುತ್ತದೆ ಗತಿಯಿಲ್ಲ. 'ದೇಶಿ'ಯ ಶಬ್ದಕೋಶಗಳು ಸಿದ್ಧವಾಗಬೇಕು; ಗಮಕಿಗಳು ಹಾಡಿ ತೋರಿಸಬೇಕು; ಸಹೃದಯರು ಅರ್ಥಮಾಡಿ ತೋರಿಸಬೇಕು; ರೂಢ ಶಾಸ್ತ್ರ–ಸಂಕುಚಿತ–ದೃಷ್ಟಿಯು ಹೋಗಬೇಕು; ಹೃದಯದ ವಿಶಾಲ ಮಾರ್ಗವು ತೆರೆಯಬೇಕು; ಮೈಸೂರು, ಧಾರವಾಡ, ಮಂಗಳೂರು ಎಂಬ ಭೇದವಡಗಿ ಹಳ್ಳಿಪಳ್ಳಿಗಳಲ್ಲಿಯೂ

ಹೆಣ್ಣು ಗಂಡು ಎಲ್ಲರೂ ಒಂದೇ ಕನ್ನಡವನ್ನು ಆಡಬೇಕು. ಆ ಕನ್ನಡದ ಬೀದಿಗೆ ಈ ಕನ್ನಡದ ಹಾದಿ. ಇದನ್ನು ತುಳಿಯದೆ ಅದು ದೊರಕದು. ಸಹೃದಯರಿಗೆ ಇಲ್ಲಿ ಶ್ರಮವೆನಿಸಿದರೂ ಅದು ವ್ಯರ್ಥ ಶ್ರಮವಲ್ಲ. ಅವರು 'ನಾವಲ್ಲಿ ಕಾಲಿಡಲಾರೆವು' ಎನ್ನುವವರೆಗೂ ಆ ಕನ್ನಡವೂ ಇಲ್ಲ, ಈ ಕನ್ನಡವೂ ಇಲ್ಲ. ಆದರೆ ಅವರು ಹಾಗೆ ಮಾಡಲಾರರು."

ಬೇಂದ್ರೆಯವರ ಕವಿತೆಯನ್ನು ಗಮಕಿಗಳು ಹಾಡಿದ್ದಾರೆ. ಆದರೆ ಅವರ ಹಾಡಿಕೆಯನ್ನು ಅನುಕರಣ ಮಾಡಹೋಗಿ ಹಲವರು ಸೋತಿದ್ದಾರೆ. ಸಹೃದಯರು ಅವರ ಕವಿತೆಯನ್ನು ಅರ್ಥಮಾಡಿಕೊಂಡು ವ್ಯಾಖ್ಯಾನಿಸಲು ಪ್ರಯತ್ನಿಸಿದ್ದಾರೆ. ಅಪಾರ್ಥಮಾಡಿಕೊಂಡವರೂ ಇದ್ದಾರೆ. ಅವರ ಈಚೀಚಿನ ಕವಿತೆ ಕೆಲವು ಅರ್ಥವಾಗದು ಎನ್ನುವವರೂ ಇದ್ದೇವೆ. ಆದರೆ, ಅವರ ಕವಿತೆ ಸುಲಭವೇ ಇರಲಿ ಗೂಢತಮವೇ ಇರಲಿ, ಅವರೇ ಹಾಡಿದ್ದನ್ನು ಕೇಳಿದಾಗ ಮಾತ್ರ ಟೀಕೆ ಟೋಕೆ ಹಿಮ್ಮೆಟ್ಟಿ, ಮೂಕರಾಗಿದ್ದೇವೆ.

ಬೇಂದ್ರೆ ಪ್ರಯತ್ನಪೂರ್ವಕವಾಗಿ ರೂಢಿಸಿಕೊಂಡ, ಈ ಕವಿತೆಯ ಧಾಟಿ ಅವರ ಕಾವ್ಯದ 'ಧಾತು'. ಈ 'ಧಾತು' ಪದವನ್ನು ನಾನು ಕರ್ಣಾಟಕ ಸಂಗೀತದ ಪರಿಭಾಷೆಯಾಗಿ ಉಪಯೋಗಿಸುವ ಆ ಪದದ 'ನಾದದ್ರವ್ಯ' ಎಂಬ ಅರ್ಥದಲ್ಲಿ ಉಪಯೋಗಿಸಲು ಬಯಸಿದ್ದೇನೆ. ಅವರು ಮೊದಮೊದಲು ದ್ವಿಪದಿ, ಚೌಪದಿ, ಷಟ್ಪದಿ ಪ್ರಕಾರಗಳ ಪದ್ಯ ರಚನೆ ಮಾಡಿದ್ದಾರಾದರೂ ಅವಲ್ಲಿಯೂ (ಬಹುಶಃ ಜೈಮಿನಿ ಭಾರತದ ಪ್ರಭಾವದ ಪರಿಣಾಮವಾಗಿ) ನಾದದ ಪ್ರಾಧಾನ್ಯ ಸಹಜವಾಗಿಯೆ ಅವರ ಕಾವ್ಯದ ಅಭಿವ್ಯಕ್ತಿಯ ಪ್ರಮುಖ ಅಂಶವಾಗಿದೆ. 'ಗರಿ'ಯಲ್ಲಿ ಈ ಇಬ್ಬಗೆ ಕವಿತೆಗಳಿದ್ದು, ಬರುಬರುತ್ತ ಸಂಪೂರ್ಣವಾಗಿ 'ದೇಸಿ' ಸತ್ವ ಅವರ ಕಾವ್ಯದ ಒಳ-ಹೊರಗುಗಳನ್ನು ಆಕ್ರಮಿಸಿಕೊಂಡಿತು. ಆದರೆ, ಅವರು ಸಭೆಗಳಲ್ಲಿ ಹಾಡುವುದಕ್ಕೆ ಆಯ್ದುಕೊಳ್ಳುತ್ತಿದ್ದುದು ವಿಶೇಷವಾಗಿ ಜನಪದ ಧಾಟಿಯ ಕವಿತೆಗಳನ್ನೆ. ತಮ್ಮ ಕವಿತೆಯನ್ನು ಹಾಡಿಯೇ ಜನಮನವನ್ನು–ಪಂಡಿತ ಜನ ಪಾಮರ ಜನ–ಎಲ್ಲ ಜನದ ಮನವನ್ನು ಸೂರೆಗೊಂಡರು. ಕವಿತೆ ಪ್ರಧಾನವಾಗಿ 'ಶ್ರವ್ಯ' ಎನ್ನುವುದು ಕೇವಲ 'ಲಕ್ಷಣ'ದ ಮಾತಲ್ಲ, ಅದರ ಮುಖ್ಯ ಲಕ್ಷಣವೇ ಎನ್ನುವುದನ್ನು ಸ್ಪಷ್ಟ ಮಾಡಿದರು. ಅವರ ಕಾವ್ಯಕ್ಕೆ ಒಂದು ಜೀವಂತ ಆಕಾರ ಕೊಟ್ಟದ್ದು ಅವರ ಕಂಠ, ಅಚ್ಚಿನ ಮನೆ ಅಲ್ಲ; ಅವರಿಗೆ ಜನಪ್ರೇಮವನ್ನು ಸಂಪಾದಿಸಿ ಕೊಟ್ಟದ್ದು ಓದುಗರ ಕಣ್ಣಲ್ಲ, ವಿಮರ್ಶಕನ ವಿವೇಕ ಅಥವಾ ಅವಿವೇಕ ಅಲ್ಲ; ಕೇಳುಗರ ಕಿವಿ, ಬಿಚ್ಚಿದ ಮನಸ್ಸು, ತೆರೆದ ಹೃದಯ.

ಜನಪದ ಶೈಲಿಯು ಅವರ ಕವಿತೆ–ಹಾಡಿಕೆಗೆ ಒಣ್ಣ ಬೆಡಗು ರಂಗು ರಕಮು ಕೊಟ್ಟ ಬೇರೆಯ ಅಂಶಗಳೂ ಉಂಟು. ಅವು ಅವರ ಆಕಾರ, ರೂಪ; ಉಡುಗೆ ತೊಡುಗೆ; ಕವಿತೆಯ ನಾಟ್ಯಾಂಶವನ್ನು ಎತ್ತಿ ಕಾಣಿಸುತ್ತಿದ್ದ ಅವರ ಕಣ್ಣ ಹೊಳಪಿನ

ಸೋಟ, ತಲೆಯ ಒಲೆತ, ಕೈಯ ತಿರುವು ಮುರುವು. ಹಾಡಿಕೆಯಿಂದ ಪ್ರಸಿದ್ಧರಾಗಿದ್ದ ಇವರ ವ್ಯಕ್ತಿಪರಿಚಯ ಜನಕ್ಕೆ ಆಗಿರದಿದ್ದರೆ ಇವರನ್ನು ಕಂಡ ಧಾರವಾಡದ ಕಡೆಯ ಹಳ್ಳಿಗರು ಈತ ತಮ್ಮವರಲ್ಲೆ ಒಬ್ಬಾತ ಎಂದೋ ಪಟ್ಟಣಿಗರು ಹಳ್ಳಿಯ ಪಟೇಲ ಇಲ್ಲವೆ ಕರಣಿಕ ಎಂದೋ ಹೆಚ್ಚೆಂದರೆ ಪ್ರಾಥಮಿಕ ಶಾಲಾ ಮಾಸ್ತರು ಎಂದೋ ತಪ್ಪು ತಿಳಿಯುವಂತೆ ಇತ್ತು ಅವರ ವೇಷ ಭೂಷ. ಬೇಂದ್ರೆ ಬಡಕಲು ಅಲ್ಲದಿದ್ದರೂ ಕುಬ್ಜ, ನನ್ನಂತೆ ವಾಮನಮೂರ್ತಿ. ಈಚೆಗೆ ಅವರ ತಲೆಯಮೇಲೆ ಟೊಪ್ಪಿಗೆ ಬಂದಿತ್ತು. ಕೋಟು, ಕನ್ನಡಕ ಸೇರಿಕೊಂಡು ಅವರ ಮಾಸ್ತರಿಕೆ ವೃತ್ತಿಗೆ ಅನುಗುಣವಾಗಿದ್ದವು. ನಾನು ಅವರನ್ನು ಮೈಸೂರು ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಕಂಡಾಗಿನ ಸ್ವರೂಪವೇ ಬೇರೆ. ಸಮ್ಮೇಳನಾಧ್ಯಕ್ಷ ಆಲೂರರ ಸಂಗಡ, ಧಾರವಾಡದ 'ಗೆಳೆಯರ ಗುಂಪಿ'ನ ಒಬ್ಬಿಬ್ಬರು ಗೆಳೆಯರೊಂದಿಗೆ—ಮುಗಳಿ, ಪ್ರಹ್ಲಾದ ನರೇಗಲ್ಲ, ಮುಂತಾದವರೊಡನೆ (ಇನ್ನುಳಿದ ಒಬ್ಬಿಬ್ಬರ ಹೆಸರು ಆಗ ಗೊತ್ತಾಗಲಿಲ್ಲ)—ಬೇಂದ್ರೆ ಬಂದಿದ್ದಾಗ ಅವರ ಉಡುಪು–ತಲೆಯ ಮೇಲೆ ಓರೆಸುತ್ತಿನ ರುಮಾಲು, ಜುಬ್ಬ, ಒರಟು ಕಚ್ಚೆ ಪಂಚೆ, ಇಷ್ಟೆ. ಸಮ್ಮೇಳನ ಮುಗಿದಮೇಲೆ, ತೀ. ನಂ. ಶ್ರೀ. ಯವರು ಲಕ್ಷ್ಮೀಪುರದಲ್ಲಿ ವಾಸಮಾಡಿಕೊಂಡಿದ್ದ ಹಿಂಮನೆಯ ಕೋಣೆಯಲ್ಲಿ ಬೇಂದ್ರೆಯ ಪರಿಚಯ ನನಗಾಯಿತಷ್ಟೆ ಹೊರತು, ಸಮ್ಮೇಳನದ ವಿದ್ಯಾರ್ಥಿ–ಸ್ವಯಂಸೇವಕನಾಗಿ ಕೆಲಸ ಮಾಡುತ್ತಿದ್ದ ನನಗೆ ಬೇಂದ್ರೆಯವರ ಪರಿಚಯ ಆ ಮೊದಲು ಆಗುವಂತಿರಲಿಲ್ಲ; ಸ್ವಯಂಸೇವಕನಾಗಿ ಮಹಾರಾಜ ಕಾಲೇಜಿನ ಸಭಾಮಂದಿರದ ಬಳಿಯೇ ಇರಬೇಕಾಗಿದ್ದ ನನಗೆ ಅವರು ಕವಿತೆ ಹಾಡಿದ್ದನ್ನು ಕೇಳುವ, ಕೇಳಿ ಬೆರಗಾಗುವ, ಸಂಧಿ ಮಾತ್ರ ಒದಗಿ ಬಂದಿತ್ತು. ಆಗ ಅವರು ಅಭಿನಯ ಪೂರ್ವಕ ಹಾಡಿದ "ಹಕ್ಕಿ ಹಾರುತಿದೆ ನೋಡಿದಿರಾ" ಕವಿತೆ ವಾಚ್ಯಮಟ್ಟದಲ್ಲಿ ಮಾತ್ರ ಅರ್ಥವಾಗಿದ್ದರೂ, ಅವರ ವಿಲಕ್ಷಣ ವಾಚನದ ಪರಿಣಾಮದಿಂದಾಗಿ ಕವಿತೆಯ ಹಕ್ಕಿ ಬಾನಿದಲ್ಲಿ ಹಾರುವ ಹಕ್ಕಿಯಲ್ಲ, ಯಾವುದೋ ಲೋಕದ ಅಲೌಕಿಕವಾದ ಮೂರ್ತಸ್ವರೂಪದ ಹಿಂದೆ ಅಡಗಿರುವ ಒಂದು ಸರ್ವವ್ಯಾಪಿ ಅಮೂರ್ತಚೈತನ್ಯ ಎನ್ನಿಸಿಬಿಟ್ಟಿತ್ತು. ಆಗ ಅವರ ಬಗ್ಗೆ 'ಗಾರುಡಿಗ' ಎನ್ನುವ ವಿಮರ್ಶೆಯ ಮಾತು ಬಳಕೆಗೆ ಬಂದಿರಲಿಲ್ಲ. 'ಗಾರುಡಿ' ಎನ್ನುವ ಮಾತೂ ನನಗೆ ಆಗ ಹೊಳೆದಿರಲಿಲ್ಲ; ಆದರೂ ಅಂದಿನ ಸಭೆಯ ಮೇಲೆ ಅವರ ಕವಿತಾವಾಚನದ ಪರಿಣಾಮ ಮಾತ್ರ ಗಾರುಡಿ ವಿದ್ಯೆಯದೆ. ಒಂದೇ ವ್ಯತ್ಯಾಸ: ಕಿವಿ ಚುರುಕಾಗಿದ್ದು ಕಾವ್ಯದ ನಾದಪ್ರಪಂಚಕ್ಕೆ ನಮ್ಮನ್ನು ಒಯ್ದು, "ನಾದಲೀನ" ಮಾಡಿಸಿ, "ನಾದಲೀಲೆ"ಯಲ್ಲಿ ಆಡಿಸಿ, ಅಸ್ಪಷ್ಟ ಅಲೌಕಿಕ ತನ್ಮಯತಾ ಸಿದ್ಧಿಯನ್ನು, ಕಾವ್ಯಾನುಭವದ ಪರಾಕಾಷ್ಠೆಯನ್ನು ದೊರಕಿಸುತ್ತಿತ್ತು. ಮಾತಿನ ಹಂತವನ್ನು ಮೀರಿದ ಭಾವಗೀತ ಇದೇ: ಭೃಂಗದ ಬೆನ್ನೇರಿ ಬಂದ ಕಲ್ಪನಾವಿಲಾಸ; "ಮಾತು ಮಾತು ಮಥಿಸಿ ಬಂದ ನಾದದ ನವನೀತಾ;" "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ."

ಬೇಂದ್ರೆಯವರ ಕಾವ್ಯದ ಈ 'ಧ್ವನಿ-ಪರಿಣಾಮ' ಹೂವಿಗೆ ಕಂಪು ಇದ್ದ ಹಾಗೆ. ಆದರೆ ಕಂಪೇ ಹೂವು ಆಗದು, ಅಲ್ಲವೆ? ಬೇಂದ್ರೆಯವರ ಉತ್ತಮ ಕಾವ್ಯದ ವ್ಯಂಗ್ಯ ಅರ್ಥದ-ಧ್ವನಿಯ-ರಮ್ಯತೆಯನ್ನು ಅರಿತು ಅನುಭವಿಸಿ ಆನಂದಿಸಬೇಕಾದರೆ ಅವರ ಕಾವ್ಯವನ್ನು ಕೇಳಿಯಾದಮೇಲೆ ಓದಿಕೊಳ್ಳಬೇಕು, ಹಿಂಜಿ ಹಿಂಜಿ ಒಳ ಹೊಕ್ಕು ನೋಡಬೇಕು, ಕಾವ್ಯಾರ್ಥವನ್ನು ಪರಿಭಾವಿಸಬೇಕು. ಇನ್ನು ಅವರ ಹಾಡಿಕೆ ಕೇಳುವ ಭಾಗ್ಯ ಇಲ್ಲ. ನಮ್ಮ ಪಾಲಿಗೆ ಇರುವುದು ಅಚ್ಚಾದ ಕವಿತೆ ಮಾತ್ರ.

ಇಲ್ಲಿ, ಈ ನನ್ನ ಮಾತಿಗೆ ಒಂದು ಉದಾಹರಣೆ ಕೊಡಬಹುದು: ಬೇಂದ್ರೆ ಮೈಸೂರಿಗೆ ಬಂದು ಹೋದಮೇಲೆ ಅವರು ಅಲ್ಲಿ ಒಂದೆರಡು ಕಡೆ ತಮ್ಮ 'ಬೆಳಗು' ಮುಂತಾದ ಕೆಲವು ಪದ್ಯಗಳನ್ನು ಓದಿದ್ದರೋ ಏನೋ. ನಾನು ಕೇಳಿರಲಿಲ್ಲ. ದಿವಂಗತ ನಂ. ಶಿವರಾಮಶಾಸ್ತ್ರಿಗಳು ಆ 'ಬೆಳಗು' ಪದ್ಯವನ್ನು ಬೇಂದ್ರೆ ಧಾಟಿಯಲ್ಲಿ ಚೆನ್ನಾಗಿಯೇ ಹಾಡುತ್ತಿದ್ದರು. ಅದನ್ನು ಅನೇಕ ಸಲ ಕೇಳಿದ್ದರೂ, ಬೇಂದ್ರೆಯವರ 'ನಾದಲೀಲೆ'ಯಲ್ಲಿ ಮಾಸ್ತಿಯವರು ಅದಕ್ಕೆ ಬರೆದ ಮುನ್ನುಡಿ ಓದುವವರೆಗೆ, ಪದ್ಯದ ಧ್ವನಿರಮ್ಯತೆ ಮನಸ್ಸನ್ನು ಮುಟ್ಟಿರಲಿಲ್ಲ. ಈಚಿನ ದಿನಗಳಲ್ಲಿ "ಬೆಳಗ"ನ್ನು ಮತ್ತೆ ಓದಿಕೊಂಡಾಗ ಪದ್ಯದ ಮೊದಲ ಸಾಲುಗಳ "ಮುತ್ತಿನ ನೀರಿನ ಎರಕವ ಹೊಯ್ದಾ" ಎಂಬ ಉಕ್ತಿಯಲ್ಲಿ 'ಮುತ್ತು' ಮತ್ತು 'ಎರಕ' ಎಂಬ ಮಾತುಗಳಲ್ಲಿ ಶ್ಲೇಷಾರ್ಥವೂ ಇರಬಹುದು ಎನ್ನಿಸಿ, ಆ ಅರ್ಥ ಇಡಿಯ ಕವನದ ಒಳಗನ್ನೂ ಹರಡಿಕೊಂಡು ಬೆಳಗುವಂತೆ ತೋರಿದೆ. ಬೇಂದ್ರೆ ಕಾವ್ಯದಲ್ಲಿ ಮಾತಿನ ಇಬ್ಬಗೆಯ ಅರ್ಥಸಾಧ್ಯತೆಯನು ಗುರುತಿಸಿದಲ್ಲದೆ ಅವರ ಕಾವ್ಯದ ಮಹತ್ವ ಮನದಟ್ಟಾಗದು.

ಪರವಸ್ತುವಿನ ಪ್ರತೀಕವಾಗಿ ಸೂರ್ಯ ಇದ್ದಾನೆ. ಈ ಮೂಡಲ ಮನೆಯಾತ ಕವಿಯ ಪಂಚೇಂದ್ರಿಯಗಳಿಗೂ ಒದಗಿಸಿದ ಸುಖಾನುಭವದ ಮೂಲಕ ಪಂಚತನ್ಮಾತ್ರಾ ಸ್ವರೂಪವಾದ ಪರವಸ್ತುವಿನ ಆನಂದಮಯ ಅನುಭವ ಪದ್ಯದಲ್ಲಿ ದ್ಯೋತಕವಾಗಿದೆ. ಇದು "ಬರಿ ಬೆಳಗಲ್ಲೋ ಅಣ್ಣಾ" ಎಂಬ ಕೊನೆಯ ಮಾತೇ ಅಂತರಾರ್ಥವನ್ನು ತೆರೆಯುವ ಕೀಲಿಕೈ. ಬೆಳಗಿನಲ್ಲಿ ದೊರೆತ ಪೂರ್ಣ ಆನಂದಾನುಭವವೂ ಆತನ ಕೃಪೆಯೆ. ತನ್ನ ಮಕ್ಕಳಿಗೆ 'ಮುತ್ತು' ಕೊಟ್ಟು ಪ್ರೀತಿ ಎರೆಯುತ್ತಿದ್ದಾನೆ ('ಎರಕ') ಅಲ್ಲವೆ?

ಅರ್ಥವಾಗಲಿ ಬಿಡಲಿ, ಹೆಚ್ಚಿನ ಅರ್ಥದ ಸುಳಿವು ಹತ್ತಲಿ ಬಿಡಲಿ, ಯಾವ ಎಂಥ ಪದ್ಯವೇ ಆಗಲಿ, ಅವರ ಬಾಯಿಂದ ಕೇಳಿದಾಗ ಅವರ ಕಾವ್ಯ ನಮಗೆ ಅನನ್ಯ ಎನ್ನಿಸಿಬಿಡುತಿತ್ತು. ಶಿವಮೊಗ್ಗ ಸಮ್ಮೇಳನಕ್ಕೆ ಬೇಂದ್ರೆ ಅಧ್ಯಕ್ಷರಾಗಿದ್ದಾರೆ ಎಂದೇ ನಾನು ಅಲ್ಲಿಗೆ ಧಾವಿಸಿದೆ. ನನಗೆ ನಿರಾಶೆ ಆಗಲಿಲ್ಲ ಅವರ ಅಧ್ಯಕ್ಷಭಾಷಣದ ಮುಖ್ಯ ಭಾಗವೇ "ಗಂಗಾವತರಣ"ದ ಹಾಡಿಕೆ, ಅಥವಾ "ಗಂಗಾವತರಣ"ವೇ ಅವರ ಅಧ್ಯಕ್ಷಭಾಷಣ, ಎಂದರೂ ಸಲ್ಲುತ್ತದೆ. ಜನಪದ ಗೀತದ ಧಾಟಿಯಲ್ಲಿ ಇಲ್ಲದ 'ಗಂಗಾವತರಣ', 'ಬಾಳಕರವಾಳ' ಇಂಥ ರೂಢಿಯ ಶೈಲಿಯ ಪದ್ಯ ಓದುವಾಗಲೂ ಅವರ ಓದಾಣಿಕೆ ಪರವಶಗೊಳಿಸುವಂಥದು ಆಗಿತ್ತು.

ಶಿವಮೊಗ್ಗ ಸಮ್ಮೇಳನದ ಮಾತು ಬಂದದ್ದರಿಂದ ನೆನಪಿಗೆ ಬರುವ, ಮರೆಯಲಾಗದ ಒಂದು ಸಂಗತಿಯನ್ನು ಇಲ್ಲಿ ತಿಳಿಸಬೇಕು. ಅದು ಅವರ ಅಂತರಂಗದ ನಂಬಿಕೆ, ಆ ನಂಬಿಕೆಯ ಹಿಂದಿನ ತತ್ತ್ವ. ಇವುಗಳ ಮೇಲೆ ಬೆಳಕು ಚೆಲ್ಲುವಂಥದು. ನನ್ನ ಮೇಲೂ ಪ್ರಭಾವ ಬೀರಿದಂಥದು. ನಡೆದದ್ದು ಹೀಗೆ:

ಬೆಂಗಳೂರಿಂದ ಹೊರಟ ರೈಲಿನ ಬೋಗಿಯಲ್ಲಿದ್ದ ನನ್ನ ಜೊತೆಯ ಪಯಣಿಗರ ಪೈಕಿ ವಿಶೇಷವಾಗಿ ನೆನಪಿಗೆ ಬರುವವರು ದಿವಂಗತ ಎಸ್. ಎಸ್. ರಾಮಚಂದ್ರಯ್ಯ, ದಿವಂಗತೆ ಚಂಪಾಬಾಯಿ, ಮತ್ತು ಇನ್ನೊಬ್ಬಾಕೆ (ಆಕೆ ದಿವಂಗತ ವೈಣಿಕ ಎಲ್. ರಾಜಾರಾಯರ ಮೊದಲ ಹೆಂಡತಿ ಎಂದು ಆಮೇಲೆ ತಿಳಿಯಿತು). ರೈಲು ಬೀರೂರನ್ನು ಮುಟ್ಟುವವರೆಗಿನ ಪ್ರಯಾಣ ಕಾಲದಲ್ಲಿ ಉಲ್ಲೇಖಿಸುವಂತಹ ಸಂಗತಿ ಏನೂ ನಡೆಯಲಿಲ್ಲ. ಬಿರೂರಿನಲ್ಲಿ ರೈಲು ಬಹಳ ಹೊತ್ತು ತಂಗುವುದಷ್ಟೆ; ಆಗ ಧಾರವಾಡದಿಂದ ಬಂದಿದ್ದ ಬೇಂದ್ರೆ ಶಿವಮೊಗ್ಗ ಕಡೆಗೆ ಹೋಗುವ ನಮ್ಮ ರೈಲು ಹತ್ತಿದರು ಎಂದು ಕೇಳಿದೆವು. ತತ್‌ಕ್ಷಣ ನಾವು ಕೆಲವರು ರೈಲು ಇಳಿದು ಬೇಂದ್ರೆ ಇದ್ದ ಮೂರನೆಯ ದರ್ಜೆ ಬೋಗಿಗೆ ಹೋಗಿ ಕುಳಿತೆವು. ಬೇಂದ್ರೆ ನಮ್ಮ ಆಕರ್ಷಣೆ. ನಮ್ಮ ಹಾಗೆಯೇ, ಬೇರೆ ಬೋಗಿಗಳಿಂದ ನನಗಿಂತ ಮುಂಚೆ, ಹಲವರು ಆ ಬೋಗಿಗೆ ನುಗ್ಗಿ ಸ್ಥಳ ಮಾಡಿಕೊಂಡು ಕುಳಿತಿದ್ದರು. ಎಂದಿನಂತೆ ಬೇಂದ್ರೆಯ ವಾಕ್ಪ್ರವಾಹದ ಭೋರ್ಗರೆತ ಕುಳಿತಿದ್ದವರ ಕಣ್ಣು ಕಿವಿಗಳನ್ನು ಸೆಳೆದಿತ್ತು. ಗುಂಪಿನ ನಡುವೆ ನಾನು ಪ್ರವೇಶಿಸಿದ್ದನ್ನು ಅವರು ಗಮನಿಸಿದಂತೆ ಕಾಣಲಿಲ್ಲ. ಅವರು ಅಡ್ಡಸಾಲಿನ ಪೀಠದ ಹಲಗೆಯ ಮೇಲೆ ಕುಳಿತಿದ್ದರು. ನಾನು ಒಂದು ಪಕ್ಕದ ಉದ್ದನೆಯ ಪೀಠದ ಹಲಗೆಯ ಮೇಲೆ ಎಡೆಮಾಡಿಕೊಂಡು ಕುಳಿತೆ. ರೈಲುಗಾಡಿ ಹೊರಟು, ತುಸ ಹೊತ್ತು ವೇಗವಾಗಿಯೇ ಓಡಿ, ಇದ್ದಕ್ಕಿದ್ದ ಹಾಗೆಯೇ ನಿಂತಿತು. ಏಕೆ ಎಂದು ಗೊತ್ತಾಗಲಿಲ್ಲ. ಕೆಲವರು ಇಳಿದು ಹೋಗಿ, ವಿಚಾರಿಸಿ, ಸುದ್ದಿ ತಂದರು. ರೈಲು-ಕಂಬಿಯನ್ನು ಹಾದುಹೋಗುತ್ತಿದ್ದ ಒಂದು ಹಸು ರೈಲಿಗೆ ಸಿಕ್ಕಿ ಮಡಿದಿತ್ತು. ಆ ಸುದ್ದಿ ಕೇಳಿ ಬೇಂದ್ರೆಯ ಮಾತಿನ ರೈಲೂ ನಿಂತಿತು. ಒಂದು ಕ್ಷಣ ಅವರ ಮುಖ ಖಿನ್ನವಾಯಿತು. ಕಣ್ಣಿನ ಎವೆ ಮುಚ್ಚಿದವು. ಎಡಗೈ ಖಾದಿ ಅಂಗಿಯ ಬಲಗಡೆಯ ಒಳಜೇಬನ್ನು ತಡಕಿ, ಒಂದು ತಾಮ್ರದ (ಪಂಚಲೋಹದ?) ಸುಮಾರು ಅರ್ಧ ಅಡಿ ಎತ್ತರದ, ವಿಗ್ರಹವನ್ನು ಮುಷ್ಟಿಯಲ್ಲಿ ಒಲವಾಗಿ ಹಿಡಿಯಿತು. ಜೇಬಿನಿಂದ ಹೊರಬಂದು ಅರೆಮರೆಯಲ್ಲಿದ್ದ ಆ ವಿಗ್ರಹವನ್ನು ಬೇಂದ್ರೆ ಮುಖ ತಗ್ಗಿಸಿ, ಶಾಂತ ಭಾವದಿಂದ ತುಸ ಹೊತ್ತು ದಿಟ್ಟಿಸಿ, ಮತ್ತೆ ಜೇಬಿನೊಳಕ್ಕೆ ಸೇರಿಸಿದರು. ನಾನಿದ್ದ ಎಡೆಯಿಂದ ಮಾತ್ರ ಕಾಣಬಹುದಾಗಿದ್ದ ದೃಶ್ಯ ಇದು. ನನ್ನ ಅಕ್ಕಪಕ್ಕದಲ್ಲಿದ್ದವರು ಗಮನಿಸಿದರೋ ಇಲ್ಲವೋ ನಾನು ಕಾಣೆ. ನಾನಂತೂ ಕಂಡೆ, ಕ್ಷಣಕಾಲ ಎವೆಯಿಕ್ಕದೆ ನೋಡಿದೆ. ಅವರು ಅರ್ಚಾಮೂರ್ತಿಯನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದುದೇಕೆ? ಹಸುವಿನ ದುರ್ಮರಣದ ಸಂಗತಿ ಕೇಳಿದೊಡನೆ ವಿಗ್ರಹದ ದರ್ಶನಮಾಡಿದ್ದೇಕೆ?

ಈ ಪ್ರಶ್ನೆಗಳಿಗೆ ನಿಕರವಾದ ಉತ್ತರವನ್ನು ಊಹಿಸಿ ಹೇಳುವುದು ಕಷ್ಟ. ಆ ಕ್ಷಣದಲ್ಲಿ ಬೇಂದ್ರೆ ದೇವರ ಸನ್ನಿಧಿಯ ಅನುಭವವನ್ನು ಪಡೆದು, ದೇವರ ಕೃಪೆಯನ್ನು ಯಾಚಿಸಿರಬೇಕು ಎಂದು ನನಗೆ ತೋರುತ್ತದೆ ಹಸುವಿನ ಆತ್ಮಕ್ಕೆ ಸದ್ಗತಿ ಕೋರಿರಬಹುದು ಅವರ ಕಾವ್ಯದ ಮೂಲಕ ಅವರ ದೈವಭಕ್ತಿ, ಗುರುನಿಷ್ಠೆ, ಆಧ್ಯಾತ್ಮಿಕತೆ, ತಾತ್ತ್ವಿಕತೆ ಇವೆಲ್ಲ ಸುಪರಿಚಿತ. ವಿಚಿತ್ರ ಸನ್ನಿವೇಶದಲ್ಲಿ ಈ ವಿಲಕ್ಷಣ ಸಗುಣನಿಷ್ಠೆ ಇಂದಿನ ತರುಣ ಪೀಳಿಗೆಗಂತೂ ಮೂಢಭಕ್ತಿಯ ಪರಮಾವಧಿ ಎಂದು ತೋರೀತು. ನನಗೆ ಹಾಗೆ ಎನ್ನಿಸಲಿಲ್ಲ. ಆಸ್ತಿಕರಿಗೆ ಇದು ಆಶ್ಚರ್ಯದ ಸಂಗತಿಯಾಗಿ ಕಾಣುವುದಿಲ್ಲ. ರಾಮಕೃಷ್ಣ ಪರಮಹಂಸರಿಗೆ ಕಾಳಿಕಾಮೂರ್ತಿ ಬರಿಯ ವಿಗ್ರಹವಾಗಿರಲಿಲ್ಲ. ಪ್ರತ್ಯಕ್ಷ ಕಾಳಿಯೇ ಸರಿ. ಬೇಂದ್ರೆಗಾದರೂ ಅಷ್ಟೆ.

1960ರಲ್ಲಿ. 1961ರ ಆಕಾಶವಾಣಿಯ ರಾಷ್ಟ್ರಮಟ್ಟದ ಕವಿಸಮ್ಮೇಳನದಲ್ಲಿ ಭಾಗವಹಿಸಲು ನಿನ್ನ ಹೆಸರು ಸೂಚಿತವಾಗಿದೆ, ಗಣರಾಜ್ಯ ದಿನದ ಈ ಸಮಾರಂಭಕ್ಕೆ ನೀನು ದೆಹಲಿಗೆ ಹೋಗಬೇಕು ಎಂದು ನನ್ನ ಕಾಲೇಜು ದಿನಗಳ ಸನ್ಮಿತ್ರ. ಬೆಂಗಳೂರು ಆಕಾಶವಾಣಿಯ ನಿಲಯ ನಿರ್ದೇಶಕ ಡಾ|| ಎ ಎಮ್ ನಟೇಶ್ ಕಾಲೇಜಿಗೆ ಬಂದು ತಿಳಿಸಿದಾಗ, "ನಾನು ನೀನು ಸ್ನೇಹಿತರೆಂದು ಕೆಲವರಿಗಾದರೂ ತಿಳಿದಿದೆ. ಇದು ಪಕ್ಷಪಾತದ ಆಯ್ಕೆ ಎಂದು ನಿನ್ನ ಮೇಲೆ ಆರೋಪ ಬರಬಹುದು. ನಾನು ಹೋಗುವುದಿಲ್ಲ" ಎಂದು ಆಹ್ವಾನವನ್ನು ನಿರಾಕರಿಸಿದೆ. "ಆಯ್ಕೆ ನನ್ನದಲ್ಲ ಮಗೂ. ಧಾರವಾಡ ನಿಲಯದ ಸಾಹಿತ್ಯ ಸಲಹಾಕಾರ ಬೇಂದ್ರೆ ಅವರದ್ದು" ಎಂದಾಗ, ಸಂತಸದ ಉಕ್ಕಿನಲ್ಲಿ ಅವಾಕ್ಕಾದೆ ದೆಹಲಿಗೆ ಹೋದೆ, ಪದ್ಯ ಓದಿದೆ. ದೆಹಲಿಗೆ ಬೇಂದ್ರೆಯವರೂ ಬಂದಿದ್ದರು. ಮುದ್ರಿತವಾದ ಕಾರ್ಯಕ್ರಮ ಪಟ್ಟಿಯಲ್ಲಿ ನನ್ನ "ದ್ರಷ್ಟು-ಮಿಚ್ಛಾಮಿ ತೇ ರೂಪಮೈಶ್ವರಮ್" ಎಂಬ ಕವನಕ್ಕೆ ಪರಿಚಯ ವಾಕ್ಯಗಳನ್ನು ಬೇಂದ್ರೆಯವರೇ ಬರೆದು ಕಳಿಸಿದ್ದರಂತೆ. ಅವುಗಳಲ್ಲಿ, ನನ್ನ ಕಾವ್ಯದ ಬಗ್ಗೆ ಹೇಳುತ್ತ ಇದರಲ್ಲಿ 'Cosmic Vision' (ವೈಶ್ವದರ್ಶನ) ಇದೆ ಎಂಬ ಅವರ ವಿಮರ್ಶೆಯಿಂದ ನನಗೆ ಆನಂದವಾಯಿತು. ಮಾರನೆಯದಿನ ಉಪಾಹಾರಕೂಟದಲ್ಲಿ ಪ್ರತ್ಯಕ್ಷ ಸಂಧಿಸಿದಾಗಲೂ ಕವಿತೆಯ ಬಗ್ಗೆ ತಮ್ಮ ಮೆಚ್ಚುಗೆ ತಿಳಿಸಿದರು. ಅವರ ಹರಕೆ ನನ್ನ ಕಾವ್ಯದ ಮುನ್ನಡೆಗೆ ಮೀಟುಗೋಲಾಯಿತು.

ಬೇಂದ್ರೆಯವರನ್ನು ಸಭೆ ಸಮಾರಂಭಗಳಲ್ಲಿ ಅನೇಕ ವೇಳೆ ಸಂಧಿಸಿದ್ದೇನೆ. ನನ್ನನ್ನು ಬಹು ಆತ್ಮೀಯವಾಗಿ ಕಂಡಿದ್ದರು ಅವರು ನನ್ನನ್ನು "ಸೀತಾರಾಮು" ಎಂದು ಪ್ರೀತಿಯ ಏಕವಚನದಲ್ಲಿ ಕರೆಯುತ್ತಿದ್ದವರು ಮೂವರು : ತೀ ನಂ ಶ್ರೀ, ನಾ. ಕಸ್ತೂರಿ ಮತ್ತು ಬೇಂದ್ರೆ. ಬೇಂದ್ರೆಯವರನ್ನು ಕಡೆಯ ಸಲ ಕಂಡದ್ದು ನಾಲ್ಕು ವರ್ಷಗಳ ಹಿಂದೆ, ಬಹುಶಃ ೧೯೭೭ರ ಜನವರಿ ೨೭ರಂದು : ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ 'ಶಾಂತರಸ' ಕುರಿತು ವಿಶೇಷೋಪನ್ಯಾಸ ಮಾಡಲು ಹೋಗಿದ್ದ ಸಂದರ್ಭದಲ್ಲಿ. ಕವಿ ಚೆನ್ನವೀರ ಕಣವಿಯವರೂ ಜೊತೆಗಿದ್ದರು. ನಾನು ಅವರ ಮನೆಗೆ

ಹೋದದ್ದು ಸಂಜೆಯ ವೇಳೆ, ಒಬ್ಬರೇ ಇದ್ದರು. ನಗುನಗುತ್ತಾ ನಮ್ಮನ್ನು ಬರಮಾಡಿಕೊಂಡರು; ಕೈಗೆ ಸಕ್ಕರೆ ಹಾಕಿ ಬಾಯಿ ಸಿಹಿ ಮಾಡಿದರು. ನನ್ನ ಉಪನ್ಯಾಸದ ವಿಷಯ ಹಿಡಿದು ಸುಮಾರು ಅರ್ಧ ತಾಸು ಮಾತಾಡಿದರು. ನಾನು ಹೇಳಿದ್ದ ವಿಷಯದ ಸಾರವೆಲ್ಲ ಅವರ ನೆನಪಿನ ಹೊತ್ತಗೆಯಿಂದ ಹೊರಸೂಸಿತು. ಶಾಂತರಸಕ್ಕೆ ಸಂಬಂಧಪಟ್ಟಂತೆ ಭಕ್ತಿರಸದ ವಿಷಯವಾಗಿಯೂ ಎರಡು ಮಾತಾಡಿದರು. ಅವರ ಜ್ಞಾಪಕಶಕ್ತಿ ಆಶ್ಚರ್ಯಕರವಾಗಿತ್ತು, ಒಂದು ಕಾಲದಲ್ಲಿ ಸಾಹಿತ್ಯ ಸಂಶೋಧನೆಯಲ್ಲೂ ಗಣ್ಯ ಕೆಲಸ ಮಾಡಿದ್ದರ ಫಲ. 'ನವರಸ' ಎಂಬ ಮಾತಿನ ಸುತ್ತ ೯ರ ಸಂಖ್ಯೆಯ ವಿಚಾರವೂ ಹಣಿಕಿತು. ರಾತ್ರಿ ವೇಳೆಯಾದ್ದರಿಂದ, ಸಂಖ್ಯಾಶಾಸ್ತ್ರದ ಬಗ್ಗೆ ಹೆಚ್ಚು ಮಾತಾಡಲಿಲ್ಲ. ಅವರ ಸಂಖ್ಯಾಶಾಸ್ತ್ರ ಪ್ರಾವೀಣ್ಯದ ಬಗೆಗೆ ಕೇಳಿ, ವಿಸ್ಮಿತನಾಗಿದ್ದೆ.

ತರುವಾಯ, ೧೯೮೦ರಲ್ಲಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪನೆಯ ಸಂದರ್ಭದಲ್ಲಿ ಗುರು–ಹಿರಿಯರ ಸ್ಥಾನದಲ್ಲಿರುವ ನಾಡಿನ ಕೆಲವು ಹಿರಿಯ ಸಾಹಿತಿಗಳನ್ನು ಸಂಸ್ಥೆಯ ಗೌರವ ಸದಸ್ಯರಾಗಿದ್ದುಕೊಂಡು ಆಶೀರ್ವದಿಸಬೇಕೆಂದು ಕೇಳಿಕೊಂಡಾಗ, ಬೇಂದ್ರೆಯವರಿಗೂ ಪತ್ರ ಬರೆದೆ. ತಂದೆಯ ಪರವಾಗಿ ವಾಮನ ಬೇಂದ್ರೆ, ಪತ್ರ ಬರೆದರು (ತಾ|| ೫–೩–೧೯೮೦): "ತಂದೆಯವರಿಗೆ ಸದಸ್ಯತ್ವ, ಸಭೆ ಸಲಹೆ–ಸೂಚನೆಗಳತ್ತ ಮನಸ್ಸು ಹರಿಯುತ್ತಿಲ್ಲ. ಹತ್ತಿರ ಹತ್ತಿರ ಇದ್ದವರ ಸಲಹೆ ಸೂಚನೆಗಳಿಗೆ ಅರ್ಥವಿದೆ. ದೂರಿನಿಂದ ಸಲಹೆ ಸೂಚನೆ ಕೊಡುವುದರಿಂದ ಏನು ಉಪಯೋಗ" ಎಂದು ನಿರುತ್ಸಾಹವನ್ನು ಸೂಚಿಸಿದ್ದರೂ, ತಮ್ಮ ಶುಭಾಶಯವನ್ನು ಕಳಿಸಿದ್ದರು. ಇಲ್ಲಿ ಈ ಪ್ರಸಕ್ತಿ ಏಕೆ ಎಂದರೆ, ಬೇಂದ್ರೆ ಲೌಕಿಕ ವ್ಯವಹಾರಗಳಿಂದ ದೂರವಾಗಿ ಚಿಂತನದ ಚಿಪ್ಪಿನಲ್ಲಿ ಅಡಗಿಕೊಳ್ಳುತ್ತಿದ್ದರು ಎಂದು ಆಗ ನನಗೆ ತೋರಿದ್ದನ್ನು ಹೇಳುವುದಕ್ಕಾಗಿ. ಗೌರವಸದಸ್ಯರಾಗಿ ಸಂಸ್ಥೆಯ ಯಾವ ಕಾರ್ಯದಲ್ಲಿಯೂ ಭಾಗವಹಿಸಬೇಕಾಗಿಲ್ಲ; ಹುಟ್ಟುತ್ತಿರುವ ಸಂಸ್ಥೆ ಬೇಂದ್ರೆಯಂಥವರಿಗೆ ಗೌರವ ನೀಡುವುದು ಎನ್ನುವುದು ಹಾಸ್ಯಾಸ್ಪದ. ಅವರಂಥ ಮಹನೀಯ ಗೌರವ ಸದಸ್ಯರಾದರೆ ಸಂಸ್ಥೆಗೆ ಘನತೆ ಗೌರವ ದೊರಕುತ್ತದೆ–ಎಂದು ಸ್ಪಷ್ಟಪಡಿಸಿದಮೇಲೆ, ಅವರು ಪ್ರತಿಷ್ಠಾನದ ಗೌರವ ಸದಸ್ಯರಾಗಿರಲು ಒಪ್ಪಿದರು. ಅವರು ಬಹು ಕಾಲ ಪ್ರತಿಷ್ಠಾನದ ಗೌರವಸದಸ್ಯರಾಗಿ ಇದ್ದಿರುವ ಭಾಗ್ಯ ನಮಗೆ ಇಲ್ಲವಾಯಿತು. ಬೇಂದ್ರೆ ನಮ್ಮನ್ನು ಅಗಲಿ ಹೋದರು. ನಾದಬ್ರಹ್ಮದಲ್ಲಿ ಲೀನವಾದರು. ಅವರ ಕಾವ್ಯರಾಶಿ ಉಳಿದಿದೆ. ಆದರೆ, ಕಾವ್ಯದ ಜೀವನಾಡಿಯಾಗಿ ಅದಕ್ಕೆ 'ಧ್ವನಿ' ನೀಡುತ್ತಿದ್ದ 'ದೇಸಿ ಕೊರಲು' ಬೇಂದ್ರೆಯವರೊಂದಿಗೇ ಅಡಗಿಹೋಗಿವೆ. ಬೇಂದ್ರೆ ನಿಧನರಾದದ್ದು ಒಟ್ಟು ಕಾವ್ಯಪ್ರಪಂಚಕ್ಕೆ ಆದ ನಷ್ಟಕ್ಕಿಂತ ಹೆಚ್ಚಾಗಿ ಅವರ ಕಾವ್ಯಕ್ಕೇ ಆದ, ಯಾವ ಗಮಕಿಯೂ ಗಾಯಕನೂ ತುಂಬಲಾಗದ ಅಪಾರ ನಷ್ಟ. ಆಕಾಶವಾಣಿಯ 'ಧ್ವನಿಮುದ್ರಿಕೆ'ಗಳಲ್ಲಿ ಅವರ 'ಕೊರಲ ಸಿರಿ' ಸ್ವಲ್ಪ ಮಾತ್ರ ಉಳಿದಿರುವುದು ಸಮಾಧಾನಕರ. ಛಾಯಾಚಿತ್ರದಂತೆ ಛಾಯಾಧ್ವನಿ–ಅಷ್ಟೆ.

ಬೇಂದ್ರೆ: ವ್ಯಕ್ತಿತ್ವ, ವಕ್ತೃತ್ವ ಮತ್ತು ಕವಿತ್ವ
—ಒಂದು ನಿಕಟ ನೋಟ

('ಪ್ರಜಾವಾಣಿ'ಯ 13-12-1981ರ ಸಂಚಿಕೆಯಿಂದ)

—ಪ್ರೊ|| ಕೀರ್ತಿನಾಥ ಕುರ್ತಕೋಟಿ

ನನ್ನ ಮತ್ತು ಬೇಂದ್ರೆಯವರ ಪ್ರಾರಂಭಿಕ ಪರಿಚಯ :

ನಾನು ಚಿಕ್ಕವನಿದ್ದಾಗ ಗದುಗಿನ ನಮ್ಮ ಮನೆಯೆದುರಿನ ಮನೆಯಲ್ಲಿಯೇ ಬೇಂದ್ರೆಯವರು ವಾಸವಾಗಿದ್ದರು. ವಿದ್ಯಾದಾನ ಸಮಿತಿ ಹೈಸ್ಕೂಲಿನ ಮುಖ್ಯಾಧ್ಯಾಪಕ ರಾಗಿದ್ದ ಅವರನ್ನು ದೂರದಿಂದಲೇ ನಾನು ಮೊದಲು ನೋಡಿದ್ದು ೧೯೪೨-೪೩ರಲ್ಲಿ. ೧೯೪೨ರ ಮೇ ತಿಂಗಳಲ್ಲಿ ಮನೋಹರ ಗ್ರಂಥ ಮಾಲೆಯು ಗದುಗಿನಲ್ಲಿ ವಸಂತ ಸಾಹಿತ್ಯೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿ ಶಾಲೆಗೆ ಹೋಗುತ್ತಿದ್ದ ನನಗೆ ಕಾವ್ಯದ ಹುಚ್ಚು ಹಿಡಿಸಿತು. ಸಾಹಿತ್ಯೋತ್ಸವದ ಅಂಗವಾಗಿ ಆಶು ಕವಿತಾಗೋಷ್ಠಿ ಯನ್ನು ಏರ್ಪಡಿಸಿದ್ದರು. ಗೋಕಾಕ, ಆನಂದಕಂದ, ಹೊಯ್ಸಳ ಮೊದಲಾದವರು ತಮ್ಮ ಕವಿತೆಗಳನ್ನು ಓದಿ ಮುಗಿಸಿದಮೇಲೆ ಹೊರಗಿನಿಂದ ಬಂದ ಬೇಂದ್ರೆ ಮಾಸ್ತರರು ಧ್ವನಿವರ್ಧಕದ ಎದುರು ಬಂದು ನಿಂತಾಗ ನನಗೆ ಆಶ್ಚರ್ಯವಾಯಿತು. "ಮಾಯಾ ಕಿನ್ನರಿ" ಮತ್ತು "ಶ್ರಾವಣ" ಎಂಬ ಎರಡು ಕವಿತೆಗಳನ್ನು ಅವರು ಹಾಡಿದಾಗ ಸಾವಿರಗಟ್ಟಲೆ ಜನ ರೋಮಾಂಚಗೊಂಡರು. ನನ್ನ ಅವ್ಯಕ್ತ ಪ್ರಜ್ಞೆಯಲ್ಲಿ ಕಾವ್ಯ ಸೇರಿಕೊಂಡಿದ್ದು ಆಗ. ಕವಿತೆಗಳು ಆಗ ಅರ್ಥವಾಗಿರಲಿಲ್ಲ. ಆದರೆ ಅಂದು ಕೇಳಿದ್ದ ಪ್ರತಿ ಶಬ್ದ ನೆನಪಿನಲ್ಲಿ ಉಳಿದುಕೊಂಡಿತು. ಇನ್ನೂ ಮರೆತಿಲ್ಲ.

ಬೇಂದ್ರೆ – ಕವಿತ್ವ :

೧೯೪೮ರಲ್ಲಿ ಧಾರವಾಡದ ನಗರ ಸಭೆಯು ಬೇಂದ್ರೆಯವರ ೫೦ನೆಯ ಹುಟ್ಟು ಹಬ್ಬವನ್ನು ಆಚರಿಸಿತು. ಮುದವೀಡಕರ ಕೃಷ್ಣರಾಯರು ಅಂದಿನ ಸಭೆಗೆ ಅಧ್ಯಕ್ಷ ರಾಗಿದ್ದರು. ಅಂದಿನ ಅವರ ಭಾಷಣ ಸಿಡಿಲಿನಂತೆ ನನ್ನ ಮೇಲೆರಗಿತು. ಧಾರವಾಡದ ಸಂದಿಗೊಂದಿಗಳಲ್ಲಿ ತಾವು ಕಾವ್ಯವನ್ನು ಹೇಗೆ ದೊರಕಿಸಿದರೆಂಬುದನ್ನು ವಿವರಿಸಿ ಹೇಳಿದರು. ಟ್ರೇನಿಂಗ್ ಕಾಲೇಜಿನ ಶಿಕ್ಷಕರ ಆಶ್ರಯದಲ್ಲಿ ಜೀವ ಹಿಡಿದುಕೊಂಡಿದ್ದ ಕನ್ನಡ ಕಾವ್ಯವನ್ನು ಧಾರವಾಡದ ಪರಿಸರದಲ್ಲಿಯ ಹಾಡುಗಳ ಗತ್ತು, ಲಯ, ಧಾಟಿ ಗಳಿಂದ ಜೀವಂತವಾಗಿಸಿದ ಕೆಲಸವನ್ನು ಅವರು ಬಣ್ಣಿಸಿ ಹೇಳಿದರು. ಕದ್ದು ಉತ್ತತ್ತಿ ತಿಂದರೂ ಶಕ್ತಿ ಬರುವುದೇನು ನಿಲ್ಲುವುದಿಲ್ಲ ಎಂದು ಅವರು ಹೇಳಿದ ಮಾತಿಗೆ ಇಡೀ ಸಭೆ ನಕ್ಕಿತು. ಆದರೆ ಅವರ ಈ ಮಾತಿನ ಗಂಭೀರವಾದ ಅರ್ಥ

ವ್ಯಾಪ್ತಿಯನ್ನು ತಿಳಿಯಲು ಸಾಕಷ್ಟು ಕಾಲ ಹಿಡಿಯಿತು. ಈ ಮಾತನ್ನು ಆಡಿದಾಗ ಅವರು ಪ್ರಬುದ್ಧ ಕವಿಯಾಗಿದ್ದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಆರು ನೂರನೆಯ ವರ್ಷದ ಜಯಂತಿಯ ಹೊತ್ತಿಗೆ ನೂರು ರೂಪಾಯಿ ಕೊಟ್ಟರೆ ಮಾತ್ರ ಕವಿತೆ ಹಾಡುವೆನೆಂದು ಹಟತೊಟ್ಟು ಸಾವಿರಾರು ರೂಪಾಯಿ ಸಂಗ್ರಹಿಸಿದ, "ಹಕ್ಕಿ ಹಾರುತಿದೆ", "ಗಂಗಾವತರಣ", "ಕುಣಿಯೋಣು ಬಾರ", "ಬೆಳಗು" ಮುಂತಾದ ಯುಗಪ್ರವರ್ತಕ ಕವಿತೆಗಳನ್ನು ಹಾಡಿ ಕೀರ್ತಿ ಸಂಪಾದಿಸಿದ್ದ ಕವಿ ಅವರು ಎಂಬುದು ಆಗ ನನಗಿನ್ನೂ ಗೊತ್ತಾಗಿರಲಿಲ್ಲ.

ಅವರ ಕಾವ್ಯಶಕ್ತಿ ಮತ್ತು ಶಕ್ತಿಗಳಲ್ಲಿನ ಅವರ ನಂಬಿಕೆ:

ಸೊಲ್ಲಾಪುರದ ಡಿ.ಎ ವ್ಹಿ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾಗಿ ಬೇಂದ್ರೆಯವರು ಕೆಲಸ ಮಾಡುತ್ತಿದ್ದಾಗ ನಾನು ಅವರನ್ನೊಮ್ಮೆ ಅವರ ನೀಲಾ ನಗರದ ಮನೆಯಲ್ಲಿಯೇ ಭೆಟ್ಟಿಯಾಗಿದ್ದೆ. ಇದು ನನ್ನ ಮೊದಲ ನಿಕಟವಾದ ಪರಿಚಯವೆನ್ನಬಹುದು. ಗದುಗಿನಲ್ಲಿ ಹುಯಿಲಗೋಳ ನಾರಾಯಣರಾಯರಿಗೆ ಸತ್ಕಾರ ಸಮಾರಂಭ ನಡೆದಿತ್ತು. ಅದಕ್ಕೆ ಬೇಂದ್ರೆಯವರು ಬರಬೇಕೆಂದು ಜಿ. ಬಿ. ಜೋಶಿಯವರ ಆಸೆ. ಅವರನ್ನು ಕರೆದುಕೊಂಡು ಬರಲು ನನ್ನನ್ನು ಕಳಿಸಿದ್ದರು ಬೇಂದ್ರೆಯವರು ಆ ಸಮಾರಂಭಕ್ಕೆ ಬರಲಿಲ್ಲವೆಂಬ ಮಾತು ಬೇರೆ. ಆದರೆ ಬೆಳಗಿನಿಂದ ಸಂಜೆಯವರೆಗೆ ತಮ್ಮ ಮನೆಯಲ್ಲಿ ನನ್ನನ್ನು ಕೂಡಿಸಿಕೊಂಡು ತಾವು ಬರೆದಿದ್ದ ಅನೇಕ ಕವಿತೆಗಳನ್ನು ಓದಿತೋರಿಸಿದರು. ಅವರಿಗಾಗಲಿ ನನಗಾಗಲಿ ಕಾಲದ ಪರಿವೆ ಎಳ್ಳಷ್ಟೂ ಇರಲಿಲ್ಲ. ಆಗ ನಾನು ಇನ್ನೂ ವಿಮರ್ಶೆಯನ್ನು ಬರೆದಿರಲಿಲ್ಲ. ನನ್ನವು ಒಂದೆರಡು ಕವಿತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು, ಅಷ್ಟೆ. ಅವರ ಕಾವ್ಯದ ಅನನ್ಯ ಅಭಿವ್ಯಕ್ತಿಯಿಂದ ನಾನು ಪ್ರಭಾವಿತನಾಗಿದ್ದೆ. ಕಾವ್ಯವನ್ನು ಓದುವಾಗ ಅವರ ವ್ಯಕ್ತಿತ್ವ ಸಂಪೂರ್ಣವಾಗಿ ಬದಲಾಗುತ್ತಿತ್ತು. ದೈವಿಕತೆಯಿಂದ ಪರವಶರಾದಂತೆ ಅವರು ಕಾಣುತ್ತಿದ್ದರು. 'ಸ್ವರೂಪ ದೀಪ' ಎಂಬ ಅವರ ಕವಿತೆಯನ್ನು ನಾನು ಅವರೊಂದಿಗೆ ಚರ್ಚಿಸುತ್ತಿದ್ದಾಗ ಅವರೇ ಹೇಳಿದ ಮಾತು ಇದು: "ಏನೇನೋ ಶಕ್ತಿಗಳು ಬಂದು ಕಾಡುತ್ತವೆ. ಹೂಳಿದ್ದ ನಿಧಿಯನ್ನು ತೋರಿಸುತ್ತೇವೆ ಬಾ ಎನ್ನುತ್ತವೆ. ತಂಪು ಗಾಳಿ ಹೆಗಲಿಗೆ ಕೈಹಾಕಿ ಹಳೆಯ ಸಲಿಗೆಯನ್ನು ತೋರಿಸುತ್ತದೆ. ಇಂಥ ಎಳೆತನಗಳನ್ನೆಲ್ಲ ನಿಗ್ರಹಿಸಿಕೊಂಡು ನನ್ನ ವ್ಯಕ್ತಿತ್ವಕ್ಕೇ ತಿರುಗಿಬರುತ್ತೇನೆ. ಆದರೆ ದೃಶ್ಯ ಜಗತ್ತಿನ ಹಿಂದೆ ಇರಬಹುದಾದ ಜಗತ್ತಿನ ಅನುಭವಗಳಿಗೆ ಒಂದೊಂದು ಕವಿತೆಯನ್ನೂ ಬರೆದು ಅರ್ಪಿಸಿಬಿಡುತ್ತೇನೆ." ದುಷ್ಟ ಶಕ್ತಿಗಳು ಪ್ರಲೋಭನವನ್ನು ತೋರಿಸಿ ಮರುಳುಗೊಳಿಸುತ್ತವೆ. ಒಳ್ಳೆಯ ಶಕ್ತಿಗಳು ಅದೃಶ್ಯವಾಗಿ ಬೆನ್ನ ಹಿಂದೆಯೇ ಇದ್ದು ಕಾಪಾಡುತ್ತವೆ ಎಂದು ಅವರ ದೃಢ ನಂಬಿಕೆಯಾಗಿತ್ತು.

ಸಮರಸವೇ ಜೀವನ:

ಬೇಂದ್ರೆಯವರು ತಮ್ಮ ಕಾವ್ಯದ ಮೂಲಕವಾಗಿ ಪ್ರಸ್ತಾಪಿಸಿದ ಸಮರಸ-ಸಿದ್ಧಾಂತ ಸಾಕಷ್ಟು ಪ್ರಚಾರವನ್ನು ಪಡೆದಿದೆ.

"ಋತುಗಳು ನಡೆಸಲಿ ರಂಗಣಗುಣಿತ
ಜೀವ ನುಡಿಸುತಿರೆ ವೀಣಾಕ್ವಣಿತ
ಬಾನುಲಿಯಲಿ ಮಾತನಾಡುವ ಬನ್ನಿಗಾಳಿದೇರನೇರಿ
ಈ ರಸ ಮೀರಿ ಆ ರಸವೇರಿ ರಸರಸಿಕರು ಸೇರಿ"

ಬೇಂದ್ರೆಯವರ "ಇಳೆ" ಎಂಬ ಕವಿತೆಯಲ್ಲಿಯ ಕೆಲವು ಸಾಲುಗಳಿವು. ಅವರ ಕವಿ ಜೀವನದ ಅಭೀಪ್ಸೆಯನ್ನು ಇವು ಧ್ವನಿಸುತ್ತವೆ. ಆದರೆ ಈ ಸಮರಸದ ಸಂವಾದದ ದರ್ಶನವನ್ನು ಅವರು ಸಾಕಷ್ಟು ವಿರಸವನ್ನು ಅನುಭವಿಸಿ, ವಿವಾದವನ್ನು ಮೆಟ್ಟಿ ಪಡೆದಿದ್ದರು. ಅದು ಕೊನೆಗೂ ವೈಯಕ್ತಿಕವಾದ ಗೆಲುವಾಗಿಯೇ ಉಳಿಯಿತೆಂದು ಅನಿಸುತ್ತದೆ.

ಜಿನೇವಾ ಕವಿ ಸಮ್ಮೇಳನಕ್ಕೆ ಹೋಗಲಿಲ್ಲ:

ಕೆಲ ವರ್ಷಗಳ ಹಿಂದೆ ಅವರಿಗೆ ಜಿನೇವಾದಲ್ಲಿ ನಡೆಯಲಿದ್ದ ಒಂದು ಜಾಗತಿಕ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಣ ಬಂದಿತ್ತು. ಅವರು ಹೋಗಲಿಲ್ಲ. ಮುಂದೆ ಕೆಲ ದಿನಗಳಾದ ಮೇಲೆ ಧಾರವಾಡಕ್ಕೆ ನಾನು ಹೋಗಿದ್ದಾಗ ಆಮಂತ್ರಣವನ್ನು ಒಪ್ಪಿಕೊಂಡು ಹೋಗಿದ್ದರೆ ಒಳ್ಳೆಯದಾಗುತ್ತಿತ್ತೆಂದು ನಾನು ಹೇಳಿದೆ. ಅದಕ್ಕೆ ಅವರ ಪ್ರತಿಕ್ರಿಯೆ ಇದು: "ಅಲ್ಲಿ ಹೋಗಿ ಕವಿತೆಗಳನ್ನು ಓದಿ ದೊಡ್ಡದೇನನ್ನಾದರೂ ಸಾಧಿಸಬಹುದಾಗಿತ್ತೆಂದು ನನಗನಿಸುವುದಿಲ್ಲ. ಐವತ್ತು ವರ್ಷಗಳಿಂದ ಧಾರವಾಡದಲ್ಲಿ ಬರೆಯುತ್ತಿದ್ದೇನಲ್ಲ! ಸುತ್ತಮುತ್ತಲಿನ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲ. ಶುಕ್ರವಾರಪೇಟೆ (ಧಾರವಾಡದ ಒಂದು ಭಾಗ)ಯ ಜನರೊಡನೆ ಹತ್ತಿದ ಜಗಳವೇ ಬಗೆಹರಿದಿಲ್ಲ. ಇನ್ನು ಅಲ್ಲಿ ಹೋಗಿ ಏನು ಮಾಡಬಹುದು?" ಕಾವ್ಯವನ್ನು ಬರೆಯಲಿ ಬಿಡಲಿ ಜನರಲ್ಲಿ ಸಾಮರಸ್ಯ ಹುಟ್ಟುವುದು ಹೇಗೆ ಎಂಬುದು ಅವರ ಸಮಸ್ಯೆಯಾಗಿತ್ತು. ಈ ಸಾಮರಸ್ಯದ ಸಾಧನೆಗಾಗಿ ಅವರು ಕಡೆಯತನಕ ಹೋರಾಡಿದರು. ಆದರೆ ಹಾಗೆಂದು ಸತ್ಯಕ್ಕೆ ಅಪಚಾರ ಮಾಡಲು ಅವರು ಸಿದ್ಧರಿರಲಿಲ್ಲ.

ಗೆಳೆಯರ ಗುಂಪು:

ಅವರ ಹಾಗೂ ಶಂ. ಬಾ. ಜೋಶಿಯವರ ನಡುವಿನ ವೈಮನಸ್ಯ ಧಾರವಾಡ-ಕ್ಕೆಲ್ಲ ಸುಪರಿಚಿತವಾದ ವಿಷಯವಾಗಿತ್ತು. ಮಧುರಚೆನ್ನರ ಮರಣದಿಂದ ಮೊದಲಾಗಿ ಬೇಂದ್ರೆ ಮತ್ತು ಬುರ್ಲಿಯವರ ಸಾವಿನವರೆಗೆ "ಗೆಳೆಯರ ಗುಂಪು" ಒಮ್ಮೆ ಅಲ್ಲ ಹತ್ತು ಸಾರೆ ಮುರಿಸುಬಿದ್ದಿದೆ. ಗೆಳೆಯರ ಗುಂಪಿನ ವಿರಸ ಒಂದು ಜನ್ಮಕ್ಕೇ ಮುಗಿಯು-

ವುದಲ್ಲ; ಅದು "ನಂಜುಂಡ ಶಿವ ನುಂಗದಂಥ ನಂಜು" ವಿರಸದ ಕಹಿಯಿಂದಾಗಿ ಬೇಂದ್ರೆಯವರ ಮಾತು ಒಮ್ಮೊಮ್ಮೆ ನಂಜಾಗುತ್ತಿದ್ದವು. ವ್ಯಕ್ತಿಗಳನ್ನು ದ್ವೇಷಿಸದೆ ಅವರಲ್ಲಿಯ ವಿಕೃತಿಯನ್ನು ಮಾತ್ರ ದ್ವೇಷಿಸುವ ವಿವೇಕವನ್ನು ಅವರು ತೋರುತ್ತಿದ್ದರೇನೋ ನಿಜ. ಆದರೆ ವಿಕೃತಿಯನ್ನು ಸಮರ್ಥಿಸುವ ಅಥವಾ ಅದನ್ನು ಮರೆತು ಬಿಡುವ ಕೆಲಸವನ್ನು ಅವರು ಮಾಡಲಿಲ್ಲ. ಕನ್ನಡದಲ್ಲಿ ಅತ್ಯಂತ ಸೃಜನಶೀಲವಾದ ಸಂಘಟನೆಯೆಂದರೆ "ಗೆಳೆಯರ ಗುಂಪು". ಆದರೆ ಸೃಜನಶೀಲತೆ ಎಷ್ಟೇ ಪ್ರಬಲವಾಗಿರಲಿ ಸಂಘಟನೆಗೂ ಅದಕ್ಕೂ ವೈರ ಸಂಬಂಧವಿದೆ. "ಮೂರ್ತಿಯಾದದ್ದಕ್ಕೆ ಪ್ರಳಯ ತಪ್ಪದು" ಎಂಬ ಪ್ರಭುದೇವರ ವಚನ ಶಾಶ್ವತ ಸತ್ಯವಾಗಿದೆ. ಬೇಂದ್ರೆಯವರು ಈ ಮಾತನ್ನು ಮೊದಲೇ ಅರಿತಿದ್ದರೋ ಅಥವಾ ಗುಂಪಿಗೆ ಮಂಗಳವೆತ್ತಿದ ಮೇಲೆ ಅದನ್ನರಿತರೋ ನನಗೆ ಗೊತ್ತಿಲ್ಲ. ಅದೇನೇ ಇದ್ದರೂ ಗುಂಪಿನಲ್ಲಿ ಕೂಡಿದ್ದ ವ್ಯಕ್ತಿಗಳು ಬೇರೆ ಬೇರೆಯಾಗಿಯೇ ಆಗಲಿ ಬೆಳವಣಿಗೆಯನ್ನು ಪಡೆದರು. ಕೆಲವರು ಶ್ರೇಷ್ಠ ಲೇಖಕರಾಗಿ ಮುಂದೆ ಬಂದರು.

ಬೇಂದ್ರೆ–ಕಾವ್ಯದ ಬೆಳವಣಿಗೆ ಮತ್ತು ವಿಮರ್ಶೆ :

ಬೇಂದ್ರೆಯವರ ಕಾವ್ಯ ಬೆಳವಣಿಗೆಯನ್ನು ಪಡೆಯುತ್ತಲೇ ಇತ್ತು. "ಅರಳು–ಮರಳು" ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತ ಮೇಲೆ ಅವರ ಕಾವ್ಯ ಇನ್ನೊಂದು ಬಗೆಯ ವಿರೋಧವನ್ನು ಎದುರಿಸಬೇಕಾಯ್ತು. ಅವರ ಕಾವ್ಯ ಪಡೆದ, ಪಡೆಯುತ್ತಿದ್ದ ಬೆಳವಣಿಗೆಯ ಬಗ್ಗೆಯೇ ವಿಮರ್ಶೆಯು ಸಂಶಯ ಹುಟ್ಟಿಕೊಂಡಿತು. ಜೀವನ–ವಿಮುಖತೆಯು, ಕ್ಲಿಷ್ಟತೆಯು, ಆಧ್ಯಾತ್ಮಿಕತೆಯ ಆರೋಪ ಬರತೊಡಗಿದವು. ಒಂದು ಕಾಲಕ್ಕೆ ನಿರರ್ಗಳವಾಗಿ ಹರಿಯುತ್ತಿದ್ದ ಸೃಜನಶಕ್ತಿಯ ಸೆಲೆ ಬತ್ತಿದಂತೆ ಕೆಲವರಿಗನಿಸಿತು. "ನಾಕು ತಂತಿ" ಸಂಕಲನಕ್ಕೆ ಜ್ಞಾನಪೀಠ ಪುರಸ್ಕಾರ ದೊರೆತ ಮೇಲೆ ವಾತಾವರಣದಲ್ಲಿಯ ಬಿಗಿ ಇನ್ನೂ ಹೆಚ್ಚಾಯಿತು. ಬೇಂದ್ರೆಯವರ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಅ–ವಿಮರ್ಶಕವೆನ್ನಬಹುದಾದ ಮಾತುಗಳು ಬಂದುದರಿಂದ ವಿರೋಧಕ್ಕೆ ವ್ಯಕ್ತಸ್ವರೂಪ ಬಂದಂತಾಯಿತು. ಆದರೆ ಯಾವ ವಿರೋಧಕ್ಕೂ ಬೇಂದ್ರೆಯವರ ಪ್ರತಿಭೆ ಸೋಲಲಿಲ್ಲ. ಅಂದರೆ ವಿಮರ್ಶೆಯ ಸಮರ್ಥನೆಯನ್ನು ಎಂದೂ ಅವರ ಕಾವ್ಯಪ್ರತಿಭೆ ಅವಲಂಬಿಸಲಿಲ್ಲ. ವಿಮರ್ಶಕನ ಅನುಭವ ಪಡೆದು ಈ ಮಾತನ್ನು ನಾನು ಹೇಳುತ್ತಿದ್ದೇನೆ. ವಿಮರ್ಶೆಯ ಬಗ್ಗೆ ಅವರ ನಿಲುವು ಯಾವಾಗಲೂ ತಟಸ್ಥವಾಗಿತ್ತು. ಸ್ವತಃ ಅವರೇ ಸಾಕಷ್ಟು ವಿಮರ್ಶೆಯನ್ನು ಬರೆದಿದ್ದಾರೆ. ಸಾಹಿತ್ಯ ವಿಮರ್ಶೆಯ ಮೂಲತತ್ವಗಳನ್ನು ತಲ–ಸ್ಪರ್ಶಿಯಾಗಿ ಅಭ್ಯಾಸ ಮಾಡಿ ಕೆಲವು ಹೊಸ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಆದರೂ ಸ್ವಂತ ಕಾವ್ಯದ ಬಗ್ಗೆ ಇನ್ನೊಬ್ಬರು ಬರೆದ ವಿಮರ್ಶೆಯ ಬಗ್ಗೆ ಅವರಿಗೆ ಅನಾದರವೂ ಇರಲಿಲ್ಲ, ಆಸಕ್ತಿಯೂ ಇರಲಿಲ್ಲ. ಈ ನಿಲುವು ಸರಿಯಾದದ್ದೆಂದು ನನಗೆ ಈಗ

ತೋರುತ್ತದೆ. ಮುಖ್ಯವಾಗಿ ಅವರಿಗೆ ಕಾವ್ಯ ಮತ್ತು ವಿಮರ್ಶೆಗಳ ರಾಜಕೀಯ ಒಪ್ಪಿಗೆಯಾಗಿರಲಿಲ್ಲ.

ಬೇಂದ್ರೆ—ಭಾಸ್ಕರ ಅಸ್ತಂಗತನಾಗುತ್ತಿದ್ದಾಗ :

ಅಕ್ಟೋಬರ ೧೦, ೧೯೮೧ರಂದು ಬೇಂದ್ರೆಯವರಿಗೆ ಶಸ್ತ್ರಕ್ರಿಯೆ ನಡೆಯುತ್ತಿದ್ದಾಗ ನಾನು ಮತ್ತು ಜಿ. ಬಿ. ಜೋಶಿಯವರು ಆಸ್ಪತ್ರೆಯಲ್ಲಿದ್ದೆವು. ಬಹಳ ಹೊತ್ತಿನವರೆಗೆ ಶಸ್ತ್ರಕ್ರಿಯೆ ನಡೆದದ್ದರಿಂದ ಅಂದು ಅವರನ್ನು ಕಾಣುವುದಾಗಲಿಲ್ಲ. ಅವಕಾಶ್ಕಾಗಿ ಎರಡು ದಿನ ಬಿಟ್ಟು ಮತ್ತೆ ಆಸ್ಪತ್ರೆಗೆ ಹೋಗಿದ್ದೆವು. ಎರಡೂ ಕೈಗಳಲ್ಲಿ Salineನ ಸೂಜಿ ಚುಚ್ಚಿ ಹಿಡಿದಿದ್ದವು. ಮೂಗಿನಲ್ಲಿ Rhyse Tube ಇತ್ತು. ಕಣ್ಣು ತೆರೆದು ನನ್ನನ್ನು ನೋಡಿ ಗುರುತು ಹಿಡಿದರು, ಹತ್ತಿರ ಬರಲು ಸನ್ನೆ ಮಾಡಿದರು. ಬೆರಳುಗಳನ್ನು ಅಲುಗಾಡಿಸಿ ಹಿಡಿಯಕೊಳ್ಳಲು ಸೂಚಿಸಿದರು. ಇಪ್ಪತ್ತು ನಿಮಿಷ ಅವರ ಕೈ ಹಿಡಿದುಕೊಂಡು ಕುಳಿತಿದ್ದೆ ಬೆರಳು ನನ್ನ ಕೈಯೊಡನೆ ಮೌನ ಸಂವಾದ ನಡೆಸಿದ್ದವು. ಕರ್ಣನ ಕವಚಕುಂಡಲಗಳಂತೆ ಮಾತು ಬೇಂದ್ರೆಯವರಿಗೆ ಜೀವನದುದ್ದಕ್ಕೂ ರಕ್ಷೆಯಾಗಿತ್ತು. ಆದರೆ ಈಗ ಅವರ ಗಂಟಲು ಕಟ್ಟಿಹೋಗಿತ್ತು. "ಅವರಿಗೆ ಮಾತಾಡಲಿಕ್ಕೆ ಆಗುವುದಿಲ್ಲ. ಆದರೆ ನೀವು ಮಾತಾಡುತ್ತ ಇರಬೇಕೆಂದು ಅವರ ಅಪೇಕ್ಷೆ". ಇದು ಅವರ ಮಗ ಹೇಳಿದ ಮಾತು. ಆದರೆ ಮಾತಿನ ಸ್ವಾಮಿಯೇ ಸುಮ್ಮನಿದ್ದಾಗ ನಾವೇನು ಮಾತಾಡಿಯೇವು? 'Numbers are more precise than words' ಎಂದು ಅವರೇ ಹಿಂದೊಮ್ಮೆ ನುಡಿದಿದ್ದರು. ಅವರ ಮನಸ್ಸು ಯಾವ ಸಂಖ್ಯೆಯಲ್ಲಿ ಲೀನವಾಗಿತ್ತೊ! ಮಾತಿನಂತೆ ಸಂಖ್ಯೆಗೆ ಪ್ರತಿವಾದವಿಲ್ಲ, ಪ್ರತಿಧ್ವನಿಯಿಲ್ಲ. "ಜಗತ್ತಿನ್ಯಾಗ ಏನು ನಡೀತದೋ ಅದರದೆಲ್ಲಾ ನಿಖರ ಲೆಕ್ಕ ಇರತದ. ಯಾರೂ ಈ ಲೆಕ್ಕದ ಹೊರಗೆ ಇಲ್ಲ." ಬಹುಶಃ ಈ ಲೆಕ್ಕದ ಉತ್ತರ ಅವರಿಗೆ ಸಿಕ್ಕಿತೋ ಏನೋ! ಅವರು ಹೇಳುತ್ತಿದ್ದ ಲೆಕ್ಕ ನನಗಂತೂ ತಿಳಿದಿರಲಿಲ್ಲ. ಅಂದಮೇಲೆ ಉತ್ತರವೂ ಅಷ್ಟೇ ಅಗಮ್ಯವಾಗಿದ್ದೀತು!

ಉಪಸಂಹಾರ :

ಈಗ ಬೇಂದ್ರೆಯವರು ಇಲ್ಲ. ೧೯೮೧ನೆಯ ಇಸ್ವಿಯ ಅಕ್ಟೋಬರ ತಿಂಗಳ ೨೬ನೆಯ ತಾರೀಖು ಸೋಮವಾರ ಮಧ್ಯಾಹ್ನ ೧:೧೫ಕ್ಕೆ ಅವರು ಪ್ರಾಣಬಿಟ್ಟರು. ಆದರೆ ಒಂದು ಮಾತು ಮಾತ್ರ ನಿಜ. ಜೀವನದ ವಿರೋಧಗಳೆಲ್ಲ ಈ ಸಾವಿನಿಂದ ಚಿತ್ರಗಳಾದವು. "ಮರಣಾಂತಾನಿ ವೈರಾಣಿ" ಎಂಬ ಮಾತು ತನ್ನ ಕಾವ್ಯ ಸಂದರ್ಭವನ್ನು ಮೀರಿ ಅರ್ಥವ್ಯಾಪ್ತಿಯನ್ನು ಹೊಂದಿದೆ. ಸಾವಿನಲ್ಲಿಯೇ ಸಮನ್ವಯಗೊಳ್ಳುವ ವಿರೋಧ ನಿಜವಾದ ವಿರೋಧ. ಹಿಂದಿನ ಶತಮಾನದ ಧಾರವಾಡದಲ್ಲಿ ಖಾನಾವಳಿಯನ್ನಿಟ್ಟಿದ್ದ ಗೋದೂಬಾಯಿಯ ಮೊಮ್ಮಗನಾದ ಬೇಂದ್ರೆಯವರು ಜೀವಮಾನವನ್ನು

ಆತ್ಮಗೌರವದಿಂದ ಕಳೆದವರು. ಪ್ರತಿಭೆಯುಳ್ಳವರು ದೇವರನ್ನು ಬಿಟ್ಟು ಯಾರಿಗೂ ತಲೆಬಾಗಿಸಬಾರದು ಎಂದು ಅವರು ನಂಬಿದಂತಿತ್ತು. ಈ ಮಾತನ್ನು ಕೊನೆಯ ಗಳಿಗೆಯ ವರೆಗೆ ಸಾಧಿಸಿ ತೋರಿಸಿದರು. ಅಲ್ಲದೆ ಅವರ ಸ್ವಂತ ಸ್ವಭಾವದಲ್ಲಿ ಕೂಡ ಒದಕ್ಕೊಂದು ವಿರುದ್ಧವಾದ ಅಂಶಗಳು ಸೇರಿಕೊಂಡಿದ್ದವು. ಒಂದು ಅಂಶ ಇನ್ನೊಂದ ರೊಡನೆ ನಾಟಕದಲ್ಲಿಯ ಪಾತ್ರಗಳಂತೆ ವಾದ–ವಿವಾದವನ್ನು ನಡೆಸುತ್ತಿದ್ದುದೂ ಉಂಟು.

"ಮುಖ್ಯವಾದ ವಿವಾದ ಅವರ ಕಾವ್ಯಪ್ರಜ್ಞೆ ಮತ್ತು ಬೌದ್ಧಿಕತೆಯೊಡನೆಯೇ ಇರುತ್ತಿತ್ತು. ಕಾವ್ಯಪ್ರಜ್ಞೆ ತನ್ನೆಲ್ಲ ಶಕ್ತಿಯೊಂದಿಗೆ ಬೌದ್ಧಿಕತೆಯನ್ನು ಮುಟ್ಟಿದಾಗ ಎಂಥ ಕಾವ್ಯ ಅವರಿಂದ ಸೃಷ್ಟಿಯಾಗುತ್ತಿತ್ತೆಂಬುದನ್ನು ವಿವರಿಸಿ ಹೇಳುವ ಕಾರಣ ವಿಲ್ಲ. ಬೇಂದ್ರೆ ಈ ಯುಗದ ಅತ್ಯಂತ ಮೇಧಾವಿಯಾದ ಕವಿ ಎಂದು ಹೇಳಿದರೆ ಅತಿಶಯೋಕ್ತಿಯ ಮಾತಾಗಲಾರದು. ಸ್ಮೃತಿ, ಮತಿ, ಬುದ್ಧಿ, ಧೀ, ಮೇಧಾ, ಪ್ರತಿಭಾ ಎಂದು ಅನೇಕ ಬಗೆಯ ಸ್ತರಗಳನ್ನು ಮನುಷ್ಯನ ಪ್ರಜ್ಞೆಯಲ್ಲಿ ಪ್ರಾಚೀನ ಶಾಸ್ತ್ರಕಾರರು ಗುರುತಿಸಿದ್ದಾರೆ. ಬೇಂದ್ರೆಯವರ ಕಾವ್ಯ ಈ ಎಲ್ಲ ಸ್ತರಗಳನ್ನೂ ಉಪಯೋಗಿಸಿಕೊಂಡು ಅಭಿವ್ಯಕ್ತವಾಗಿರುವುದು ಅದರ ಹೆಚ್ಚಳವಾಗಿದೆ. ಅರ್ಧ ಶತಮಾನಕ್ಕೂ ಮೀರಿ ಗುಡುಗಾಡಿದ ಈ ದನಿ ಈಗ ಮೌನವಾಗಿದೆ. ಈಗ ಉಳಿದಿರು ವುದು ಅಶರೀರವಾಣಿ. ಬಹುಶಃ ಮೊದಲಿನದಕ್ಕಿಂತ ಹೆಚ್ಚು ಪ್ರಭಾವಪೂರ್ಣವಾದ ದನಿ.

"ಬಂತು ರಾಜ್ಯವು
ಹೋಯ್ತು ರಾಜ್ಯವು
ಸಾಕ್ಷಿಗೆಲ್ಲಿಯ ಗೊಮ್ಮಟ
ಬೇರೆ ಕುಡಗಳು
ಕುಲುಮೆಯಲ್ಲಿವೆ
ಅಲ್ಲೆ ಕಾವ್ಯದ ಕಮ್ಮಟ."

(ಸಂಚಯ)

ಕರ್ತಾರನ ಕಮ್ಮಟಕ್ಕಿಂತ ಇದು ಕಡಿಮೆಯದೇನಲ್ಲ.

ಕರ್ನಾಟಕದ ರವೀಂದ್ರನಾಥ ಠಾಕೂರರು

ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕನ್ನಡ ನಾಡಿನಲ್ಲಿ ಐವತ್ತು ವರುಷಗಳಿಗಿಂತ ಹೆಚ್ಚುಕಾಲ ನೋಗಿ ಜನತೆಯನ್ನು ಎಚ್ಚರಿಸಿದ ಮಂಗಳ ಶಂಖನಾದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಬೇಂದ್ರೆಯವರ ಜನನದಿಂದ, ಕಾವ್ಯದಿಂದ ಕನ್ನಡ ನಾಡು ಪುನೀತವಾಯಿತು. ಈ ನಾಡಿನಲ್ಲಿ ಬೇಂದ್ರೆಯವರ ಹೆಸರನ್ನು ಕೇಳದ, ಹಾಡನ್ನು ಕೇಳದ, ಹಳ್ಳಿಯೇ ಇಲ್ಲ. ಅವರು ಜಾನಪದದ ಕವಿಯೇ ಆಗಿದ್ದಾರೆ. ಅವರು ತಮ್ಮ ಕಾವ್ಯವನ್ನು ಹಾಡಿದ ಗಾನ-ಅಭಿನಯದ ಮೋಡಿಯನ್ನು ನಾವೆಂದೂ ಮರೆಯುವುದು ಸಾಧ್ಯವಿಲ್ಲ. ಬೇಂದ್ರೆ ಆರುವತ್ತು ವರ್ಷಗಳ ಕಾಲ, ಕನ್ನಡ ನಾಡಿನ ನೆಲವನ್ನು–ಒಂದು ಅಂಗುಲವೂ ಬಿಡದೆ ನಡೆದಾಡಿದರು. ಜನಜೀವನವನ್ನು ಉನ್ನತಿಗೇರಿಸಿದ ಕಹಳೆಕಾರರಾದರು. ಅವರು ಕನ್ನಡದ ಕಿರೀಟ, ಕಲಶ, ಉಜ್ವಲ ನಂದಾದೀಪ.

ಅವರ ಸಾಹಿತ್ಯದಲ್ಲಿ ಕಾವ್ಯಾನಂದ, ಜೀವನಾನುಭವ, ಜೀವದ ಊರ್ಜೆ ಉತ್ಸಾಹ ಉಲ್ಲಾಸ ಸಂದೇಶ ಎಲ್ಲ ತುಂಬಿವೆ. ಅವರನ್ನು ಐವತ್ತು ಅರುವತ್ತು ವರುಷಗಳಿಂದ ಬಲ್ಲ ಅವರ ಸಹವಾಸದಲ್ಲಿ, ಉತ್ಸಾಹ ಉಲ್ಲಾಸ ಹಾಸ್ಯ, ಕಣ್ಣಿನ ಹೊಳಪು, ನುಡಿಯ ಪಾದರಸ, ಪ್ರತಿಭೆಯ ಝಳಕು ಅದ್ವಿತೀಯ.

ದೊಡ್ಡ ಬಾಳು

ಬೇಂದ್ರೆ, ಕನ್ನಡ ನಾಡಿನ ಜನತೆಯ ಬಾಳಿನಲ್ಲಿ ಶಾಶ್ವತ ಪ್ರಭಾವ. ಅವರ ಕಲೆ ಎಷ್ಟೇ ದೊಡ್ಡದಾದರೂ ಗಾರುಡಿಗತನದ್ದಾಗಿದ್ದರೂ ಅವರ ಬಾಳು ಅದಕ್ಕಿಂತ ದೊಡ್ಡದು. ಸದಾ ಯಾವುದೋ ಬೇರೆ ಆಧ್ಯಾತ್ಮಿಕ ಲೋಕದಲ್ಲಿ ವಿಹರಿಸುತ್ತಿರುವಂತೆ ತೋರುತ್ತಿದ್ದರು. ಅವರ ಬಾಳಿಗೂ ಕಾವ್ಯಕ್ಕೂ ನಿಕಟ ಸಂಬಂಧವಿತ್ತು. ಅವರ ಉಸಿರು ಕಾವ್ಯವೇ ಆಗಿದ್ದರೂ ಸ್ಫೂರ್ತಿ ಒಳ ಅಂತರಂಗ ಆಧ್ಯಾತ್ಮಿಕವೇ ಆಗಿತ್ತು. ಅವರ ಜೀವನವೇ ಒಂದು ಕಲಾತ್ಮಕ ಕಾವ್ಯವಾಗಿತ್ತು. ಅಲ್ಲಿ ವಿರಸ ಅಸಂಗತ ಇರಲಿಲ್ಲ. ಅವರೂ ಗಾಂಧೀಜಿಯಂತೆ "ನನ್ನ ಜೀವನವೇ ನನ್ನ ಕಲೆ" ಎಂದು ಹೇಳಿಕೊಳ್ಳಬಲ್ಲವರಾಗಿದ್ದರು. ಅವರ ಬುದ್ಧಿ ಸ್ವಚ್ಛವೂ ಕುಶಾಗ್ರವೂ ಸದಾ ವಜ್ರದಂತೆ ಹೊಳೆಯುವುದೂ ಆಗಿದ್ದಿತು. ವಿರಸವೇ ಮರಣ, ಸಮರಸವೇ ಜೀವನ ಎಂಬುದು ಅವರು ನಮಗೆ ನೀಡಿದ ಆಕರ್ಷಣೀಯವಾದ ಜೀವನ ವೇದಾಂತ. ಅವರ ಜೊತೆ ನಾವು ಇದ್ದರೆ – ಒಂದು ಗಂಟೆಯಾಗಲೀ ನಾಲ್ಕು ಗಂಟೆಯಾಗಲೀ – ಒಂದು ವಿಲಕ್ಷಣವಾದ ಸತ್ಪರಿಣಾಮಕ್ಕೆ ಒಳಗಾಗಿ ಹೊಸ ಸಂದೇಶವನ್ನು ಪಡೆಯುತ್ತಿದ್ದೆವು.

ಬೇಂದ್ರೆ ಹೆಸರಿನ ಮೋಡಿ :

"ಕರ್ನಾಟಕ ಏಕೀಕರಣ ಚಳವಳಿಯ ದೀರ್ಘಾವಧಿ ಹೋರಾಟದಲ್ಲಿ–1937–38 ಇರಬಹುದು– ಸದಾಶಿವರಾವ್ ಗರೂಡರು ತಮ್ಮ ಪ್ರಸಿದ್ಧವಾದ ನಾಟಕಗಳನ್ನು ಬೆಂಗಳೂರಿನಲ್ಲಿ ಆಡುತ್ತಿದ್ದರು ಆಗ ಅವರು ಒಂದು ದಿನ ಬೇಂದ್ರೆಯವರ ಗೌರವಾರ್ಥವಾಗಿಯೇ ಒಂದು ನಾಟಕವನ್ನು ಆಡಿದರು. ನಾಟಕಕ್ಕೆ ಮುಂಚೆ ನಾನು ಬೇಂದ್ರೆಯವರನ್ನು ನನ್ನ ಮನೆಗೆ ಕರೆದುಕೊಂಡು ಹೋಗಿದ್ದೆ. ನಾಟಕ ಇನ್ನೇನು ಪ್ರಾರಂಭವಾಗಬೇಕು ಎನ್ನುವ ವೇಳೆಗೆ– ಒಂದು ಗಳಿಗೆ ತಡವಾಗಿಯೇ – ನಾಟಕದ ಡೇರೆಯ ಬಳಿಗೆ ಬಂದೆವು. ಪ್ರವೇಶ ಚೀಟಿಗಳನ್ನು ನೋಡಿ, ಒಳಕ್ಕೆ ಬಿಡುವವನೊಬ್ಬ ಬಾಗಿಲಲ್ಲಿ ನಿಂತಿದ್ದ ಅವನಿಗೆ ನನ್ನ ಗುರುತಾಗಲೀ ಬೇಂದ್ರೆಯವರ ಗುರುತಾಗಲೀ ಇರಲಿಲ್ಲ. ಅವನು ನಮ್ಮನ್ನು ಒಳಕ್ಕೆ ಬಿಡದೆ ತಡೆದ. ಬೇಂದ್ರೆಯವರನ್ನೇ "ನೀವ್ಯಾರು?" ಎಂದು ತಡೆದ. ನಾನು ಜವಾಬು ಕೊಡುವುದಕ್ಕೆ ಮುಂಚೆ ಬೇಂದ್ರೆಯವರೇ "ನಾವು ಬೇಂದ್ರೆ ಕಡೆಯ ಮಂದಿ" ಎಂದರು. ಕಾವಲುಗಾರ ನಮ್ಮನ್ನು ಸಂತೋಷದಿಂದಲೇ ಒಳಕ್ಕೆ ಬಿಟ್ಟ. ನಾನು ಬೇಂದ್ರೆಯವರಿಗೆ "ಬೇಂದ್ರೆಯವರ ಕಡೆಯವರು ಎಂದು ಯಾಕೆ ಹೇಳಿದಿರಿ? ಬೇಂದ್ರೆಯವರೇ ಎಂದು ನಾನು ಹೇಳಬೇಕೆಂದಿದ್ದೆ" ಎಂದಾಗ, ಬೇಂದ್ರೆ "ನಾನೂ ನೀವೂ ಅವನಿಗೆ ಮುಖ ಪರಿಚಯವಿಲ್ಲ. ಆದುದರಿಂದಲೇ ಕೇಳಿದ. ಬೇಂದ್ರೆಯ ಕಡೆಯವರು ಎಂದು ಹೇಳಿದುದರಿಂದ ನಮಗೆ ಪ್ರವೇಶ ಸಿಕ್ಕಿತು" ಎಂದರು.

ಆಧ್ಯಾತ್ಮಿಕತೆ :

ಈ ಐವತ್ತು ವರುಷಗಳಲ್ಲಿ ಬೇಂದ್ರೆ ತಮ್ಮ ಖ್ಯಾತಿಯನ್ನು ಅಚ್ಚಳಿಯದಂತೆ ಉಳಿಸಿಕೊಂಡೇ ಬಂದರು. ಅವರ ಇಂದ್ರಿಯ ಪಟುತ್ವ ಬುದ್ಧಿಯ ಪ್ರಖರತೆ ಯಾವಾಗಲೂ ಮಾಸಲೇ ಇಲ್ಲ. ಅನೇಕ ವೇಳೆ ಅವರು ಮಾತು ಮತ್ತು ಮುಖಭಾವದಲ್ಲಿ ಬೈರಾಗಿಯಂತೆ, ಅವಧೂತನಂತೆ ಸಹ ಕಾಣುತ್ತಿದ್ದರು. ನಮ್ಮ ಕೈಯಿಂದ ನುಣುಚಿಕೊಂಡು ಆಧ್ಯಾತ್ಮಿಕದತ್ತ ಗಾಳಿಯಾಗಿಯೇ ಹೊರಟು ಹೋಗುತ್ತಾರೋ ಎಂಬ ಭಯವೂ ಉಂಟಾಗುತ್ತಿದ್ದಿತು. ಆದರೂ ಸಹ ಸ್ನೇಹಿತರನ್ನು ಕಂಡಾಗ ಪೂರ್ಣ ವಿಶ್ವಾಸದಿಂದ ಮಿತ್ರ ಸಮಾಗಮದ ಸಮಾರಂಭವನ್ನೇ ಆಚರಿಸುತ್ತಿದ್ದರು.

ಈಗ ನಾಲ್ಕು ವರ್ಷಗಳ ಕೆಳಗೆ ಕರ್ನಾಟಕ ವಿಶ್ವ ವಿದ್ಯಾನಿಲಯ ಆಚರಿಸಿದ ಜಾನಪದ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಿ ಹೋಗಿದ್ದೆ. ಮರುದಿನ ಬೆಳಗ್ಗೆ ಬೇಂದ್ರೆಯವರನ್ನು ನೋಡಲು ನಾನೂ–ಲಕ್ಷ್ಮೇಶ್ವರ ಕಾಲೇಜಿನ ಕನ್ನಡ ಅಧ್ಯಾಪಕ ಕೆರಿಮನಿಯವರೂ ಬೇಂದ್ರೆಯವರ ಮನೆಗೆ ಹೋದೆವು. ವಾಮನರಾವ್ ಬೇಂದ್ರೆ ಅಂಗಳದಲ್ಲಿ ಕುಳಿತಿದ್ದರು. "ಬೇಂದ್ರೆಯವರು ಸ್ನಾನಮಾಡುತ್ತಿದ್ದಾರೆ. ಕುಳಿತುಕೊಳ್ಳಿ"

ಎಂದರು. ನಾನು "ನಿಧಾನವಾಗಿ ಬರಲಿ, ಆತುರಪಡಿಸಬೇಡಿ. ನಮಗೆ ಅವಸರವಿಲ್ಲ" ಎಂದೆ. ನಾನು ಸಣ್ಣ ದನಿಯಲ್ಲಿಯೇ ಸಂಭಾಷಣೆ ನಡೆಸಿದ್ದರೂ ಸೂಕ್ಷ್ಮ ಕಿವಿಯುವರಾದ ಬೇಂದ್ರೆಯವರಿಗೆ ಅದು ಕೇಳಿಸಿರಬೇಕು. ಅವರು ಆತುರ ಆತುರವಾಗಿಯೇ ಸ್ನಾನ ಮಾಡಿ – ಪೂರ್ಣವಾಗಿ ನೀರನ್ನೂ ಒರಸಿಕೊಳ್ಳದೆ, ಸೊಂಟಕ್ಕೆ ಚೌಕವನ್ನು ಸುತ್ತಿಕೊಂಡು, ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದುಕೊಂಡು "ಏ ಗೊರೂರ ಇಲ್ಲಿ ನೋಡು" ಎಂದು ಹೇಳುತ್ತ ಬಂದೇಬಿಟ್ಟರು. ಅಷ್ಟು ದೊಡ್ಡ ಕವಿಗಳಾಗಿ ಆಧ್ಯಾತ್ಮಿಕ ಪುರುಷರೇ ಆಗಿದ್ದರೂ ಮಾನವೀಯ ಸಂಬಂಧ ವಿಶ್ವಾಸ, ಅವುಗಳ ಪ್ರಕಟನೆ ಇದಕ್ಕೆ ಅವರು ಬಹಳ ಮೌಲ್ಯವನ್ನು ಕೊಡುತ್ತಿದ್ದರು. ಮತ್ತೊಂದು ಸಂದರ್ಭದಲ್ಲಿ ಅವರು "ಮೈಸೂರು ವಿಶ್ವವಿದ್ಯಾನಿಲಯ. ಡಾ|| ಹಾ. ಮಾ. ನಾಯಕ್, ಡಾ|| ಜವರೇಗೌಡರು ನನಗೆ ಅತ್ಯಂತ ಆತ್ಮೀಯವಾದ ಸನ್ಮಾನವನ್ನೂ ಗೌರವವನ್ನೂ ಮಾಡಿದರು. ನನಗೆ ತುಂಬ ತೃಪ್ತಿಯಾಯಿತು" ಎಂದರು. ಬೇಂದ್ರೆ ಅಂಥ ಸ್ನೇಹಪರ ವ್ಯಕ್ತಿ.

ಒಂದು ವಿನೋದ ಪ್ರಸಂಗ:

ಬೇಂದ್ರೆಯವರು ತುಂಬ ವರ್ಣರಂಜಿತ ವ್ಯಕ್ತಿಯಾದುದರಿಂದ ಅವರಿಗೆ ಸಂಬಂಧಿಸಿದಂತೆ ಅನೇಕ ವಿನೋದ ಹಾಸ್ಯಪೂರಿತ ಕಥೆಗಳೂ ಹುಟ್ಟಿವೆ; ಹುಟ್ಟಿಕೊಳ್ಳುತ್ತವೆ. ಒಂದು ಸಲ, ಒಂದು ಸಭೆಯಲ್ಲಿ ಬೇಂದ್ರೆಯವರು ಭಾವನಾಪೂರಿತರಾಗಿ ವಾಗ್ರಸ್ತ ವಿಷಯವನ್ನು ಚರ್ಚಿಸಿ ಸರ್‍ರನೆ ಸಭೆಯನ್ನು ಬಿಟ್ಟು ಹೊರಟೇಬಿಟ್ಟರು. ಹೊರಡುವಾಗ ಆತುರದಲ್ಲಿ – ಅವರು ಬರುವಾಗ ಛತ್ರಿಯನ್ನು ತಂದಿಲ್ಲದಿದ್ದರೂ, ಬೇರೊಬ್ಬರ ಛತ್ರಿಯನ್ನು ಹಿಡಿದುಕೊಂಡು ಹೋದರು" ಎಂಬ ಸುದ್ದಿ ಪ್ರಕಟವಾಯಿತು. ಆಗ ನಾನು ಬೇಂದ್ರೆಯವರಿಗೆ ಪ್ರಶಂಸೆ ಎಂಬಂತೆ ಒಂದು ಕಾಗದ ಬರೆದೆ; ಅದರಲ್ಲಿ ಹೀಗೆ ಹೇಳಿದ್ದೆ: "ನಿಮ್ಮ ಭಾವನಾಪರತೆ, ಅನ್ಯಮನಸ್ಸು, ನಿರ್ಲಕ್ಷ್ಯ ಎಷ್ಟು ಮಟ್ಟಿಗೆ ಇದೆ ಎಂದರೆ, ನೀವು ಕಾವ್ಯದ ಗುಂಗಿನಲ್ಲಿ, ಛತ್ರಿಯನ್ನು ತಂದಿಲ್ಲ ಎಂಬುದನ್ನೂ ಮರೆತು, ಬೇರೊಬ್ಬರ ಛತ್ರಿಯನ್ನು ತೆಗೆದುಕೊಂಡು ಹೋದಿರಂತೆ" ಎಂದು. ಮರುದಿನವೇ ಬೇಂದ್ರೆಯವರಿಂದ ಪ್ರತ್ಯುತ್ತರ ಬಂದಿತು: "ನಾನು ಸಭೆಗೆ ನನ್ನ ಛತ್ರಿಯನ್ನು ತೆಗೆದುಕೊಂಡುಹೋಗಿದ್ದೆ. ಕೈತಪ್ಪಿ ಅದರ ಬದಲು ಬೇರೊಂದು ಛತ್ರಿಯನ್ನು ಹಿಡಿದುಕೊಂಡುಬಂದೆ. ಹಾಗಲ್ಲದೆ ಬೇರೊಬ್ಬರ ಛತ್ರಿಯನ್ನು ಸುಮ್ಮನೆ ಹಿಡಿದುಕೊಂಡು ಬರುವಷ್ಟು ನನ್ನ ಅನಾಸಕ್ತಿಯೂ ಆಧ್ಯಾತ್ಮವೂ ಮುಂದುವರಿದಿಲ್ಲ" ಎಂದು ಬರೆದರು.

ಜಂಗಮ ಶಕ್ತಿ:

ಬೇಂದ್ರೆ, ಸಾರ್ವಜನಿಕ ಕವಿಯೂ ಹೌದು; ಕವಿಗಳ ಕವಿಯೂ ಹೌದು. ಅವರ ಕಾವ್ಯ, ಜಗತ್ತಿನ ಯಾವ ಶ್ರೇಷ್ಠ ಕವಿಯ ಕಾವ್ಯಕ್ಕೂ ಕಡಿಮೆಯದಲ್ಲ.

ಜೊತೆಗೆ ಸರ್ವ ಸಾಮಾನ್ಯರು ಅನುಭವಿಸಬಹುದಾಗಿದ್ದ ಸುಖ-ದುಃಖ, ಸಾವು-ನೋವು, ಪ್ರೇಮ ಜೀವನದ ಆಸೆ ಉದಾರತೆ, ಉನ್ನತ ಮೌಲ್ಯ ಇವುಗಳನ್ನೆಲ್ಲ ಒಳಗೊಂಡಿದೆ. ಬೇಂದ್ರೆಗಿಂತ ಹೆಚ್ಚು ಕಮ್ಯೂನಿಸ್ಟರೂ ಜನಪ್ರಿಯರೂ ಆದ ಕವಿ ಬೇರೊಬ್ಬರು ಇಲ್ಲ. "ಉತ್ತರ ಧ್ರುವದಿಂ ದಕ್ಷಿಣ ಧ್ರುವಕೆ ಚುಂಬಕ ಗಾಳಿಯು ಬೀಸುತಿದೆ" ಎಂದು ಹಾಡಿದ ಕವಿಯ ಗೀತದಂತೆ ಈ ನಾಡಿನ ತುಂಬೆಲ್ಲ ಬೇಂದ್ರೆಯವರ ಗಾಯನ ಗಾಳಿ ಆಡುತ್ತಿದೆ ಪಂಡಿತ ಜವಾಹರ್‌ಲಾಲ್ ನೆಹ್ರೂ, ತಮ್ಮ ಚಿತಾಭಸ್ಮವನ್ನು-ತಮ್ಮ ದೇಶಪ್ರೇಮದ ಗುರುತಿಗಾಗಿ ಭಾರತದ ನೆಲದಲ್ಲೆಲ್ಲ ಸಿಂಪಡಿಸಬೇಕೆಂದು ಬಯಸಿದರು. ಹಾಗೆಯೇ ಬೇಂದ್ರೆಯವರ ಗೀತೆ, ಕನ್ನಡ ನಾಡಿನಲ್ಲೆಲ್ಲ ತಾನೇ ತಾನಾಗಿ ಹರಡಿದೆ. ಬೇಂದ್ರೆ ಒಂದು ಅಸಾಧ್ಯ ಜಂಗಮ ಶಕ್ತಿ; ಧೂಮಕೇತು. "ಗಂಡಸಾದರೆ ನಿನ್ನ ಬಲಿ ಕೊಡುವೆಯೇನು?" ಎಂದು ಹಾಡಿ, ಕುಣಿದು ಈ ನಾಡನ್ನೇ ಕುಣಿಸಿಬಿಟ್ಟರು. ಕನ್ನಡಿಗರ ಜಾಗೃತಿಗಾಗಿ ಒಬ್ಬ ವ್ಯಕ್ತಿ, ಒಂದು ಬಾಳಿನಲ್ಲಿ ಸಾವಿರಾರು ವ್ಯಕ್ತಿಗಳ ಅನೇಕ ಬಾಳಿನ ಕಾರ್ಯವನ್ನು ಸಾಧಿಸಿದರು. ತಮ್ಮ ಸಿದ್ಧಿಯನ್ನೂ ಪಡೆದರು. ಇದರೊಂದಿಗೆ ಬೇಂದ್ರೆಯವರ ಯುಗ, ಬೇಂದ್ರೆಯವರ ವರ್ಷ ಮುಗಿಯಿತು. ಬೇಂದ್ರೆ ಕನ್ನಡ ಕವಿಯಾದರೂ ಕಾಲಕ್ರಮದಲ್ಲಿ ವಿಶ್ವಕವಿಯಾಗುತ್ತಾರೆ. ಜಗತ್ತಿಗೆ ಇವರ ಕಾವ್ಯದ ಸತ್ವ ಅನುವಾದದ ಮೂಲಕವಾಗಿಯಾದರೂ ತಿಳಿಯುತ್ತದೆ. ಇವರು ವರಕವಿಯೂ ಹೌದು; ಚಿರಕವಿಯೂ ಹೌದು.

ಕರ್ನಾಟಕದ ಠಾಕೂರರು :

ಬೇಂದ್ರೆಯವರ ಕಾವ್ಯಗಳನ್ನು ಓದುವ, ಕಥೆಯನ್ನು ಕೇಳುವ ಮುಂದಿನ ಪೀಳಿಗೆಗೆ ಬೇಂದ್ರೆಯವರಂಥವರು ಇದ್ದು ನಮ್ಮೊಂದಿಗೆ ನಮ್ಮ ಜೊತೆಯಲ್ಲಿ ಓಡಾಡಿದರೆಂದು ನಂಬುವುದು ಕಷ್ಟವಾಗುವುದು. ಬೇಂದ್ರೆ ದೇಹದಿಂದ ಬದುಕಿದ್ದುದಕ್ಕಿಂತ ಹೆಚ್ಚಾಗಿ ಆತ್ಮದಿಂದ ಬದುಕಿದರು. ಅವರು ಎಲ್ಲರಿಗೂ ಸರ್ವ ಸುಲಭರಾಗಿದ್ದರೂ, ಅವರೊಂದಿಗೆ ಹೆಚ್ಚು ನಿಕಟ ಸಂಪರ್ಕವನ್ನು ಹೊಂದುವ ಸುಯೋಗ ಕೆಲವರಿಗೆ ದೊರಕಿತು. ಒಂದು ಸಲ ಬ್ರಿಟಿಷ್ ಸರ್ಕಾರ ಅವರನ್ನು ಮುಗದ್ ಎಂಬ ಊರಿನಲ್ಲಿ ಸ್ಥಾನಬದ್ಧತೆಯಲ್ಲಿ ಇಟ್ಟಿದ್ದರು. ಅಲ್ಲಿ ವರದಾಚಾರ್ಯರೆಂಬ ನಮ್ಮ ಗೊರೂರಿನ ಮಿತ್ರರೊಬ್ಬರು ಇದ್ದರು ಬೇಂದ್ರೆಯವರಿಗೆ ನನ್ನನ್ನು ಸಂಧಿಸಲು ಮನಸ್ಸಾಯಿತು. ಆದರೆ ಅವರ ಮೇಲೆ ಸದಾ ಅನೇಕ ಪೊಲೀಸರ ಕಣ್ಣುಗಳಿದ್ದವು. ವರದಾಚಾರ್ಯರೂ ಸಹ ಸರ್ಕಾರಿ ಅಧಿಕಾರಿಯಾದುದರಿಂದ ಎಚ್ಚರಿಕೆಯಿಂದ ಇರಬೇಕಾಗಿತ್ತು. ಕೊನೆಯಲ್ಲಿ ನಾನೂ ವೇಷವನ್ನು ಬದಲಿಸಿದ ಬೇಂದ್ರೆಯವರೂ ಮುಗದ್ ಸಂತೆಯಲ್ಲಿ ಸಂಧಿಸುವುದೆಂದು ಏರ್ಪಾಡಾಯಿತು. ಮುಗದ್ ಸಂತೆ ದೊಡ್ಡ ಸಂತೆ. ಆ ದೊಡ್ಡ ಸಂತೆಯಲ್ಲಿ ನಾನೂ, ಬೇಂದ್ರೆ ಸೇರಬೇಕಾಗಿತ್ತು. ಸಮವಸ್ತ್ರದ ಪೊಲೀಸರು, ಸಾದಾ ವಸ್ತ್ರದ ಪೊಲೀಸರು ಸಂತೆಜನರ ಜೊತೆ ಸೇರಿಕೊಂಡು ಎಲ್ಲರನ್ನೂ ಸಂಶಯ ದೃಷ್ಟಿ

ಯಿಂದಲೇ ನೋಡುತ್ತಿದ್ದರು. ನಾನು ವರದಾಚಾರ್ಯರ ಮಾತಿನಂತೆ, ತಲೆಗೆ ಧಾರವಾಡದ ರೈತರ ಬಟ್ಟೆಯಂತೆ ಸ್ವಲ್ಪ ಕೆಮ್ಮಣ್ಣು ಛಾಯೆಯ ಬಟ್ಟೆ; ಹೆಗಲ ಮೇಲೆ ಗೂರಲ ಹೊಸೂರಿನ ಕರಿಕಂಬಳಿ–ವರದಾಚಾರ್ರು ಕೊಟ್ಟದ್ದು, ಚುಂಗು ಬಿಟ್ಟ ಕಾಸೆಯ ಕಚ್ಚೆ ಪಂಜೆ ಇವುಗಳನ್ನು ಕಟ್ಟಿಕೊಂಡು ಸಂತೆಗೆ ಹೊರಟೆ. ಸಂತೆ ಮುಟ್ಟಿದ ಐದೇ ನಿಮಿಷದಲ್ಲಿ ನಾನೇ ಬೇಂದ್ರೆಯವರನ್ನು ಗುರುತಿಸಿದೆ. ನಾನೂ ಅವರೂ ಅಲ್ಲಲ್ಲಿ ಅಂಗಡಿಗಳ ಮುಂದೆ, ಹಣ್ಣಿನ ಅಂಗಡಿಗಳ ಎದುರಿಗೆ, ಎಲ್ಲಿಯೂ ಹೆಚ್ಚು ಹೊತ್ತು ನಿಲ್ಲದೆ ಒಬ್ಬರಿಗೊಬ್ಬರು ಮುಖ ಕೊಟ್ಟು ಮಾತು ಸಹ ಆಡದೆ (ಆದರೂ ಮಾತು ಗಳನ್ನಾಡಿ) ನಮ್ಮ ಕ್ಷೇಮ ಸಮಾಚಾರ ಮುಗಿಸಿದೆವು. ಒಂದೆಡೆ ಏನೂ ಅರಿಯದ ಬೆಪ್ಪನಂತೆ ನಮ್ಮ ಕಡೆಯೇ ನೋಡುತ್ತಿದ್ದ ಒಬ್ಬ ಪೊಲೀಸಿನವನನ್ನು ಕಂಡು ಬೇಂದ್ರೆ ನನ್ನೊಂದಿಗೆ "ಇವರೆಲ್ಲ ಬ್ರಿಟಿಷ್ ಚಕ್ರಾಧಿಪತ್ಯವನ್ನು ಕಾಯುತ್ತಿದ್ದಾರೆ. ಪಾಪ, ಇವರ ಎದುರಿಗೇ ಚಕ್ರಾಧಿಪತ್ಯ ಉರುಳಿ ಹೋಗುತ್ತಿರುವುದು ಇವರಿಗೆ ಕಾಣುತ್ತಿಲ್ಲ" ಎಂದರು.

ಬೇಂದ್ರೆಯವರು ಕರ್ನಾಟಕದ ರವೀಂದ್ರನಾಥ ಠಾಕೂರರು. ಠಾಕೂರರನ್ನು ಕುರಿತು ಬೇಂದ್ರೆ ಹಾಡಿದ ಕವನವನ್ನು ಅವರ ವಿಷಯಕ್ಕೇ ಹಾಡಿ ಮುಗಿಸುತ್ತೇನೆ.

ನುಡಿದು ಬೇಸತ್ತಾಗ ದುಡಿದು
ಸತ್ತಾಗ
ಜನಕ ಹಿಗ್ಗಿನ ಹಾಡು ನೀಡಾಂವ
ನಿನ್ಹಾಂಗ ಆಡಕ ನಿನ್ಹಂಗೆ ಹಾಡಕ
ಪಡೆದು ಬಂದಿರ ಬೇಕೂ ಗುರುದೇವ
ಮಕ್ಕಳಾಗ್ಯಾಡೀದಿ ಹಕ್ಯಾಗಿ ಹಾಡೀದಿ
ಚಿಕ್ಕ್ಯಾಗಿ ನೋಡಿದಿ ಗುರುದೇವಾ
ಬಳ್ಳ್ಯಾಗ ಕುಣಿದೀದಿ ಬೆಳಕಿನ್ಯಾಗ
ತಣಿದೀದಿ.

ಬೇಂದ್ರೆಯವರ ತೀರ ಇತ್ತೀಚಿನ ಕಾಗದ – ಅವರು ನನಗೆ ಹೋದ ವರುಷ ಬರೆದುದು, ಅದರಲ್ಲಿ ಅವರು "ಮೇಲುಕೋಟೆಯಲ್ಲಿ ಶ್ರಿ ರಾಮಾನುಜಾಚಾರ್ಯರ ಕಾರ್ಯ, ವಾಸ್ತವ್ಯಗಳನ್ನು ಕುರಿತ ಒಂದು ಸಾಕ್ಷ್ಯಚಿತ್ರವನ್ನು ತೆಗೆಯಬೇಕು" ಎಂಬ ಸಲಹೆ ನೀಡಿದ್ದರು ಈ ಇಳಿ ವಯಸ್ಸಿನಲ್ಲೂ ಅವರು ಹೇಗೆ ಮಹದ್ವಿಷಯಗಳನ್ನೇ ಕುರಿತು ಸದಾ ಚಿಂತಿಸುತ್ತಿದ್ದರೆಂಬುದಕ್ಕೆ ಇದೊಂದು ಉದಾಹರಣೆ.

ಬೇಂದ್ರೆ ಅಣ್ಣಾ

(ಒಂದು ಭಾವ ಪುಷ್ಪಾಂಜಲಿ)

ಮರಾಠಿ ಮೂಲ : ಶ್ರೀಮತಿ ಶಕುಂತಲಾ ನಾಯಿಕ
ಕನ್ನಡ ಅನುವಾದ : ಶ್ರೀಮತಿ ತಾರಾ ದೀಕ್ಷಿತ

ಅಂದು ನರಕ ಚತುರ್ದಶಿ. ದೀಪಾವಳಿಯ ಮೊದಲನೆಯ ದಿನ, ಬಹಳ ಸಂತೋಷದ ದಿವಸ. ಮನೆ ಮನೆಗಳಲ್ಲೂ ದೀಪಾಲಂಕಾರ ಮಾಡಿ ಜ್ಯೋತಿಯಿಂದ ಜ್ಯೋತಿ ಹಚ್ಚಿ ಪ್ರೇಮ ಮತ್ತು ಆನಂದವನ್ನು ಹೆಚ್ಚಿಸುವ ರೂಢಿ. ಬೆಳಗಿನ ವೇಳೆಯನ್ನೆಲ್ಲ ಆನಂದದಿಂದ ಕಳೆದೆವು. ಮಧ್ಯಾಹ್ನದ ಹೊತ್ತಿಗೆ ಆಕಾಶದಲ್ಲಿ ಮೋಡ ಕವಿಯ ಹತ್ತಿತು. ವಾತಾವರಣವು ಮಂಕಾಯಿತು. ಮನಸ್ಸು ಅಸ್ವಸ್ಥವಾಗ ತೊಡಗಿತು. ಏಕೋ ಏನೋ ! ಕಾರಣ ತಿಳಿಯಲಿಲ್ಲ. ಸಂಜೆ ಆಗುತ್ತ ಆಗುತ್ತ ಮನಸ್ಸಿನ ಕಳವಳ ಹೆಚ್ಚುತ್ತಲೇ ಹೋಯಿತು. ರಾತ್ರಿ ಎಂಟು ಗಂಟೆಯ ಮರಾಠಿ ವಾರ್ತಾ ಪ್ರಸಾರದಿಂದ "ಅಣ್ಣಾ" ಅವರ ನಿಧನದ ಸುದ್ದಿ ಕೇಳಿ ಬಂದಿತು. ಅದನ್ನು ಕೇಳಿ ಅಣ್ಣಾ ಅವರ ನೆನಪು ಮೇಲಿಂದ ಮೇಲೆ ಆಗತೊಡಗಿತು. ಜನರಿಗೆ ಕಾಣಿಸುವ ಡಾ|| ದ. ರಾ ಬೇಂದ್ರೆಯವರು, ಹಿರಿಯ ಕನ್ನಡ ಸಾಹಿತಿ, ಮಹಾಕವಿ, ತತ್ವಜ್ಞಾನಿ, ಸಂತವಾಙ್ಮಯವನ್ನು ಆಳವಾಗಿ ಅಭ್ಯಾಸ ಮಾಡಿ ಅದರ ಮೇಲೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರೂ, ಜ್ಞಾನಪೀಠ ಪಾರಿತೋಷಕ ವಿಜೇತರೂ ಇದ್ದರೂ, ನನಗೆ ಕಾಣಿಸುವ "ಅಣ್ಣಾ" ಬೇರೆಯೇ ಇದ್ದರು.

ನಾನು ಧಾರವಾಡಕ್ಕೆ ಬಂದಾಗಿನಿಂದಲೂ "ಅಣ್ಣಾ" ಅವರ ವಿಷಯವಾಗಿ ಬಹಳ ಕೇಳಿದ್ದೆ. "ಅಣ್ಣಾ" ಅವರನ್ನು ನೋಡುವ ಮತ್ತು ಭೇಟಿಯಾಗುವ ಉತ್ಸುಕತೆ ನನ್ನ ಮನಸ್ಸಿನಲ್ಲಿ ಇದ್ದೇ ಇತ್ತು. ಆದರೆ ಆ ಮಹಾವ್ಯಕ್ತಿಯೊಂದಿಗೆ ನಾನು ಮಾತನಾಡುತ್ತೇನೆಂದು ಕನಸಿನಲ್ಲಿಯೂ ಕಂಡಿರಲಿಲ್ಲ. "ಅಣ್ಣಾ" ಅವರನ್ನು ಭೇಟಿಯಾಗುತ್ತಲೇ ಮಾತುಕಥೆ ಹೇಗೆ ಶುರು ಆಯಿತೋ ನನಗೆ ಗೊತ್ತೇ ಆಗಲಿಲ್ಲ. ಅಣ್ಣಾ ಮತ್ತು ನಾನು, ನಮ್ಮಲ್ಲಿ ಹರಿಯಲಾರದ ಒಂದು ಬಾಂಧವ್ಯ ಬೆಳೆಯಿತು.

ಅಣ್ಣಾ ಮತ್ತು ನನ್ನ ಭೇಟಿಯ ಪ್ರಸಂಗ ಬಹು ಚಮತ್ಕಾರವಾಗಿ ಆಯಿತು. ಅಣ್ಣಾ ಅವರ ಮಗಳು ಮಂಗಲಾ ನನ್ನ ಗೆಳತಿ. ಆಕೆ ನನಗೆ ಅನೇಕ ಪುಸ್ತಕಗಳನ್ನು ಅಭ್ಯಾಸದ ಸಲುವಾಗಿ ಕೊಟ್ಟಿದ್ದಳು. ಅವುಗಳನ್ನು ಹಿಂತಿರುಗಿಸಲು ಸಾಧನಕೇರಿಯಲ್ಲಿರುವ ಅವರ ಮನೆಗೆ 1962ರಲ್ಲಿ ಒಂದು ದಿನ ಹೋಗಿದ್ದೆ. ಅಣ್ಣಾ ಅವರು ಅಭ್ಯಾಸದ ವಿಷಯವಾಗಿ ಏನಾದರೂ ಕೇಳಿದರೆ ಏನು ಉತ್ತರ ಕೊಡಬೇಕೆಂದು ಬಹಳ ಹೆದರಿಕೆಯಾಗಿತ್ತು. ಕಂಕುಳಲ್ಲಿ ಎರಡು ವರ್ಷದ ಮಗ, ಅವನ ಹಾಲಿನ ಶೀಷೆ,

ಅವನ ಬಟ್ಟೆಬರೆಗಳ ಚೀಲ, ಹಿಂತಿರುಗಿಸಬೇಕಾದ ಪುಸ್ತಕಗಳು, ಜೊತೆಗೆ ನನ್ನ ಅತ್ತೆಯವರು. ಹೀಗೆ ಎಲ್ಲ ಸಾಮಾನು ಸರಂಜಾಮುಗಳೊಂದಿಗೆ ಅಣ್ಣಾ ಅವರ ಮನೆಯ ಮುಂದೆ ಬಂದೆ. ಇನ್ನೇನು ಮನೆಯ ಒಳಗೆ ಹೋಗಬೇಕು, ಅಷ್ಟರಲ್ಲಿ ಒಂದು ದೊಡ್ಡ ನಾಯಿ ಬೊಗಳುತ್ತ ಹೊರಗೆ ಓಡಿ ಬಂದಿತು. ನಾಯಿ ಮತ್ತು ಅದರ ಬೊಗಳುವಿಕೆಯನ್ನು ನೋಡಿ ಹೆದರಿ, ಜೀವವನ್ನು ಬಿಗಿಯಾಗಿ ಹಿಡಿದು "ಮಂಗಲಾ, ಮಂಗಲಾ" ಎಂದು ಜೋರಾಗಿ ಕೂಗತೊಡಗಿದೆ. ಅಣ್ಣಾ ಅವರು ಓಡುತ್ತಲೇ ಹೊರಗೆ ಬಂದರು ನಗುನಗುತ್ತ ಉಚ್ಚಸ್ವರದಲ್ಲಿ "ಒಳಗೆ ಬನ್ನಿ, ನಾಯಿ ಏನೂ ಮಾಡುವುದಿಲ್ಲ. ಹೊಸಬರನ್ನು ನೋಡಿ ಅದು ನಿಮ್ಮ ಪರಿಚಯ ಮಾಡಿಕೊಳ್ಳುತ್ತಿದೆ" ಎಂದರು. ಅಣ್ಣಾ ನಾಯಿಯನ್ನು ಕಟ್ಟಿಹಾಕಲು ತಯಾರಿರಲಿಲ್ಲ. ನಾನು ಮನೆಯೊಳಗೆ ಹೋಗಲು ತಯಾರಿರಲಿಲ್ಲ. ಕಡೆಗೆ ಮಂಗಲಾ ಹೊರಗೆ ಬಂದು ಅಕ್ಷರಶಃ ನನ್ನ ಕೈ ಹಿಡಿದುಕೊಂಡು ಮನೆಯೊಳಗೆ ಕರೆದೊಯ್ದಳು. ಅದನ್ನು ನೋಡಿ ಅಣ್ಣಾ ಮನಃಪೂರ್ವಕವಾಗಿ ನಕ್ಕು "ಒಬ್ಬ ಮಗನ ತಾಯಿ ನೀವು ಇಷ್ಟು ಧೈರ್ಯ ವಂತರು! ಮಗನಿಗೆ ದಿಟ್ಟತನದ ಪಾಠವನ್ನು ಹೇಗೆ ಕಲಿಸುತ್ತೀರಿ" ಎಂದರು. ಅದನ್ನು ಕೇಳಿ ನಾಚಿಕೆಯಿಂದ ನಾನು ತಲೆತಗ್ಗಿಸಿದೆ. ನನ್ನ ಮಗನ ಸಹಿತವಾಗಿ ಎಲ್ಲರೂ ಮನಸಾರೆ ನಕ್ಕರು. ಅಣ್ಣಾ ಅವರು ನಾಯಿಯನ್ನು ಕಟ್ಟಿಹಾಕಲು ಮಂಗಲಾಗೆ ಹೇಳಿದರು. ನಾಯಿಯು ನನ್ನ ದೃಷ್ಟಿಯಿಂದ ದೂರವಾದೊಡನೆ ನನಗೆ ಜೀವದಲ್ಲಿ ಜೀವ ಬಂತು. ಅಣ್ಣಾ ಅವರ ಅದೊಂದು ವಾಕ್ಯವೇ ನನಗೆ ದಿಟ್ಟತನದ ಮತ್ತು ತಾಯಿಯ ಕರ್ತವ್ಯದ ಬಗ್ಗೆ ಒಂದು ಪಾಠವನ್ನು ಕಲಿಸಿತು. ಅಣ್ಣಾ ಅವರ ಮಾತು ಕಥೆ ರಂಗೇರಿತು. ವಾದವಿವಾದ ಜೊತೆಗೂಡಿತು. ನನ್ನ ಮಗನೊಡನೆಯೂ ಅಣ್ಣಾ ಸ್ನೇಹ ಬೆಳೆಸಿದರು. ಅವನನ್ನು "ನೀನು ಹಾಡುತ್ತೀಯಾ" ಎಂದು ಕೇಳಿದರು. ಅವನು "ವಾಗರ್ಥಾವಿವ ಸಂಪೃಕ್ತೌ" ಎನ್ನುವ ಶ್ಲೋಕ ಮತ್ತು "ತುಕಾ ಝಾಲಾಸೆ ಕಳಾಸ" ಎಂಬ ಅಭಂಗವನ್ನೂ ಹೇಳಿದನು. ಅಣ್ಣಾ ಅವನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಶಹಬಾಸ್‌ಗಿರಿ ಕೊಟ್ಟರು. ಹುಡುಗ ಬುದ್ಧಿವಂತನಾಗುತ್ತಾನೆಂದು ಭವಿಷ್ಯ ಹೇಳಿದರು. ಅದು ನಿಜವಾಯಿತು.

ಅಣ್ಣಾ ಅವರಿಗೆ ಬೆಳಗಿನ ಹೊತ್ತು ತಿರುಗಾಡುವ ಆಶೆ ಬಹಳ ಇತ್ತು. ಬಹುಶಃ ಅದರಲ್ಲಿ ವ್ಯಾಯಾಮದ ಉದ್ದೇಶವೂ ಇರಬಹುದು. ಅಥವಾ ಆಗ ಕಣ್ಣಿಗೆ ಕಾಣುವ ನಿಸರ್ಗದಿಂದ ಅವರ ಕವಿ ಮನಸ್ಸಿಗೆ ಸ್ಫೂರ್ತಿ ಬರುತ್ತಿರಬಹುದು. ಅವರು ಪ್ರತಿನಿತ್ಯ ತಿರುಗಾಡಲು ಹೋಗುತ್ತಿದ್ದರು. ಹೀಗೇ ಒಂದು ಸಾರಿ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ತಿರುಗಾಡಲು ಬಂದಿದ್ದರು. ಬೆಳಗಿನ ಏಳು ಗಂಟೆಯ ಹೊತ್ತಿಗೆ ನಮ್ಮ ಮನೆಯ ಕರೆಗಂಟೆ ಬಾರಿಸಿತು. ಬಾಗಿಲು ತೆರೆದು ನೋಡುತ್ತೇನೆ, ಬಾಗಿಲಲ್ಲಿ ಸಾಕ್ಷಾತ್ "ದತ್ತ ಅಣ್ಣಾ" ನಿಂತಿದ್ದರು! "ಬೆಳಗಿನ ಗಡಿಬಿಡಿಯಲ್ಲಿದ್ದೀರಾ?" ಎಂದು ಕೇಳಿದರು. "ಗಡಿಬಿಡಿ ಏನಿಲ್ಲ, ಒಳಗೆಬನ್ನಿ" ಎಂದೆ. "ಒಳಗೆ ಬರುವವನೇ ಇದ್ದೇನೆ.

ಅದಕ್ಕಾಗಿಯೇ ಕರೆಗಂಟೆ ಬಾರಿಸಿದ್ದು. ಏನಾದರೂ ಓದು ಬರಹ ಇದೆಯೋ. ಅಥವಾ ಕೇವಲ ಮನೆ, ಮನೆ ಕೆಲಸ ಅಷ್ಟೇನೋ ? ಹಾಳುಮೂಳು, ಕಾಗೆಗುಬ್ಬಿಯ ಕಥೆ ಓದುತ್ತ ಕಾಲ ಕಳೆಯಬೇಡಿರಿ. ಏನಾದರೂ ಬರೆಯಿರಿ" ಎಂದರು. ಅದಕ್ಕೆ ನಾನು ಏನು ಉತ್ತರ ಕೊಡುತ್ತೇನೋ ಎಂದು ನನ್ನ ಯಜಮಾನರು ನಗುತ್ತ ನನ್ನ ಕಡೆ ನೋಡುತ್ತಿದ್ದರು "ಬರೆಯುವುದೆಂದರೆ ಅಶಕ್ಯವೇ. ನಾನು ಬೇಕಾದಷ್ಟು ಓದಬಲ್ಲೆ, ಆದರೆ ಬರೆಯಲಾರೆ" ಎಂದೆ. "ಅಶಕ್ತ ಎನ್ನಬೇಡಿರಿ, ಅರವಿಂದರ 'ಸಾವಿತ್ರಿ'ಯ ವಿಷಯ ಬರೆಯಿರಿ" ಎಂದರು ಅಣ್ಣಾ. ಅಷ್ಟು ಬರೆಯುವ ಬುದ್ಧಿಶಕ್ತಿ ನನ್ನಲ್ಲಿಲ್ಲ ಎಂದು ನನಗೆ ಗೊತ್ತಿತ್ತು. 'ಎಲ್ಲಿ ನಾನು, ಎಲ್ಲಿಯ ಅರವಿಂದರು, ಎಲ್ಲಿ ಅವರ ಸಾವಿತ್ರಿ, ಎಲ್ಲಿ ಅಣ್ಣಾ ಅವರ ಅಭ್ಯಾಸ' ಎಂದುಕೊಂಡೆ ನನ್ನ ಮನಸ್ಸಿನಲ್ಲಿ. ಅಷ್ಟರಲ್ಲೆ "ಒಂದು ಸಾರಿ ಓದಿರಿ, ಎರಡು ಸಾರಿ ಓದಿರಿ, ಹತ್ತು ಸಾರಿ ಓದಿರಿ. ಏನಾದರೂ ಸ್ವಲ್ಪವಾದರೂ ತಿಳಿದೇ ತಿಳಿಯುತ್ತದೆ. ಮನಸ್ಸಿನಲ್ಲಿ ಏನಾದರೂ ವಿಚಾರ ಬಂದೇ ಬರುತ್ತದೆ. ಅದನ್ನೇ ಬರೆಯಿರಿ"–ಅಣ್ಣಾ ಹೇಳಿದರು. ಅದು ನನಗೆ ಅಣ್ಣಾ ಅವರ ಎರಡನೆಯ ಪಾಠ.

ಇತ್ತೀಚೆಗೆ ಅಣ್ಣಾ ಅವರು ಸಂಖ್ಯಾಶಾಸ್ತ್ರದಲ್ಲಿ ಮಗ್ನರಾಗಿದ್ದರು. ಮನಸ್ಸಿನಲ್ಲಿ ಏನು ಬರುತ್ತದೊ ಅದನ್ನು ಮಾಡಲು ಅಣ್ಣಾ ಶಕ್ತರಿದ್ದರು. ಅವರಲ್ಲಿ ಅಸಾಮಾನ್ಯ ಬುದ್ಧಿಶಕ್ತಿ ಇತ್ತು. ಜ್ಞಾನವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ಕಷ್ಟಪಡಲು ಈ ಇಳಿ ವಯಸ್ಸಿನಲ್ಲಿಯೂ–ಅಂದರೆ 85ನೆಯ ವಯಸ್ಸಿನಲ್ಲಿಯೂ ಅಣ್ಣಾ ತಯಾರಿದ್ದರು. ವಯಸ್ಸಿಗನುಗುಣವಾಗಿ ಅಣ್ಣಾ ಅವರ ಶಾರೀರಿಕ ಶಕ್ತಿ ಕುಗ್ಗುತ್ತಿದ್ದರೂ, ಅವರ ಬುದ್ಧಿಶಕ್ತಿ ಬಹು ಚುರುಕಾಗಿತ್ತು. ಯಾವಾಗಲೂ ಏನನ್ನಾದರೂ ಅಭ್ಯಸಿಸುತ್ತಲೇ ಇದ್ದರು.

ಅಣ್ಣಾ ಅವರಿಗೆ ವಾದವಿವಾದ ಮಾಡಲು ಬಹಳ ಸೇರುತ್ತಿತ್ತು. ಅವರು ವಾದ ಮಾಡುತ್ತಿದ್ದರು. ಇನ್ನೊಬ್ಬರಿಗೆ ತಮ್ಮ ಅಂಬೋಣವನ್ನು ಸಿದ್ಧಮಾಡಿ ತೋರಿಸುತ್ತಿದ್ದರು. ಅಣ್ಣಾ ಒಬ್ಬರೇ ಮಾತನಾಡುತ್ತಿದ್ದರು. ಅದನ್ನು ಸುಮ್ಮನೆ ಕೇಳುವುದು ಇತರೆಯವರ ಕೆಲಸ. ಅಣ್ಣಾ ಅವರ ಧ್ವನಿ ಪ್ರವಹಿಸಹತ್ತಿತೆಂದರೆ, ಅವರ ಉಚ್ಚಧ್ವನಿ ಮತ್ತು ಕೇಳುವವರ ಕಿವಿ ಇವೆರಡರಲ್ಲಿ ಬಿಡಿಸಲಾರದ ಸಂಬಂಧ ಬೆಳೆಯುತ್ತಿತ್ತು. ಕೊನೆಗೆ ಅಣ್ಣಾ ಅವರು ಮನಸೋಕ್ತ ನಕ್ಕು, "ಏನು ತಿಳಿಯಿತೇ" ಎಂದು ಕೇಳುತ್ತಿದ್ದರು. ಎದುರಿಗಿದ್ದವರು ಈ ಪ್ರಶ್ನೆಗೆ ಏನೂ ಉತ್ತರ ಕೊಡಲು ಆಗುತ್ತಿರಲಿಲ್ಲ.

ಅಣ್ಣಾ ಅವರು ಸತ್ಯ ಸಾಯಿಬಾಬಾ ಅವರ ಭಕ್ತರು. ಬಾಬಾ ಅವರ ದರ್ಶನಕ್ಕಾಗಿ ಅಣ್ಣಾ ಪುಟಪರ್ತಿ ಅಥವಾ ಬೆಂಗಳೂರಿಗೆ ಹೋಗಿ ಬರುತ್ತಿದ್ದರು.

ಅಣ್ಣಾ ಅವರು ಕನ್ನಡ ಸಾಹಿತ್ಯದಲ್ಲಿ ಹಿರಿಯ ಸ್ಥಾನವನ್ನು ಗಳಿಸಿದ್ದರು. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಆದ್ದರಿಂದ ಅಣ್ಣಾ ಅವರ ಕಾವ್ಯದ

ಸವಿಯನ್ನು ನನಗೆ ಸವಿಯಲು ಆಗುವುದಿಲ್ಲವೆಂದು ಬಹಳ ಕೆಟ್ಟೆನಿಸುತ್ತದೆ. ಧಾರವಾಡದ ಆಕಾಶವಾಣಿ ಕೇಂದ್ರದಿಂದ ಅಣ್ಣಾ ಅವರ ಭಾಷಣ ಅಥವಾ ಕವಿತಾ ವಾಚನ ಇದ್ದರೆ ಅದನ್ನು ಕೇಳಿ ಆನಂದಪಡುತ್ತಿದ್ದೆ. ಈಗ ನಾವು ಧಾರವಾಡದ ಜನರು ಈ ಆನಂದದಿಂದ ವಂಚಿತರಾಗಿದ್ದೇವೆ.

ಒಮ್ಮೆ ಸಹಜವಾಗಿ ಆಕಾಶವಾಣಿ ಧಾರವಾಡ ಕೇಂದ್ರವನ್ನು ಹಚ್ಚಿದೆವು. ಅಣ್ಣಾ ಅವರ ಉಚ್ಚಧ್ವನಿ ಕೇಳಿ ಬಂತು. ಆಗ ಪಾಕಿಸ್ತಾನದ ಯುದ್ಧ ನಡೆದಿತ್ತು. ಅಣ್ಣಾ ಅವರ ಕವಿತೆಯ ಕೊನೆಯ ಸಾಲು ಕೇಳಬರುತ್ತಿತ್ತು. "ಭುಟ್ಟೋನನ್ನು ಹೊಡೆಯಿರಿ ಅಥವಾ ಗುದ್ದಿರಿ" ಎನ್ನುವ ಅರ್ಥ ಬರುತ್ತಿತ್ತು. "ಭುಟ್ಟೊ, ಕುಟ್ಟೊ" ಎಂದು ಅಣ್ಣಾ ಹಾಡಿದ ಶಬ್ದಗಳ ಆಟ ನನಗಷ್ಟೇ ಏಕೆ, ನನ್ನ ಮಗನಿಗೂ ಸೇರಿತು. ಅವನು ಸಹಜವಾಗಿ "ಅಮ್ಮಾ, ಬೇಂದ್ರೆ ಅಜ್ಜ ಹೇಗೆನ್ನುತ್ತಾರೆ ನೋಡು !–ಭುಟ್ಟೊವನ್ನು ಕುಟ್ಟಿರಿ ! – ಅವರ ಶಬ್ದಗಳ ಆಟ ನೋಡು" ಎಂದ.

ಹೀಗೆಯೇ ಇನ್ನೊಂದು ಪ್ರಸಂಗ ಕಣ್ಣಮುಂದೆ ಬರುತ್ತದೆ. ಒಮ್ಮೆ ನಾವು ಹುಬ್ಬಳ್ಳಿಗೆ ಒಂದು ಲಗ್ನಕ್ಕಾಗಿ ಹೋಗಿದ್ದೆವು. ಅಲ್ಲಿ ಅಣ್ಣಾ ಅವರ ಭೇಟಿ ಆಯಿತು. "ನಾವು ಒಟ್ಟಿಗೆ ನಮ್ಮ ಗಾಡಿಯಲ್ಲಿಯೇ ಧಾರವಾಡಕ್ಕೆ ಹೋಗೋಣ" ಎಂದು ಅಣ್ಣಾ ಅವರಿಗೆ ಹೇಳಿದೆ. ಅವರು ಒಪ್ಪಿದರು. ಬರುತ್ತಾ ದಾರಿಯಲ್ಲಿ ನನ್ನ ಮಗನಿಗೆ ಅಣ್ಣಾ "ಒಂದು ತಮಾಷೆ ಹೇಳುತ್ತೇನೆ ನಿನಗೆ" ಎಂದರು. ಇದನ್ನು ಕೇಳಿ ನಮ್ಮೆಲ್ಲರ ಕಿವಿಗಳೂ ಚುರುಕಾದವು. "ಈ ಊರಿಗೆ ಹುಬ್ಬಳ್ಳಿ ಎಂದು ಹೆಸರು ಹೇಗೆ ಬಂದಿತು. ಅದನ್ನು ಹೇಳುತ್ತೇನೆ ಹೂ ಬಳ್ಳಿ, ಹೂವಿನ ಬಳ್ಳಿ, ಹೂಬಳ್ಳಿ ಬರುಬರುತ್ತ ಹುಬಳ್ಳಿ ಹುಬ್ಬಳ್ಳಿ ಆಯಿತು. ತಮಾಷೆಯಾಗಿದೆ ಅಲ್ಲವೇ" ಎಂದು ನಕ್ಕರು. ತಮ್ಮ ಅಡ್ಡಹೆಸರಿನ ವಿಷಯವಾಗಿಯೂ ಅಣ್ಣಾ ಒಮ್ಮೆ ಹೀಗೆ ಹೇಳಿದ್ದರು : "ಬೇಂದ್ರೆ ಅಂದರೆ ನಾವು ಕೊಂಕಣದಿಂದ ಬಂದಿದ್ದೇವೆ. ವೇದ ಹೇಳುವವರು 'ವೇದ್ರೆ' ಆದರು. ಬರುಬರುತ್ತ ವೇದ್ರೆ. ವೇಂದ್ರೆ ಆದರು. ಆಮೇಲೆ ವೇಂದ್ರೆ ಬೇಂದ್ರೆ ಆದರು." ಅಣ್ಣಾ ಅವರ ಸಹವಾಸದಿಂದ ಎಷ್ಟೋ ತಿಳುವಳಿಕೆ (ಜ್ಞಾನ) ತನ್ನಷ್ಟಕ್ಕೆ ತಾನೇ ಬರುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯವು ಒಮ್ಮೆ ಅಣ್ಣಾ ಅವರಿಗೆ ಗೌರವ ಡಾಕ್ಟರೇಟ್ ಪದವಿ ಕೊಡಲು ನಿರ್ಧರಿಸಿತು. ಆ ಸಮಾರಂಭದಲ್ಲಿ ಅಣ್ಣಾ, "ನಾನು ಹುಟ್ಟಿದಾಗಲೇ ನನ್ನ ತಂದೆತಾಯಿಯರು ನನಗೆ ಡಾಕ್ಟರೇಟ (ದ. ರಾ – DR.) ಕೊಟ್ಟಿದ್ದಾರೆ. ನೀವೇನು ನನಗೆ ಗೌರವ ಪದವಿ ಕೊಡುತ್ತೀರಿ" ಎಂದು ಹೇಳಿದರು. ಅದನ್ನು ಶ್ರೋತೃಗಳೆಲ್ಲ ಚಪ್ಪಾಳೆ ತಟ್ಟಿ ಸ್ವಾಗತಿಸಿದರು.

ಈ ತಮಾಷೆ ನೋಡಿ. ಅಣ್ಣಾ ಅವರ ಮಾತೃಭಾಷೆ ಮರಾಠಿ. ಅವರ ಶಿಕ್ಷಣ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಇಂಗ್ಲೀಷ್ ಮಾಧ್ಯಮದಿಂದ ಆಯಿತು. ಅವರ ಬರವಣಿಗೆಯೆಲ್ಲ ಬಹಳವಾಗಿ ಕನ್ನಡದಲ್ಲಿಯೇ ಇವೆ.

ಒಂದು ಸಲ ಒಂದು ಸಮಾರಂಭದಲ್ಲಿ ನಮಗೆ ಅಣ್ಣಾ ಅವರ ಭೇಟಿ ಆಯಿತು. "ಇಷ್ಟು ದೂರ ನಡೆದು ಬಂದಿರಾ ಅಣ್ಣಾ" ಎಂದು ಕೇಳಿದೆ. "ಈಗ ನಡೆಯುವುದನ್ನು ಬಿಟ್ಟಿದ್ದೇನೆ. ಇಷ್ಟು ದೂರ ನಾನು ನಡೆಯಲಾರೆ. ಮಗನ ಕಂಕುಳಲ್ಲಿ ಕುಳಿತು ಬಂದೆ" ಎಂದರು ಅಣ್ಣಾ. ನಾನು ಆಶ್ಚರ್ಯದಿಂದ ಅವರನ್ನು ನೋಡ ಹತ್ತಿದೆ. "ಚಿಕ್ಕಂದಿನಲ್ಲಿ ನಾನು ಮಗನನ್ನು ಎತ್ತಿಕೊಂಡು ಓಡಾಡುತ್ತಿದ್ದೆ. ಈಗ ಮಗ ನನ್ನನ್ನು ಸ್ಕೂಟರ್ ಮೇಲೆ ಕೂಡಿಸಿಕೊಂಡು ಓಡಾಡುತ್ತಾನೆ" ಎಂದರು ಅಣ್ಣಾ.

ಕಳೆದ ಮೇ ತಿಂಗಳಲ್ಲಿ ಒಬ್ಬರ ಮನೆಗೆ ನರಸಿಂಹ ಜಯಂತಿಯ ಪೂಜೆಗೆ ಹೋದಾಗ ಅಣ್ಣಾ ಅವರ ಭೇಟಿ ಕಡೆಯದಾಗಿ ಆಯಿತು. ಆಗಲೆ ಅವರು ಸೋತಿದ್ದಂತೆ ಕಂಡರು. ಅವರು ಅಂದು ಯಾರೊಡನೆಯೂ ಹೆಚ್ಚು ಮಾತನಾಡ-ಲಿಲ್ಲ. ಶಾರೀರಿಕ ಯಾತನೆಯಿಂದ ಕಷ್ಟಪಡುತ್ತಿದ್ದರು. ಅವರು ದೇವರಿಗೆ ನಮಸ್ಕಾರ ಮಾಡಿ ಮಗನ ಕೈ ಹಿಡಿದುಕೊಂಡು ಬಂದು ಟ್ಯಾಕ್ಸಿಯಲ್ಲಿ ಕುಳಿತರು. "ಅಣ್ಣಾ ಅವರಿಗೆ ಏನಾಗಿದೆ" ಎಂದು ನಾನು ಅವರ ಸೊಸೆಯನ್ನು ಕೇಳಿದೆ. "ಇತ್ತೀಚಿಗೆ ಅವರಿಗೆ ಆರಾಮು ಇಲ್ಲ. ಅವರನ್ನು ಹುಬ್ಬಳ್ಳಿಯಲ್ಲಿಯ ದವಾಖಾನೆಗೆ ಕರೆದೊಯ್ಯು-ತ್ತಿದ್ದೇವೆ. ಅಲ್ಲಿ ಎಲ್ಲ ತರದ ವೈದ್ಯಕೀಯ ತಪಾಸಣೆ ಮಾಡಿದ ಮೇಲೆ ಅವರಿಗೆ ಏನಾಗಿದೆ ತಿಳಿಯುತ್ತದೆ" ಎಂದು ಹೇಳಿದಳು. ಅಣ್ಣಾ ಅವರನ್ನು ಈ ಸ್ಥಿತಿಯಲ್ಲಿ ನೋಡಿ ಮನಸ್ಸಿಗೆ ಬಹಳ ವ್ಯಥೆ ಆಯಿತು. ಮುಂದೆ ಅಣ್ಣಾ ಅವರ ಸ್ಥಿತಿ ಸುಧಾರಿಸುತ್ತಿದೆ ಎಂದು ಕೇಳಿದೆವು. ಅವರಿಗೆ ಚೆನ್ನಾಗಿ ಗುಣವಾದಮೇಲೆ ಅವರನ್ನು ಭೇಟಿಯಾಗಲು ಹೋಗಿ ಬರಬೇಕೆಂಬ ಇಚ್ಛೆ ಇದ್ದಿತು. ಇಷ್ಟರಲ್ಲಿಯೇ ಮುಂಬಯಿ ಯಲ್ಲಿ ಅಣ್ಣಾ ಅವರಿಗೆ ಶಸ್ತ್ರಕ್ರಿಯೆ ಮಾಡಿದ್ದಾರೆಂಬ ಸುದ್ದಿ ಕೇಳಿ ಬಂತು. ಅವರ ಪ್ರಕೃತಿ ಸುಧಾರಿಸುತ್ತಿದೆ ಎಂದೂ ತಿಳಿದುಬರುತ್ತಿತ್ತು. 'ಅಣ್ಣಾ ಅವರ ದೇಹದಿಂದ ದೋಷವನ್ನು ತೆಗೆದು ಹಾಕಿದರು. ಇನ್ನು ಅಣ್ಣಾ ನೂರು ವರ್ಷ ಬದುಕಿ ಬಾಳು ತ್ತಾರೆ' ಎಂದುಕೊಂಡು ಮನಸ್ಸಿಗೆ ಸಮಾಧಾನ ತಂದುಕೊಂಡೆ. ಅಷ್ಟರಲ್ಲಿಯೇ ಅಣ್ಣಾ ಅವರ ನಿಧನದ ವಾರ್ತೆ ಬರಸಿಡಿಲಿನಂತೆ ಬಂದೆರಗಿತು. ಅದನ್ನು ಕೇಳಿ ನನ್ನ ಮನಸ್ಸಿನ ತೂಕವೇ ತಪ್ಪಿಹೋಯಿತು.

ಈಗ ಅಣ್ಣಾ ಅವರ ಉಚ್ಚಸ್ವರ, ಶಬ್ದಗಳ ಕಸರತ್ತು, ಮನಃಪೂರ್ತಿಯಾದ ನಗು, ಪ್ರವಹಿಸುವ ಮಾತುಗಳು ಇವುಗಳೆಲ್ಲವನ್ನೂ ಜ್ಞಾಪಿಸಿಕೊಳ್ಳುತ್ತಲೇ ಇರಬೇಕು. ಅಣ್ಣಾ ಈಗಾಗಲೇ ಪಂಚಮಹಾಭೂತಗಳಲ್ಲಿ ಸೇರಿಬಿಟ್ಟಿದ್ದಾರೆ. "ನೆನಪಿನ ಹಾರವನ್ನು ಕಣ್ಣೀರಿನಲ್ಲಿ ಪೋಣಿಸುತ್ತ ಇರಬೇಕು"–ಇಷ್ಟೇ ಈಗ ನಮ್ಮ ಕೈಯಲ್ಲಿರುವುದು.

ಇದೇ ಅಣ್ಣಾ ಅವರ ಹತ್ತನೆಯ ದಿನಕ್ಕೆ ಆದರಪೂರ್ವಕವಾಗಿ ಅರ್ಪಿಸಿದ ಭಾವಪುಷ್ಪಾಂಜಲಿ.

ಶ್ರದ್ಧಾಂಜಲಿ

ಆಕಾಶವಾಣಿಯ ಶ್ರದ್ಧಾಂಜಲಿ

ದಿವಂಗತರಾದ ಕವಿವರ್ಯ ಬೇಂದ್ರೆಯವರಿಗೆ ಶ್ರದ್ಧಾಂಜಲಿ ಅರ್ಪಿಸಲು ಆಕಾಶವಾಣಿಯ ಬೆಂಗಳೂರು ಕೇಂದ್ರವು ದಿನಾಂಕ ೨೬-೧೦-೧೯೮೧ರಂದು ರಾತ್ರಿ ೧೦ ಗಂಟೆಗೆ "ನುಡಿ-ನಮನ" ಎಂಬ ಶೀರ್ಷಿಕೆಯಲ್ಲಿ ಶ್ರದ್ಧಾಂಜಲಿ-ಕಾರ್ಯಕ್ರಮವೊಂದನ್ನು ಪ್ರಸಾರ ಮಾಡಿತು. ನಾಡಿನ ಹೆಸರಾಂತ ಸಾಹಿತಿಗಳಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ|| ವಿ.ಕೃ. ಗೋಕಾಕ, ಡಾ|| ಸಿದ್ದಯ್ಯ ಪುರಾಣಿಕ, ಪ್ರೊ|| ಎಂ ಗೋಪಾಲಕೃಷ್ಣ ಅಡಿಗ, ಪ್ರೊ|| ಜಿ. ವೆಂಕಟಸುಬ್ಬಯ್ಯ, (ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ) ಶ್ರೀ ಹಂ. ಪ. ನಾಗರಾಜಯ್ಯ ಮತ್ತು ಶ್ರೀ ಎಲ್. ಎಸ್. ಶೇಷಗಿರಿರಾವ್ ಇವರುಗಳು ಈ 'ನುಡಿ-ನಮನ'ದಲ್ಲಿ ಪಾಲ್ಗೊಂಡಿದ್ದರು. ಬೇಂದ್ರೆಯವರ ಸಾಹಿತ್ಯಕ 'ಅಣ್ಣ' ಮಾಸ್ತಿಯವರು ಬೇಂದ್ರೆಯವರ ಜೀವನ ಮತ್ತು ಸಾಹಿತ್ಯ ಜೀವನಗಳನ್ನು ಸಂಕ್ಷಿಪ್ತವಾಗಿ ಅತ್ಯಂತ ದುಃಖತಪ್ತ ಧ್ವನಿಯಲ್ಲಿ ಸಮೀಕ್ಷಿಸಿದರು. ಬೇಂದ್ರೆಯವರ ಸಾಹಿತ್ಯಕ 'ತಮ್ಮ' ಶ್ರೀ ವಿನಾಯಕ ಗೋಕಾಕರು ಕಳೆದ ಐವತ್ತು ವರುಷಗಳಿಗೂ ಮೇಲ್ಪಟ್ಟು ತಮಗೂ ಕವಿವರ್ಯ ಬೇಂದ್ರೆಯವರಿಗೂ ಇದ್ದ ನಿಕಟ ವೈಯಕ್ತಿಕ ಮತ್ತು ಸಾಹಿತ್ಯಕ ಸಂಪರ್ಕವನ್ನು ನೆನೆಯುತ್ತ ಶ್ರೀ ಬೇಂದ್ರೆಯವರ ಇಡೀ ಜೀವನವೇ ಒಂದು ಕಾವ್ಯವಾಗಿತ್ತು ಎಂದು ನುಡಿದರು ಹಿರಿಯ ನವ್ಯಕವಿ ಶ್ರೀ ಗೋಪಾಲಕೃಷ್ಣ ಅಡಿಗರು ನವೋದಯದ ಹಿರಿಯ ಕವಿ ಶ್ರೀ ಬೇಂದ್ರೆಯವರಿಗೆ ತಮ್ಮ ಹೃತ್ಪೂರ್ವಕವಾದ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತ "ಬೇಂದ್ರೆಯವರು ಕುಮಾರವ್ಯಾಸನ ನಂತರ ಹುಟ್ಟಿ ಬಂದ ಕನ್ನಡದ ಅತ್ಯಂತ ಶ್ರೇಷ್ಠ ಕವಿಗಳು. ಇಂದು ಕನ್ನಡದಲ್ಲಿ ಕಾವ್ಯ ರಚಿಸುತ್ತಿರುವ ನಾವುಗಳೆಲ್ಲ-ನಮ್ಮಲ್ಲಿ ಹೆಚ್ಚಿನವರೆಲ್ಲ – ಒಂದರ್ಥದಲ್ಲಿ ಕವಿ ಬೇಂದ್ರೆಯವರ ಸಾಹಿತ್ಯಕ ಮಕ್ಕಳು ಇಲ್ಲವೆ ಮೊಮ್ಮಕ್ಕಳು ಎಂದು ಹೇಳಬಹುದು" ಎಂದು ನುಡಿದರು.

ವಿವಿಧ ಪತ್ರಿಕೆಗಳ ಶ್ರದ್ಧಾಂಜಲಿ

ಪ್ರಜಾವಾಣಿ

ಬುಧವಾರ, ದಿನಾಂಕ ೨೭-೧೦-೧೯೮೧ರ ತನ್ನ ಸಂಚಿಕೆಯಲ್ಲಿ ಕವಿವರ್ಯ ದ. ರಾ ಬೇಂದ್ರೆಯವರ ನಿಧನದ ವಾರ್ತೆಯನ್ನು ತಿಳಿಸುತ್ತ ಕನ್ನಡದ ಪ್ರಸಿದ್ಧ ದಿನ ಪತ್ರಿಕೆಯಾದ 'ಪ್ರಜಾವಾಣಿ'ಯು ಈ ರೀತಿ ಬರೆಯಿತು :

ವರಕವಿ ಬೇಂದ್ರೆ ನಿಧನ :

ಮುಂಬೈ, ಅ. ೨೬ – ಕಾವ್ಯವನ್ನೇ ತಮ್ಮ ಜೀವನಧರ್ಮವಾಗಿ ಕೈಗೊಂಡು, ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಐದು ದಶಕಗಳಿಗೂ ಹೆಚ್ಚುಕಾಲ ವಿಜೃಂಭಿಸಿದ

ಜ್ಞಾನಪೀಠ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಡಾ|| ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಇನ್ನಿಲ್ಲ. "ಕನ್ನಡ ಸಾಹಿತ್ಯದ ಪೆಲ್ಲಿ" ಎಂದು ಸ್ತುತಿಸಲಾಗಿದ್ದ ೮೬ ವರ್ಷ ವಯಸ್ಸಿನ ವರಕವಿ ಡಾ|| ಬೇಂದ್ರೆ ಅವರು ಇಲ್ಲಿನ ಹರಕಿಶನ್‌ಚಂದ್ ಖಾಸಗಿ ಆಸ್ಪತ್ರೆಯಲ್ಲಿ ಸೋಮವಾರ ಮಧ್ಯಾಹ್ನ ೧.೧೬ರಲ್ಲಿ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಅಂತ್ಯಕ್ರಿಯೆ :

ಅವರ ಹಿರಿಯ ಪುತ್ರ ಪಾಂಡುರಂಗ ದತ್ತಾತ್ರೇಯ ಬೇಂದ್ರೆ ಅವರು ಸೋಮವಾರ ರಾತ್ರಿ ಶಿವಾಜಿ ಪಾರ್ಕ್‌ನ ಶ್ಮಶಾನದಲ್ಲಿ ತಮ್ಮ ತಂದೆಯ ಪಾರ್ಥಿವ ಶರೀರದ ಚಿತೆಗೆ ಅಗ್ನಿಸ್ಪರ್ಶಮಾಡಿ ಅಂತ್ಯಕ್ರಿಯೆ ನಡೆಸಿದರು.

ಅಕ್ಟೋಬರ್ ಒಂದರಂದು ಆಸ್ಪತ್ರೆಗೆ ಸೇರಿಸಲಾಗಿದ್ದ ಡಾ|| ಬೇಂದ್ರೆ ಅವರಿಗೆ ಪಿತ್ತಕೋಶದಲ್ಲಿ ಬೆಳೆದ ಅಶ್ಮರಿ (ಗಾಲ್‌ಸ್ಟೋನ್) ತೆಗೆಯಲು ೧೦ರಂದು ಶಸ್ತ್ರ ಚಿಕಿತ್ಸೆ ನಡೆಸಲಾಗಿತ್ತು. ಹತ್ತು ದಿನಗಳ ಹಿಂದೆ ಅವರು ಚೇತರಿಸಿಕೊಳ್ಳಲಾರಂಭಿಸಿದರೂ ಈಚೆಗೆ ಅವರಿಗೆ ಶ್ವಾಸಕೋಶ ತೊಂದರೆ ತಲೆದೋರಿತು. ಭಾನುವಾರ ಬೆಳಗ್ಗೆ ಅವರ ದೇಹಸ್ಥಿತಿ ಹಠಾತ್ತಾಗಿ ವಿಷಮಿಸಿ "ರಕ್ತ ಪರಿಚಲನೆ" ನಿಂತುಹೋಯಿತು.

ಗೌರವಾರ್ಪಣೆ :

ಖ್ಯಾತ ಕನ್ನಡ ಲೇಖಕರಾದ ಕೃಷ್ಣಕುಮಾರ್ ಕಲ್ಲೂರ್, ವ್ಯಾಸರಾಯ ಬಲ್ಲಾಳ್, ಮುಂಬೈ ಕರ್ನಾಟಕ ಸಂಘದ ಎ. ಎಸ್. ಕೆ. ರಾವ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನ ಮಾಜಿ ಸಂಪಾದಕ ವಿ. ಬಿ. ಕುಲಕರ್ಣಿ ಅವರು ಡಾ|| ಬೇಂದ್ರೆಯವರ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛಗಳನ್ನರ್ಪಿಸಿದರು. ಮಹಾರಾಷ್ಟ್ರದ ಮುಖ್ಯಮಂತ್ರಿ ಎ. ಆರ್. ಅಂತುಳೆ ಅವರ ಪರವೂ ಒಂದು ಪುಷ್ಪಗುಚ್ಛ ಅರ್ಪಿಸಲಾಯಿತು. ಎಂ. ವಿ. ಕಾಮತ್, ಗೌರೀಶ ಕಾಯ್ಕಿಣಿ, ಕೆ. ಆರ್. ಮಹಿಷಿ, ಯಶವಂತ ಚಿತ್ತಾಲ, ಭೀಮರಾವ್ ಚಿಟಗುಪ್ಪಿ, ಇಲ್ಲಿನ ಕನ್ನಡ ಮಾಸಪತ್ರಿಕೆಯೊಂದರ ಸಂಪಾದಕರಾಗಿರುವ ಡಿ. ಕೆ. ಮೆಂಡನ್ ಮತ್ತು ಇನ್ನೂ ಅನೇಕರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಶ್ರದ್ಧಾಂಜಲಿ ಸಮರ್ಪಿಸಿದರು.

ಪ್ರಜಾವಾಣಿ ಪತ್ರಿಕೆಯು ಇದೇ ದಿನ (೨೮-೧೦-೮೧) ದ ತನ್ನ ಸಂಚಿಕೆಯ "ಕನ್ನಡ ನುಡಿ ಗಾರುಡಿಗ" ಎಂಬ ಶೀರ್ಷಿಕೆಯ ಸಂಪಾದಕೀಯ ಲೇಖನದಲ್ಲಿ ಬೇಂದ್ರೆಯವರನ್ನು ಕುರಿತು ಈ ರೀತಿ ಬರೆಯಿತು :

"ಕನ್ನಡ ಕಾವ್ಯಲೋಕದ ಪ್ರಥಮಾಚಾರ್ಯಪಂಕ್ತಿಗೆ ಸೇರಿದ ಹಿರಿಯ ಕವಿ–ದಾರ್ಶನಿಕ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ನಿಧನದಿಂದ ನಮ್ಮ ನಾಡು–ನುಡಿಗಳಿಗೆ ಆಗಿರುವ ನಷ್ಟ ಸುಲಭವಾಗಿ ತುಂಬಿಬರುವಂಥದಲ್ಲ. 'ಬೇಂದ್ರೆ ಮಾಸ್ತರ'ರ

ವಿಷಯದಲ್ಲಿ ಈ ಮಾತು ಅತಿಶಯೋಕ್ತಿಯೆನಿಸುವುದೂ ಇಲ್ಲ. ಅವರು ಶ್ರೇಷ್ಠ ದರ್ಜೆಯ ಕವಿಯಾಗಿದ್ದರು; ಅದಕ್ಕಿಂತ ಹೆಚ್ಚಾಗಿ, ಕವಿಗಳನ್ನು ಸೃಷ್ಟಿಸಿದರು". "ಕಾವ್ಯ ಜನ್ಮತಳೆಯುವಾಗ ಛಂದಶ್ಶರೀರಿಯಾಗಿಯೇ ಹುಟ್ಟುತ್ತದೆಂದು ಹೇಳುವುದುಂಟು. ಬೇಂದ್ರೆಯವರ ಗದ್ಯವೂ ಇಂಥದೇ. ಕನ್ನಡ ಜಾನಪದದ ನಿರಾಭರಣ ಸೌಂದರ್ಯಕ್ಕೆ ಮನಸೋತ ಅವರು ತಮ್ಮ ಕಾವ್ಯಕ್ಕೆ ಜಾನಪದ ಶೈಲಿಯನ್ನೇ ಆರಿಸಿಕೊಂಡದ್ದು ಅನಿರೀಕ್ಷಿತವಲ್ಲ. ಬೇಂದ್ರೆಯವರ ಕಾವ್ಯದಲ್ಲಿನ ಗಂಧರ್ವಾಂಶ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡುವಂಥದು. ಶಿವಮೊಗ್ಗ ಸಮ್ಮೇಳನದಲ್ಲಿ 'ಇಳಿದು ಬಾ ತಾಯಿ' ಕವನವನ್ನು ಅವರ ಕಂಠದಿಂದಲೇ ಕೇಳಿ ಪುಲಕಿತರಾದವರು ಆ ರಸಾನುಭವವನ್ನು ತಮ್ಮ ಬದುಕಿನ ಅಹೋಭಾಗ್ಯವೆಂದೇ ಭಾವಿಸಿದ್ದಾರು. ಶ್ರೇಷ್ಠ ಕವಿಯಾಗಿದ್ದ ಬೇಂದ್ರೆಯವರು ಅಷ್ಟೇ ಶ್ರೇಷ್ಠವಾಗ್ಮಿಯೂ ಹೌದು. ಈ ನುಡಿಗಾರುಡಿಗನ ವಾಗ್ವೈಖರಿಗೆ ತಲೆಬಾಗದ ಸಹೃದಯರು ಯಾರೂ ಇರಲಾರರು."

ಕನ್ನಡ ಪ್ರಭ

ದಿನಾಂಕ ೨೮-೧೦-೧೯೮೧ರ ತನ್ನ ಸಂಚಿಕೆಯಲ್ಲಿ 'ಅಂಬಿಕೆಯ ಮಡಿಲಿಗೆ ವರಕವಿ ಅಂಬಿಕಾತನಯದತ್ತ' ಎಂಬ ಇಡೀ ಮುಖಪುಟದುದ್ದದ ಶೀರ್ಷಿಕೆಯ ಅಡಿಯಲ್ಲಿ ಬೇಂದ್ರೆಯವರ ನಿಧನದ ವಾರ್ತೆಯನ್ನು ಪ್ರಕಟಿಸಿದ ಕನ್ನಡದ ಇನ್ನೊಂದು ಪ್ರಸಿದ್ಧ ದಿನಪತ್ರಿಕೆಯಾದ "ಕನ್ನಡ ಪ್ರಭ"ವು ಆ ಸಂಚಿಕೆಯ "ರಸಋಷಿ" ಎಂಬ ಶೀರ್ಷಿಕೆಯ ತನ್ನ ಸಂಪಾದಕೀಯ ಲೇಖನದಲ್ಲಿ ಕವಿ ಬೇಂದ್ರೆಯವರನ್ನು ಮತ್ತು ಅವರ ಕವಿತ್ವವನ್ನು ಕುರಿತು ಈ ರೀತಿ ಬರೆಯಿತು :

"ಈ ಬಾರಿಯ ದೀವಳಿಗೆ ಕನ್ನಡಿಗರಿಗೆ ಕ್ರೂರ. ನಾಡಿನ ವರಕವಿ ಅಂಬಿಕಾತನಯದತ್ತ ಈಗ ಕೇವಲ ಕೀರ್ತಿಕಾಯ." "ಎಷ್ಟೋ ಮಂದಿ ಕವಿಗಳು. ಅವರಲ್ಲಿ ಈತ ಅತಿ ವಿಶಿಷ್ಟ. ಏನನ್ನು ಬರೆದರೂ ಬಾಳಿಗೆ ಅತಿ ಹತ್ತಿರ. ಅನುಭವದಲ್ಲಿ ಪರಿಪಕ್ವ. ಎಳೆ ಹರೆಯದಿಂದಲೇ ಕವಿ. ಭಾವಜೀವಿ. 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಇವರಿಗೆ. ಇವರು ಕಂಡ ಬೆಳಗು 'ಬರಿ ಬೆಳಗಲ್ಲೋ ಅಣ್ಣಾ'. ಮಕ್ಕಳೊಡನೆ ಕುಣಿದಾಡಿದರು. ಹಕ್ಕಿಯಂತೆ ಹಾರಾಡಿದರು. ಬೆಳೆದವರೊಡನೆ ಸೆಣಸಾಡಿದರು. 'ಪಾತರಗಿತ್ತಿ'ಯನ್ನು ಬಣ್ಣಿಸಿದರು. ದರ್ಶನವನ್ನು ಬಿಡಿಸಬಯಸಿದರು. ಬೇಂದ್ರೆಯವರ ಕಾವ್ಯ ಬಾನಿನಷ್ಟು ಎತ್ತರ. ಮುಗಿಲಿನಷ್ಟು ಅಗಲ. ಕಡಲಿನಷ್ಟು ಆಳ. ಸುತ್ತಮುತ್ತಲಿಗೆ ಸ್ಪಂದಿಸಿದ ಜೀವ. ಅಂದು ಮೂರು ಕೋಟಿಯ ಬವಣೆ. ಎಲ್ಲವೂ ಸಂಖ್ಯೆ, ಸೊನ್ನೆ. 'ಕುರುಡು ಕಾಂಚಾಣ'ದ ರಿಂಗಣಗುಣಿತ. ಪುಟ್ಟ ವಿಧವೆಯ ಅಳಲು. ಸಖಿಯೊಡನೆ ಗೀತ-ಮಧುರ ಸಂಗೀತ. ತಾಯಿ ಗಂಗೆ ಇಳಿದು ಬಂದಾಗ 'ಉದ್ಬುದ್ಧ ಶುದ್ಧ ನೀರೆ'. ಆಕೆ 'ಸಚ್ಚಿದಾನಂದ ಕನ್ಯೆ'. ಬಿದ್ದವರನ್ನು ಎತ್ತಲು ಬಂದ ಪಾವನ ಗಂಗೆ.

'ಇಗೊ ಹೊರಟೆವು ಬಿಡುಗಡೆಗಾಗಿ, ಬಹರಾರು ನಮಗಿದಿರಾಗಿ? ಇದು ನಾಡಿನ ಪಂಚಪ್ರಾಣ, ಇದು ಇಲ್ಲದ ಜನ ನಿಷ್ಪ್ರಾಣ' – ದಾಸ್ಯಕ್ಕೆ ಹೊಡೆದ ಸೆಡ್ಡು. ಸೆರೆಗೆ ಅಂಜಲಿಲ್ಲ. ಉಪವಾಸಕ್ಕೆ ಹಿಂಜರಿಯಲಿಲ್ಲ. ಕವಿ 'ಕ್ರಾಂತದರ್ಶಿ' ಎಂಬ ಹೆಸರಿಗೆ ತಕ್ಕಂತೆ ನಡೆ. ಒಲವು ನಿಲುವೆಲ್ಲ ಮಾಸ್ತರರದು. ಈ ವ್ಯಕ್ತಿಯ ಮುಖದಿಂದ ಹೊರಹೊಮ್ಮಿದ ಮಾತು ಧಬಧಬೆ. ಕವಿತೆಯನ್ನು ಹಾಡುವಾಗ ಅದೇನು ಉನ್ಮತ್ತತೆ! 'ಅರ್ಥವಿಲ್ಲ, ಸ್ವಾರ್ಥವಿಲ್ಲ, ಬರಿಯ ಭಾವಗೀತಾ'—ಭಾವನೆಯೇ ಭೋರ್ಗರೆವಂತೆ. ಹೌದು, ಈತನದು 'ನಾದಲೀಲೆ? ನುಡಿಗೆ ನಾದದ ಹೊದಿಕೆಯಿತ್ತ ಅಕ್ಷರಯೋಗ. ಎಷ್ಟು ಬಣ್ಣಿಸಿದರೂ ಬೇಂದ್ರೆ ನುಡಿಯಲ್ಲಿ ಸಾಕಾರ ಆಗಲಾರರು. ಅವರು ಬಿಟ್ಟುಹೋದ ಬಳುವಳಿ ಅಪಾರ, ಅನಂತ. ಕನ್ನಡ ಬದುಕಿರುವವರೆಗೂ ಮರೆಯಲಾರದಂಥ ಕವಿ."

ಸಂಯುಕ್ತ ಕರ್ನಾಟಕ

ಕನ್ನಡದ ಮತ್ತೊಂದು ಪ್ರಮುಖ ದಿನಪತ್ರಿಕೆಯಾದ 'ಸಂಯುಕ್ತ ಕರ್ನಾಟಕ'ವು ಅದೇ ದಿನಾಂಕ ೨೯–೧೦–೧೯೮೧ರ ತನ್ನ ಬೆಂಗಳೂರು ಆವೃತ್ತಿಯ ಸಂಚಿಕೆಯಲ್ಲಿ ಕವಿ ಬೇಂದ್ರೆಯವರ ಸಾವನ್ನು ಕುರಿತು "ಸಾವಿಲ್ಲ" ಎಂಬ ಶೀರ್ಷಿಕೆಯ ತನ್ನ ಸಂಪಾದಕೀಯ ಲೇಖನವನ್ನು ಬರೆಯುತ್ತ–

"ಯಾವುದು ಜನರ ಮನ ಹೊಕ್ಕು ಮಿಡಿಯುವುದೋ, ಮೀಟಿಸುವುದೋ, ನಗಿಸುವುದೋ, ಹರ್ಷಗೊಳಿಸುವುದೋ ಅದೇ ಸಾರ್ಥಕ ಕೃತಿ. ಇದ್ದಾಗಲೂ ಇವರ ಸೃಷ್ಟಿಯ ಪ್ರಭಾವ, ಇದ್ದು ಅಗಲಿಹೋದ ಮೇಲೂ ಪ್ರಭಾವ. ಪ್ರಜ್ವಲಿಸುವ ಪರಂಪರೆಯನ್ನು ಬಿಟ್ಟುಹೋಗುವ ಕೃತಿಕಾರರು ವಿರಳ. ಇಂತಹವರ ಉದಯವೇ ಸಮಾಜದ ಒಂದು ಭಾಗ್ಯ........ಬೇಂದ್ರೆ ತಮ್ಮಲ್ಲಿ ತಮ್ಮನ್ನೇ ಬೆರಯಿಸಿಕೊಳ್ಳುತ್ತಿದ್ದರು, ಬೆಂದರು. ತಾಯಿ ಕಾವ್ಯಗಂಗೆ ಇಳಿದು ಬಂದಳು, ಹರಿದಳು. ಕನ್ನಡ ಕಾವ್ಯಶ್ರೀಗೆ ಕನಕಾಭಿಷೇಕವಾಯಿತು ಬೇಂದ್ರೆ ಭಾವಗೀತಗಳ ಬ್ರಹ್ಮ. ಅವತರಣದಲ್ಲಿ ಆರೋಹಣ ಇವರ ಸೃಷ್ಟಿ–ವೈಶಿಷ್ಟ್ಯ, ಏರುತ್ತ–ಏರುತ್ತಲೇ ಹೋದರು. ಆಡುಭಾಷೆಯಲ್ಲಿ ಆಡಿದರು, ಆಡಿಸಿದರು, ಹಾಡಿದರು, ಹಾಡಿಸಿದರು, ಕುಣಿದರು, ಕುಣಿಸಿದರು, ಕುಪ್ಪಳಿಸಿದರು, ಕುಪ್ಪಳಿಸಿಸಿದರು. ಇದು ಬೇಂದ್ರೆ ಕನ್ನಡಕ್ಕಾಗಿ, ಕನ್ನಡಿಗರಿಗಾಗಿ ಮಾಡಿದ ಕಸರತ್ತು, ಹಾಕಿದ ಕೇಕೆ. ಬೇಂದ್ರೆ ಅವರು ತಮಗೆ ಅನಿಸಿದ, ಅನಿಸಬೇಕೆನ್ನಿಸಿದ ಭಾವೋನ್ಮಾದಗಳ ಆನಂದಾನುಭವವನ್ನು ಆಲಾಪಿಸಲು ಕನ್ನಡ ತರಂಗಗಳ ಮೇಲೆ ತೇಲಿ ಬಂದರು. ಇವರ ಮುಂದೆ ಮಗುವೂ ಒಂದೇ ಮುದುಕರೂ ಒಂದೇ. ಎಲ್ಲರಲ್ಲೂ ಒಂದೇ ಒಲವು. 'ಈ ಬೇಂದ್ರೆ ಇನ್ನೂ ಬದುಕಿದ್ದಾನೆ. ಏಕೆ ಬದುಕಿದ್ದಾನೆ ಅಂದ್ರೆ ಹಿಂದಿನವರೆಲ್ಲ ಏನು ಹೇಳಿದ್ದಾರೆ ಅದನ್ನ ಹೇಳೋದಕ್ಕೆ ಬದುಕಿದ್ದಾನೆ' ಎಂದು ಬೇಂದ್ರೆಯವರು ಒಮ್ಮೆ ಹೇಳಿದರು.

ಮುಪ್ಪಿನಲ್ಲೂ ಅದೆಂತಹ ಉತ್ಸಾಹ! ಕಡೆಯವರೆಗೂ ಸಾರಸ್ವತ ಲೋಕದಲ್ಲಿ ಅದೆಂತಹ ವಿಹಾರ! ಕನ್ನಡಕ್ಕೆ ಎಷ್ಟು ಮನೋಹರ! ಬೇಂದ್ರೆಯವರು ನಮ್ಮನ್ನಗಲಿದ್ದಾರೆ. ಆದರೆ 'ಅಂಬಿಕಾತನಯದತ್ತ'ರಿಗೆ ಸಾವಿಲ್ಲ" ಎಂದು ಹೇಳುತ್ತ ಕವಿವರ್ಯ ಅಂಬಿಕಾತನಯದತ್ತರಿಗೆ ತನ್ನ ಶ್ರದ್ಧಾಂಜಲಿಯನ್ನು ಸಮರ್ಪಿಸಿತು.

ಗ್ರಂಥಲೋಕ

ನೆನಪಿನ ನಾಣ್ಯ :

ನನ್ನ ಮಗಳು ಕಾಯ್ದಿಟ್ಟ ಬೇಂದ್ರೆಯವರ ರೂಪಾಯಂತೆ, ಅವರ ನೆನಪು ನಮ್ಮಲ್ಲಿ ಉಳಿದ ನಾಣ್ಯ. ಅದು ಸವೆಯುವುದಿಲ್ಲ; ಅದಕ್ಕೆ ಅಪಮೌಲ್ಯವಿಲ್ಲ; ಅದು ಖರ್ಚಾಗಿ ಮುಗಿಯುವಂಥದೂ ಅಲ್ಲ. ಬೇಂದ್ರೆ ನೆನಪು ಅಕ್ಷಯನಿಧಿ.

—ಡಾ|| ಹಾ. ಮಾ. ನಾಯಕ

ಬೇಂದ್ರೆ ಅವರನ್ನು ನಾನು ಕಂಡ ಬಗೆ :

ಕರ್ನಾಟಕದ ಹಿರಿಯ ಕವಿ, ಮಹಾಮೇಧಾವಿ, ಸಾಂಸ್ಕೃತಿಕ ನವೋದಯಕ್ಕೆ ಸ್ಫೂರ್ತಿ ನೀಡಿದ ಬೇಂದ್ರೆ ಕಣ್ಮರೆಯಾದುದು ದುಃಖದ ಸಂಗತಿ. ನಮ್ಮ ಮನೆಯಂಗಳದ ಪ್ರತಿ ಗಿಡದೊಂದಿಗೆ ಬೇಂದ್ರೆ ಚೇತನದ ನೆನಹೂ ನನಗೆ ಉಳಿಯುವಂತಹದು.

—ಪ್ರೊ|| ಸ. ಸ. ಮಾಳವಾಡ

ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದ ಒಂದು ದೊಡ್ಡ ಸತ್ವ :

ಅವರಂಥ ಮಾತುಗಾರಿಕೆಯನ್ನು ಕನ್ನಡದಲ್ಲಿ ಈ 50 ವರ್ಷಗಳಲ್ಲಿ ನಾನು ಇನ್ನೊಬ್ಬರಲ್ಲಿ ಕಂಡುದಿಲ್ಲ. ಅದನ್ನು ಅವರು ಬೆಳಸುವ ರೀತಿ ಮುಗಿಲು ಮುಟ್ಟಿ ಭೂಮ್ಯಾಕಾಶಗಳನ್ನು ಒಂದುಮಾಡುವಂತಹ ಮೋಡಿಯದು. ಮಾತು, ಉಕ್ತಿ ವಿಲಾಸ, ಚಿತ್ರ, ರೂಪಕ, ತಂತ್ರ, ವೈತುಂಬ ಒಂದು ನಿಮಿಷದಲ್ಲಿ ಹೂಬಿಟ್ಟ ಲತಾವಲಯದಂತೆ ಸಿಂಗರಗೊಂಡು ಕಾಣುತ್ತದೆ. ಅದೇ ಲಕ್ಷಣ ಅವರ ಬರವಣಿಗೆಯಲ್ಲಿ ಕೂಡ

ಜೊತೆಯವರೊಡನೆಯೂ ಇತರರೊಡನೆಯೂ ಅವರು ನಡೆದು ನುಡಿದು ನಾಡಿನ ಸಾವಿರಾರು ಮಂದಿಗೆ ಸ್ಫೂರ್ತಿಯನ್ನೂ ಸಂತೋಷವನ್ನೂ ಕೊಟ್ಟವರು. ಧಾರವಾಡದಲ್ಲಂತೂ ಸಾಹಿತ್ಯ ಸಂಸ್ಕೃತಿ ಜೀವನಗಳಲ್ಲಿ ಅವರು ಭಾಗವಹಿಸದ ಸಮಾರಂಭಗಳು ಬಡವು. ಒಂದು ಹೊಸ ಛಾತಿಯ ಕೃತಿಯನ್ನು ನಿರ್ಮಾಣ ಮಾಡಿದ ಕಾರಯಿತ್ರೀ ಪ್ರತಿಭೆ ಬೇಂದ್ರೆಯವರನ್ನು ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಒಂದು ದೊಡ್ಡ ಸತ್ವವನ್ನಾಗಿ ಮಾಡಿದೆ. ಅವರನ್ನು ಕಂಡವರಿಗೆ ಇದೊಂದು ಅಸಾಧಾರಣ ಶಕ್ತಿ, ಅಪೂರ್ವ ಚೈತನ್ಯ, ಎಂಬ ಅನುಭವ ಉಂಟಾಗುತ್ತಿತ್ತು. ಅಂಥ ಅಪೂರ್ವ ವ್ಯಕ್ತಿತ್ವ

ಈಚೆಗೆ ನಮ್ಮ ಪಾಲಿಗೆ ಇಲ್ಲವಾದುದು ಕನ್ನಡ ಸಾರಸ್ವತಲೋಕಕ್ಕೆ ಉಂಟಾದ ದೊಡ್ಡ ನಷ್ಟ.

—ಡಾ|| ವಿ. ಸೀತಾರಾಮಯ್ಯ

ಬೇಂದ್ರೆ ಧ್ವನಿ

"ಬೇಂದ್ರೇನ್ನ ಇನ್ನೂ ಜನ ತಿಳಿದುಕೊಂಡಿಲ್ಲ".... ಇದು ಬೇಂದ್ರೆಯವರೇ ನನ್ನೆದುರು ಎಷ್ಟೋ ಸಲ ಹೇಳಿದ ಮಾತು. ಅವರು 'ನಾನು....ನನ್ನ' ಎನ್ನುವುದನ್ನು ಬಿಟ್ಟುಬಿಟ್ಟಿದ್ದರು ಅವರಿಗೆ ಅದೇನೋ ತಮ್ಮ ಶಕ್ತಿಯಲ್ಲಿಯೇ ಅಪೂರ್ವ ವಿಶ್ವಾಸ. ಅವರು ಒಮ್ಮೊಮ್ಮೆ ತಮ್ಮ ಪೂರ್ವಜನ್ಮದ ಕತೆಯನ್ನು ಹೇಳುತ್ತಿದ್ದರು. ಈ ವರುಷವಂತೂ ಅವರು ನಮ್ಮ ಮನೆಗೆ ಮೇಲಿಂದ ಮೇಲೆ ಬಂದು ಗಂಟೆಗಟ್ಟಲೆ ಮಾತನಾಡುತ್ತ ಕುಳಿತುಕೊಳ್ಳುತ್ತಿದ್ದರು ಅಂಕಿ ಸಂಖ್ಯೆಗಳ ಬಗ್ಗೆಯಂತೂ ಮೇಲಿಂದ ಮೇಲೆ ಅವರ ಪ್ರವಚನ. ನನ್ನೆದುರು 'ಐದು' ಸಂಖ್ಯೆಯ ಬಗ್ಗೆ ಬಹಳ ಮಾತು. ಒಮ್ಮೆಯಂತೂ ತಮ್ಮ ಐದು ಬೆಟ್ಟುಗಳನ್ನು ತೋರಿಸಿ "To know that you know, what you knew, is knowledge ; and it is different from wisdom" ಎಂದರು. ಹೆಬ್ಬೆಟ್ಟನ್ನು ಎತ್ತಿಹಿಡಿದು wisdom ಎಂದರು. ಇದೇ ಆಧುನಿಕ ಪಂಚತಂತ್ರ. "ಇದರ ಬಗ್ಗೆ ಹೊಸದಾಗಿ ಬರೆ" ಎಂದೂ ನುಡಿದರು.

—ವರದರಾಜ ಹುಯಿಲಗೋಳ

ಜಗತ್ತಿನ ಅತಿದೊಡ್ಡ ಕವಿಗಳಲ್ಲೊಬ್ಬರು

ಶ್ರೀ ಎ. ಎನ್. ಮೂರ್ತಿರಾಯರು ಪ್ರಸಿದ್ಧ ವಿದ್ವಾಂಸರು, ಪ್ರಬಂಧಕಾರರು– ನಾವು ಒಂದು ದಿನ ಅದು ಇದು ಹರಟೆ ಹೊಡೆಯುತ್ತಿದ್ದೆವು. ಮಾತು ಬೇಂದ್ರೆಯವರ ಕಾವ್ಯದ ಕಡೆಗೆ ತಿರುಗಿತು. ನಾನು : "ಬೇಂದ್ರೆಯವರು ನಮ್ಮ ಭಾರತದ ಅತಿ ದೊಡ್ಡ ಕವಿಗಳಲ್ಲಿ ಒಬ್ಬರು, ಅಲ್ಲವೆ ?" ಎಂದೆ. ಮೂರ್ತಿರಾಯರು : "ಜಗತ್ತಿನ ಎನ್ನಿ" ಎಂದರು. ಜಗತ್ತಿನ ಅತ್ಯುತ್ಕೃಷ್ಟ ಕಾವ್ಯವನ್ನು ನಾನೂ ಅಷ್ಟೊ ಇಷ್ಟೊ ಓದಿಕೊಂಡಿದ್ದವನು. ಜಗತ್ತಿನ ಅತ್ಯುತ್ಕೃಷ್ಟ ಕಾವ್ಯವನ್ನು ತುಂಬಾ ಚೆನ್ನಾಗಿ ಓದಿರುವ ಮೂರ್ತಿರಾಯರ ಮಾತು ನನಗೆ ಸರಿ ಎನಿಸಿತು.

—ಡಾ|| ಪ್ರಭುಶಂಕರ

ಬದುಕೇ ಜೀವನದ ಗುರಿ

ಬೇಂದ್ರೆ ಜೀವನದ ಸಮಸ್ಯೆಗಳನ್ನು ತಮ್ಮ ಕಾವ್ಯದ ಶ್ರುತಿಗೇ ಕೂಡಿಸುತ್ತಾರೆ. 'ಮೂರ್ತಿ' ನೀಳ್ಗವನದ ಕೊನೆಯ ಈ ಪಂಕ್ತಿಯಲ್ಲಿ ಸಂಗೃಹೀತವಾಗಿರುವ ದರ್ಶನದಿಂದ ಜಗತ್ತಿಗೆ ಹಾಗೂ ಅಂತಿಮ ಸತ್ಯಕ್ಕೆ ಅವರ ಪ್ರತಿಕ್ರಿಯೆಗಳು, ಅವರ ಕಾವ್ಯ ಪ್ರತಿ ಸ್ಪಂದನಗಳೂ ಕೂಡಿ, ರೂಪಿತವಾಗುತ್ತವೆ.

ರಸವೆ ಜನನ ವಿರಸ ಮರಣ
ಸಮರಸವೇ ಜೀವನ

—ಡಾ|| ವಿ. ಕೃ. ಗೋಕಾಕ

ಬೇಂದ್ರೆ : ಒಂದು ಅವಲೋಕನ

ಬೇಂದ್ರೆಯವರ ಮಾತೃಭಾಷೆ ಮರಾಠಿ. ಆದರೆ ಅವರ ಮರಾಠಿ ಕವನಗಳು ಅವರ ಕನ್ನಡ ಕವನಗಳ ಮೊಳಕಾಲಿಗೂ ಬರುವುದಿಲ್ಲ. ಆದರೆ ಈ ಮಾತನ್ನು ಮರಾಠಿಗರು ತಮಗೆ 'ಅವಮಾನ'ವೆಂದು ತಿಳಿಯಬಾರದು. ಬೇಂದ್ರೆ ಮಾತೃಭಾಷೆ ಮರಾಠಿಯಾದರೂ 'ಅಂಬಿಕಾತನಯದತ್ತ'ನ ಮಾತೃಭಾಷೆ ಕನ್ನಡ. ಅವನು ಕನ್ನಡಿಗ. ಇದರರ್ಥ ಬಲ್ಲವರೇ ಬಲ್ಲರು.

—ಡಾ|| ಶಂಕರ ಮೋಕಾಶಿ ಪುಣೇಕರ

ಲಂಕೇಶ್ ಪತ್ರಿಕೆ

ಕನ್ನಡದ ಪ್ರಸಿದ್ಧ ವಾರಪತ್ರಿಕೆಗಳಲ್ಲೊಂದಾದ 'ಲಂಕೇಶ್ ಪತ್ರಿಕೆ'ಯ ೧-೧೧-೮೧ರ ತಾರೀಕಿನ ಸಂಚಿಕೆಯಲ್ಲಿ ಬೇಂದ್ರೆಯವರನ್ನು, ಅವರ ಕವಿತ್ವವನ್ನು, ಅವರ ಜೀವನವನ್ನು ಮತ್ತು ಅವರ ಸಾವನ್ನು ಕುರಿತು "ನಾನಿನ್ನ 'ಹ್ಯಾಂಗ ನೋಡಲಿ ನಿನ್ನ?'" ಎಂಬ ಕಾವ್ಯಮಯ ಮತ್ತು ನಾಟಕೀಯ ಶೀರ್ಷಿಕೆಯಲ್ಲಿ ಬರೆಯುತ್ತ ಪಿ. ಎಲ್. ಅವರು—

"ಕನ್ನಡ ನಾಡನ್ನು ತುಂತುರು ಮಳೆ ತೋಯಿಸುತ್ತಿರುವ ಇಂದು, ದೀಪಾವಳಿಯ ದೀವಿಗೆಗಳು ಮಿನಮಿನ ಎನ್ನುತ್ತಿರುವ ಇಂದು, ಕರುನಾಡು ತನ್ನ ಇಪ್ಪತ್ತೈದು ವರ್ಷದ ಬೆಳ್ಳಿಹಬ್ಬವನ್ನು ಆಚರಿಸಲು ಉಲ್ಲಾಸಗೊಳ್ಳುತ್ತಿರುವ ಇಂದು, ಕಳೆದ ಏಳು ದಶಕಗಳಿಂದ ಕನ್ನಡ ನುಡಿಗೆ ಹೊಸ ಕಾಂತಿ ತಂದ ಕವಿ ಅಂಬಿಕಾತನಯದತ್ತ ಕಣ್ಮರೆಯಾಗಿದ್ದಾರೆ. ಎಂಥ ವಿಚಾರವಾದಿಯ ಪ್ರಶ್ನಾರ್ಥಕ ಚಿಹ್ನೆಗಳನ್ನು ಕೂಡ ಆಶ್ಚರ್ಯಸೂಚಕವಾಗಿ ಬದಲಿಸಬಲ್ಲ ಮಂತ್ರಶಕ್ತಿ ಪಡೆದಿದ್ದ ಬೇಂದ್ರೆ, ಕಂದಾಚಾರಿಗಳ ಕಲ್ಲುಹೃದಯವನ್ನು ತಲ್ಲಣಗೊಳಿಸುವ ಜೀವನ ಪ್ರೇಮ ಪಡೆದಿದ್ದ ಬೇಂದ್ರೆ, ಆಧುನಿಕ ವಿಜ್ಞಾನಪ್ರೇಮಿಗಳ ಜಾಣತನವನ್ನು ನಾಚಿಸಬಲ್ಲ ಮುಗ್ಧತೆಯನ್ನು ಪಡೆದಿದ್ದ ಬೇಂದ್ರೆ, ಅತ್ಯಂತ ಖ್ಯಾತ ಜಾನಪದ ಕವಿಗಳನ್ನು ಲಜ್ಜೆಗೆ ತಳ್ಳಬಲ್ಲ ಸೂಕ್ಷ್ಮಜ್ಞತೆ ಪಡೆದಿದ್ದ ಬೇಂದ್ರೆ—ಈ ನಮ್ಮ 'ದತ್ತ' ಕೂಡ ಕಾಲನ ಕೈಗೆ ಸಿಕ್ಕಬಹುದೆಂದು ನಂಬುವುದೂ ಕಷ್ಟವಾಗುತ್ತಿದೆ. ಮಳೆ ಹೊಯ್ಯುತ್ತಿದೆ. 'ಹೋಯ್ತೋ ಜಗವೆಲ್ಲ ತೋಯ್ತಾ!' ಎಂದು ಹಾಡಿದ ರಸಋಷಿಯ ಮಾತು ನೆನಪಾಗುತ್ತಿದೆ. ಬೇಂದ್ರೆಯ ಬಗ್ಗೆ ಫೋನಿನಲ್ಲಿ ಜನ ನಮ್ಮಲ್ಲಿ ತಮ್ಮ ದುಗುಡ ತೋಡಿಕೊಳ್ಳುತ್ತಿದ್ದಾರೆ. 'ಕುಣಿಯೋಣು ಬಾರಾ' ಎಂದು ಕನ್ನಡಿಗರೊಂದಿಗೆ ನಲಿದಿದ್ದ ಬೇಂದ್ರೆಯ ಮಾತುಗಳು ಜಗುಲಿಯ ಮೇಲೆ ಪಟಾಕಿ ಹಾರಿಸುತ್ತ ಕುಣಿಯುತ್ತಿರುವ ಮಕ್ಕಳ ಹೃದಯದಲ್ಲಿ ಸ್ಪಂದಿಸುತ್ತಿವೆ. ಜಿಬರು ಮಳೆ, ನಗೆ, ದೀವಳಿಗೆಯ ಬೆಳಕು. 'ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾಂವ' ಎಂದೂ 'ಅವನು ಕೊಟ್ಟ ವಸ್ತು-ಒಡವೆ ನನಗೆ ಅವಗೆ ಗೊತ್ತು,

ತೋಳತುಂಬ ತೋಳಬಂದಿ ಕೆನ್ನೆತುಂಬ ಮುತ್ತು' ಎಂದೂ ಹಾಡಿದರು ರಸಿಕ ಬೇಂದ್ರೆ. 'ನೀ ಹೀಂಗ ನೋಡಬ್ಯಾಡ ನನ್ನ' ಎಂದು ದುರಂತದ ಸಿಟ್ಟುಸಿರಿಟ್ಟರು ಬೇಂದ್ರೆ. 'ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ ಇನ್ನೂ ಬರಲಿಲ್ಲ' ಎಂದೂ 'ಕುರುಡು ಕಾಂಚಾಣ ಕುಣಿಯುತಲಿತ್ತೋ, ಕಾಲಿಗೆ ಬಿದ್ದವರ ತುಳಿಯುತಲಿತ್ತೋ' ಎಂದೂ ಈ ನಾಡ ದಿಕ್ಕಿಲ್ಲದ ಜನರ ಬಗ್ಗೆ ಬರೆದರು ಬೇಂದ್ರೆ. ಅಖಂಡ ಕರ್ನಾಟಕದ ಕನಸು ಕಂಡು, 'ಗಂಡಸಾದರೆ ನಿನ್ನ ಬಲಿಕೊಡುವೆಯೇನು?' ಎಂದು ಕನ್ನಡಮ್ಮನ ಪ್ರಶ್ನೆ ಎದುರಿಸಿ ಕನ್ನಡ ತಾಯಿಗಾಗಿ ತಮ್ಮ ಕೊರಳು ತೆರೆದಿಟ್ಟರು ಬೇಂದ್ರೆ. ಇದು ಒಂದು ಮುಖ. 'ಇಳಿದು ಬಾ ತಾಯಿ' ಎಂದು ಅಮೂರ್ತಶಕ್ತಿಯನ್ನು ಮೂರ್ತಿಯಾಗಿ ಕೆತ್ತಿದ್ದು, 'ಹಕ್ಕಿ ಹಾರುತಿದೆ ನೋಡಿದಿರಾ?' ಎಂದು ಮಿಂಚುವ ಕಾಲವನ್ನು ಅನಂತತೆಯಲ್ಲಿಟ್ಟು ನೋಡಿದ್ದು, 'ನಾ ಸ್ವರಾ ಕೇಳಿ ಮಾಮರಾ ಆಗತೇನೋ' ಎಂದು ಹಸಿರು ತೋಪಿನ ಕೋಗಿಲೆಯ ಮೂಲಕ ಆಧ್ಯಾತ್ಮದಲ್ಲಿ ಜನರನ್ನು ಅನುಕರಿಣಿಸಿದ್ದು ಇನ್ನೊಂದು ಬೇಂದ್ರೆ ಮುಖ. ಎಲ್ಲಕ್ಕಿಂತ ಮುಖ್ಯವಾಗಿ ಬದುಕೊಂದು ಆಟ ಮತ್ತು ಸವಾಲೆಂದು ಒಮ್ಮೆಗೇ ಗ್ರಹಿಸಿದರು ಬೇಂದ್ರೆ. ಧಾರವಾಡದ ಸಾಧನಕೇರಿಯಿಂದ ತಮ್ಮ ಚರ್ಚೆ, ತಮಾಷೆ, ರಸಿಕತೆ, ತಾಂತ್ರಿಕತೆಯಿಂದ ಇಡೀ ಕರ್ನಾಟಕದ ಜನ ತಮ್ಮ ವ್ಯಕ್ತಿತ್ವದ ಅಂಚಿನಲ್ಲಿದ್ದು ಭಾವಿಸುವಂತೆ ಮಾಡಿದರು ಬೇಂದ್ರೆ. ಇಡೀ ಬದುಕನ್ನು ಮಗುವಿನಂತೆ, ತತ್ವಜ್ಞಾನಿಯಂತೆ, ಹಳ್ಳಿಗನಂತೆ ಕಳೆದು ಕ್ರಿಯಾಶೀಲತೆಯನ್ನು ಜೀವನದ ವಿವರವನ್ನಾಗಿ ಮಾಡಿಕೊಂಡು, ಯಾವ ಪ್ರಶಸ್ತಿ, ಖ್ಯಾತಿ, ಸಂಪತ್ತು ಬಂದರೂ ತಮ್ಮ ಸೃಷ್ಟಿಯ ಚೇತನವನ್ನು ತಟ್ಟದಂತೆ ನೋಡಿಕೊಂಡರು ನಮ್ಮ ಬೇಂದ್ರೆ" ಎಂದು ಹೇಳುತ್ತ, "ತುಂಬು ಜೀವನ ನಡೆಸಿ, ಕನ್ನಡ ಭಾಷೆ ಚಿಗುರೊಡೆವಂತೆ, ಮಾಮರವಾಗಿ ಹನೆ ಬಿಡುವಂತೆ, ಹಣ್ಣಾಗಿ ಫಲ ಕೊಡುವಂತೆ ಮಾಡಿದ ಈ ನಮ್ಮ ದತ್ತನ ಸಾವಿನ ಸಮಯದಲ್ಲಿ 'ಇದು ಬರೀ ಬದುಕಲ್ಲೊ ಅಣ್ಣಾ' ಎನ್ನುವುದಕ್ಕಿಂತ ಹೆಚ್ಚೇನು ಹೇಳಲು ಸಾಧ್ಯ?" ಎಂದು ಕೇಳಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಶ್ರದ್ಧಾಂಜಲಿ

ಕನ್ನಡ ಸಾಹಿತ್ಯ ಪರಿಷತ್ತು ದಿನಾಂಕ ೨೮-೧೦-೧೯೮೧ರಂದು ಸಂಜೆ ೬:೩೦ ಗಂಟೆಗೆ ಬೆಂಗಳೂರಿನ ತನ್ನ ಕಾರ್ಯಾಲಯದ ಕಟ್ಟಡದಲ್ಲಿ ಕವಿವರ್ಯ ಬೇಂದ್ರೆಯವರ ನಿಧನಕ್ಕಾಗಿ ಸಂತಾಪ ಸೂಚಿಸುವ ಸಭೆಯೊಂದನ್ನು ಏರ್ಪಡಿಸಿತ್ತು. ಈ ಸಭೆಯಲ್ಲಿ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಾ|| ವಿ. ಕೃ. ಗೋಕಾಕ್, ಡಾ|| ಸಿದ್ದಯ್ಯ ಪುರಾಣಿಕ, ಶ್ರೀ ಎಲ್. ಎಸ್. ಶೇಷಗಿರಿರಾವ್ ಮತ್ತು ಪರಿಷದಧ್ಯಕ್ಷ ಶ್ರೀ ಹಂ. ಪ. ನಾಗರಾಜಯ್ಯ ಇವರುಗಳು ಭಾಗವಹಿಸಿದ್ದರು. ಈ ಸಭೆಗೆ ಕರ್ನಾಟಕ

ರಾಜ್ಯದ ವಿದ್ಯಾಸಚಿವ ಮಾನ್ಯ ಶ್ರೀ ಜಿ ಬಿ ಶಂಕರರಾವ್ ಸ್ವಯಂ ಪ್ರೇರಣೆಯಿಂದ, ಕವಿವರ್ಯ ಬೇಂದ್ರೆಯವರ ಬಗ್ಗೆ ತಮಗಿದ್ದ ಗೌರವಾದರಗಳ ದ್ಯೋತಕವಾಗಿ— ಅನೌಪಚಾರಿಕವಾಗಿ. ಕೇವಲ ಒಬ್ಬ ಸಾಮಾನ್ಯ ಶ್ರೋತೃವಿನಂತೆ ಆಗಮಿಸಿದ ರಾದರೂ ಪರಿಷತ್ತಿನ ಮತ್ತು ಜನತೆಯ ಕೋರಿಕೆಯಂತೆ ಅವರೂ ಸಭೆಯಲ್ಲಿ ಕವಿವರ್ಯರನ್ನು ಕುರಿತು. ತಾವು ತಮ್ಮ ವಿದ್ಯಾರ್ಥಿದೆಸೆಯಲ್ಲಿ ಕವಿವರ್ಯರೊಂದಿಗೆ ಕಳೆದಿದ್ದ ರಸನಿಮಿಷಗಳನ್ನು ಕುರಿತು, ಅಂತಃಕರಣಪೂರ್ವಕವಾಗಿ ಮಾತನಾಡಿದರು.

[ಸಂಜೆ ೬-೩೦ ಗಂಟೆಗೆ ಪ್ರಾರಂಭವಾಗಬೇಕಾಗಿದ್ದ ಶೋಕಸಭೆಯು ಆಸನವ್ಯವಸ್ಥೆ ಮತ್ತು ಧ್ವನಿವರ್ಧಕ ಯಂತ್ರ ವ್ಯವಸ್ಥೆ ಇವುಗಳಲ್ಲಿನ ತೊಂದರೆಯಿಂದಾಗಿ ೭ ಗಂಟೆಯ ನಂತರ ಪ್ರಾರಂಭವಾಯಿತಾದರೂ ಏತನ್ಮಧ್ಯೆ ಈ ಮೇಲಣ ಕಾರಣಗಳಿಂದಾಗಿ ಸಭೆಯಲ್ಲಿ ಗೊಂದಲ ವುಂಟಾಗಿದ್ದಿತಾದರೂ, ಸಭಿಕರಲ್ಲಿ ಯಾರೋ ಒಬ್ಬರು ಸ್ವಯಂ ಪ್ರೇರಣೆಯಿಂದ ಆ ಗೊಂದಲದ ಮಧ್ಯೆಯೇ ಎದ್ದು ಬಂದು, ವೇದಿಕೆಯ ಹತ್ತಿರ ನೆಲದ ಮೇಲೆಯೇ ನಿಂತು, ಯಾವ ಧ್ವನಿವರ್ಧಕ -ಯಂತ್ರದ ಸಹಾಯವೂ ಇಲ್ಲದೆ (ಆ ಸಹಾಯದ ವ್ಯವಸ್ಥೆ ಇನ್ನೂ ಆಗುವುದರಲ್ಲಿತ್ತು) ಸುಮ್ಮನೆ ಬರಿ ಬಾಯಿಯಿಂದ ಬೇಂದ್ರೆಯವರ 'ಗಂಗಾವತರಣ' ಕವನವನ್ನು ಭಾವಪರವಶರಾಗಿ 'ಇಳಿದು ಬಾ ತಾಯಿ' ಎಂದು ಹಾಡಲುಪಕ್ರಮಿಸಲು ಮಹಾಗೊಂದಲದಲ್ಲಿ ಮುಳುಗಿದ್ದ ಆ ಬೃಹತ್ಸಭೆಯು ತತ್‌ಕ್ಷಣ ಮಂತ್ರಮುಗ್ಧವಾದಂತೆ ಸ್ತಬ್ಧವಾಗಿ ಭಕ್ತಿಯಿಂದ ಲಕ್ಷ್ಯಪೂರ್ವಕವಾಗಿ ಆ ಬೇಂದ್ರೆ-ಗೀತವನ್ನು ಆಲಿಸತೊಡಗಿತು! ಇದು ದಿವಂಗತ ಕವಿವರ್ಯ ಬೇಂದ್ರೆಯವರ ಕಾವ್ಯದ ಮಂತ್ರಶಕ್ತಿಯ ಜೀವಂತ, ಪ್ರತ್ಯಕ್ಷ ನಿದರ್ಶನವಲ್ಲದೆ ಮತ್ತಿನ್ನೇನು?]

ಸಭೆಯ ಪ್ರಾರಂಭದಲ್ಲಿ ಮಾತನಾಡಿದ ಡಾ|| ವಿನಾಯಕ ಗೋಕಾಕರು ಕಳೆದ ಐವತ್ತು-ಐವತ್ತೈದು ವರುಷಗಳಿಂದಲೂ ತಮಗೆ ಅತ್ಯಂತ ಹತ್ತಿರದ ಹಿರಿಯ ಮಿತ್ರರೂ ಮಾರ್ಗದರ್ಶಕರೂ ಆಗಿದ್ದ ಕವಿವರ್ಯ ಬೇಂದ್ರೆಯವರ ನಿಧನದಿಂದ ತಮ್ಮ ಜೀವನ ದಲ್ಲೀಗ ಒಂದು ಮಹಾ ಶೂನ್ಯತೆಯುಂಟಾಗಿದೆ ಎಂದು ಹೇಳುತ್ತ ಬೇಂದ್ರೆಯವರದು ಒಂದು ಪರಿಪೂರ್ಣ, ಪರಿಪಕ್ವ ಜೀವನವಾಗಿದ್ದಿತೆಂದೂ, ಅವರ ಅಮೋಘವಾದ ಕಾವ್ಯವು ಅವರ ಈ ಪರಿಪೂರ್ಣ ಜೀವನದ ಒಂದು ಅಂಶ—ಒಂದು ಮಹತ್ವದ ಅಂಶ—ಮಾತ್ರವಾಗಿದ್ದಿತೆಂದೂ ಹೇಳಿದರು. ಚಿಕ್ಕ ಮಕ್ಕಳೇ ಇರಲಿ ದೊಡ್ಡವರೇ ಇರಲಿ, ಸೌದೆ ಕಡಿಯುವಂಥ, ಇಲ್ಲವೆ ತರಕಾರಿ—ಮೊಸರು ಮಾರುವಂಥ ಬಡವರೇ ಇರಲಿ ಜರತಾರಿ ಡ್ರೆಸ್ಸಿನ ಶ್ರೀಮಂತರೇ ಇರಲಿ ಬೇಂದ್ರೆಯವರು ಈ ಎಲ್ಲ ಥರದ ಜನರ ಅಂತಃಕರಣದಲ್ಲಿ ಬೆರೆತು ನಡೆಯುತ್ತಿದ್ದರು, ಬೆರೆತು ನುಡಿಯುತ್ತಿದ್ದರು. ಬೇಂದ್ರೆ ಯವರು ತಮ್ಮ ಅಂತಃಕರಣಪೂರ್ವಕವಾದ ಪ್ರಬುದ್ಧ ಮಾರ್ಗದರ್ಶನದಿಂದ ಅನೇಕರ ಕತ್ತಲುಕವಿದಂಥ ಮನಗಳನ್ನು ಮತ್ತು ಮನೆಗಳನ್ನು ಬೆಳಗಿದ್ದಾರೆ ಎಂದು ಹೇಳಿದ ಶ್ರೀ ಗೋಕಾಕರು ಕರ್ನಾಟಕದಲ್ಲಿ ನಾಡಹಬ್ಬದ ಸಾಹಿತ್ಯೋತ್ಸವವನ್ನು ಮತ್ತು ಸಾಹಿತ್ಯದ ಕಾರ್ಯಕ್ರಮಗಳನ್ನು ಪ್ರಾರಂಭಿಸಿದ ಮೊದಲಿಗರು ಬೇಂದ್ರೆ ಯವರೇ ಎಂದು ತಿಳಿಸಿದರು. ಬೇಂದ್ರೆಯವರು ದೊಡ್ಡ ಕವಿಗಳಾಗಿದ್ದರಷ್ಟೇ ಅಲ್ಲ, ದೊಡ್ಡ ವಿಮರ್ಶಕರೂ ಆಗಿದ್ದರು. ಬೃಹತ್ಪ್ರಮಾಣದಲ್ಲಿ ಮಹತ್ವದ ವಿಮರ್ಶಾ ಸಾಹಿತ್ಯ

ವನ್ನು ಬೇಂದ್ರೆಯವರು ಕನ್ನಡಿಗರಿಗೆ ಕೊಟ್ಟುಹೋಗಿದ್ದಾರೆ. ಆ ವಿಮರ್ಶಾ ರಾಶಿಯ ಅಧ್ಯಯನದ ಕೆಲಸ ಇನ್ನುಮೇಲೆ ನಡೆಯಬೇಕಾಗಿದೆ ಎಂದು ಗೋಕಾಕರು ನುಡಿದರು. ಅನಂತರ ಮಾತನಾಡಿದ ಡಾ|| ಸಿದ್ಧಯ್ಯ ಪುರಾಣಿಕರು "ಬೇಂದ್ರೆಯವರು ಕಾವ್ಯಪ್ರಪಂಚದ ಅದ್ಭುತಗಳಲ್ಲಿ ಒಬ್ಬರು. ಅವರು ಕಾವ್ಯಮುಖೇನ ಅಷ್ಟೇ ಅಲ್ಲದೆ ಇನ್ನೂ ನಾನಾ ರೀತಿಯಲ್ಲಿ ಕನ್ನಡ ನಾಡಿನ ಸೇವೆ ಮಾಡಿದ್ದಾರೆ, ಅಷ್ಟೇ ಅಲ್ಲ ಕರ್ನಾಟಕ–ಮಹಾರಾಷ್ಟ್ರಗಳ ನಡುವಣ ಸೇತುವೆಯಾಗಿ ಅಂತರ್ಭಾರತೀಯ ಸೇವೆಯನ್ನೂ ಮಾಡಿದ್ದಾರೆ" ಎಂದು ಬೇಂದ್ರೆಯವರು ಕನ್ನಡಕ್ಕಾಗಿ ಮಾಡಿದ ಬಹುಮುಖ ಸೇವೆಯನ್ನು ಕೊಂಡಾಡಿದರು. "ಬೆಳಕಿನ ಹಬ್ಬದ ದಿನ ನಮ್ಮನ್ನು ಬಿಟ್ಟು ಹೋಗಿರುವ ಬೇಂದ್ರೆಯವರು ತಮ್ಮ ಕಾವ್ಯದ ಬೆಳಕನ್ನು ನಮಗೆ ಕೊಟ್ಟು ಹೋಗಿದ್ದಾರೆ" ಎಂದು ಹೇಳಿದ ಶ್ರೀ ಎಲ್. ಎಸ್. ಶೇಷಗಿರಿರಾಯರು "ಸೂರ್ಯ ಎಂದರೆ ಬಿಸಿಲು ಹೇಗೆ ಸಹಜವೋ ಕಾವ್ಯ ಎಂದರೆ ಬೇಂದ್ರೆಯವರ ಹೆಸರೂ ಅಷ್ಟೇ ಸಹಜ" ಎಂದು ಅಭಿಪ್ರಾಯಪಟ್ಟರು. "ಬೇಂದ್ರೆಯವರಂಥ ಸಮುದಾಯ–ಕವಿಗಳು ಬಹಳ ವಿರಳ. ಇಂತಹ ಕವಿ ನಮ್ಮನ್ನು ಬಿಟ್ಟು ಹೋಗಿದ್ದಾರೆ" ಎಂದರು. ಆಮೇಲೆ ಮಾತನಾಡಿದ 'ಅಣ್ಣ'–ಶಾಸ್ತ್ರಿಯವರು "ನಾನು ನನ್ನ ಪ್ರೀತಿಯ ತಮ್ಮನನ್ನು ಕಳೆದುಕೊಂಡಿದ್ದೇನೆ. ಈ ತಮ್ಮ ಬಹಳ ದೊಡ್ಡ ಕವಿ, ಕವಿಯಷ್ಟೇ ಅಲ್ಲ ತತ್ವಜ್ಞಾನಿ ಕೂಡ" ಎಂದರು. "ಅವರ ಒಂದೊಂದು ಕವನಗಳನ್ನು ಓದಿದರೆ ಅವುಗಳ ಒಳಗಿನ ಅರ್ಥವನ್ನು ತಿಳಿದುಕೊಂಡರೆ ಜನ್ಮದ ಪರಿಷ್ಕಾರವಾಗುವುದು. ಅವರನ್ನು ನಾನು ೧೯೨೮ರಿಂದಲೂ ಬಲ್ಲೆ. ಅವರು ಬೆಳಗಾವಿಯ ಸಾಹಿತ್ಯ ಸಮ್ಮೇಳನದಲ್ಲಿ ಹಾಡಿದ 'ಹಕ್ಕಿ ಹಾರುತಿದೆ' ಕವನ ಎಂಥವರನ್ನೂ ಮರುಳುಗೊಳಿಸುವಂಥದು. ಅಂಥ ಮೋಹಕ ಶಕ್ತಿ ಆತನ ಕವಿತೆಯಲ್ಲಿತ್ತು, ಆತನ ಕವಿತೆಯ ವಾಚನದಲ್ಲಿತ್ತು" ಎಂಬುದಾಗಿ ಬೇಂದ್ರೆ–ಕಾವ್ಯವನ್ನು ವರ್ಣಿಸಿದರು. ಅನಂತರ ಸಭೆಯ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಹಂ. ಪ. ನಾಗರಾಜಯ್ಯ ಅವರು ಪರಿಷತ್ತಿನ ಪರವಾಗಿ ಕವಿವರ್ಯ ದ. ರಾ. ಬೇಂದ್ರೆ ಹಾಗೂ ಸಾಹಿತ್ಯ–ಪ್ರಕಾಶಕ ಶ್ರೀ ಬುರ್ಲಿ ಬಿಂದುಮಾಧವ ಇವರುಗಳ ನಿಧನಕ್ಕಾಗಿ ಸಂತಾಪಸೂಚಕ ನಿರ್ಣಯಗಳನ್ನು ಮಂಡಿಸಿದರು. ಸಭೆಯು ಈ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು. ಆಸನವ್ಯವಸ್ಥೆ ಮತ್ತು ಧ್ವನಿವರ್ಧಕದ ವ್ಯವಸ್ಥೆ ಇವುಗಳ ಏರ್ಪಾಡಿನಲ್ಲಾದ ತೊಂದರೆಗಳಿಗಾಗಿ ಶ್ರೀ ಹಂ. ಪ. ನಾ ಅವರು ಸಭಿಕರ ಕ್ಷಮಾಪಣೆಯನ್ನು ಕೋರಿದರು. ಸಭೆಯು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಶ್ರೀ ಕುವೆಂಪು ಅವರ ಕಂಬನಿ

"ಕನ್ನಡದ ನವೋದಯದ ಅಗ್ರಗಣ್ಯ ಕವಿಗಳ ಪೈಕಿ ಬೇಂದ್ರೆ ಬಹಳ ಮುಖ್ಯರಾದವರು. ಜನತೆಯನ್ನು ಬಡಿದೆಬ್ಬಿಸಬಲ್ಲ ಕೀರ್ತಿಶಾಲಿ ಅವರಾಗಿದ್ದರು. ಅವರ

ನಿಧನ ಲೌಕಿಕವಾಗಿ ದುಃಖ ತರುವುದಾದರೂ ಅವರು ಬದುಕನ್ನು ಸಂಪೂರ್ಣವಾಗಿ ಸಾರ್ಥಕವಾಗಿ ಜೀವಿಸಿದರು. ಅವರ ಸಾಹಿತ್ಯ ಆಚಂದ್ರಾರ್ಕವಾಗಿ ಬೆಳಗುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ. ಅವರ ಆತ್ಮಕ್ಕೆ ನಾನು ಶಾಂತಿ ಕೋರುತ್ತೇನೆ" ಎಂದು ರಾಷ್ಟ್ರಕವಿ ಶ್ರೀ ಕುವೆಂಪು ಅವರು ಕವಿವರ್ಯ ಬೇಂದ್ರೆಯವರು ನಿಧನರಾದ ದಿನ ನೀಡಿದ ತಮ್ಮ ಪತ್ರಿಕಾ-ಹೇಳಿಕೆಯಲ್ಲಿ ನುಡಿಯುತ್ತ ಬೇಂದ್ರೆಯವರಿಗೆ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

ಶ್ರೀ ಪು.ತಿ.ನ. ಅವರ ಕಂಬನಿ

"ಬೇಂದ್ರೆಯವರೀಗ ದೇವಲೋಕ ಸೇರಿ ಮಹಾವಿಷ್ಣುವಿನ ಕೌಸ್ತುಭ ರತ್ನ ಮಾಲಿಕೆಯಲ್ಲಿ ಲೀನರಾಗಿದ್ದಾರೆ ಅಪುರವಾದ ಅವರ ಕೃತಿಗಳು ನಮ್ಮ ನಾಡನ್ನು ಬೆಳಗುತ್ತಿವೆ. ಅವರ ಪ್ರೀತಿಯೇ ನನ್ನ ಭಾಗ್ಯವಾಗಿತ್ತು. ಆದರೆ ಇಂದು ಆ ಭಾಗ್ಯ ಕಳೆದುಕೊಂಡಿದ್ದೇನೆ" ಎಂದು ಕನ್ನಡದ ಹಿರಿಯ ಕವಿ ಶ್ರೀ ಪು.ತಿ.ನ. ಅವರು ಕವಿವರ್ಯ ಬೇಂದ್ರೆಯವರ ನಿಧನದ ವಾರ್ತೆ ತಿಳಿಯುತ್ತಲೇ ನೀಡಿದ ತಮ್ಮ ಪತ್ರಿಕಾ-ಹೇಳಿಕೆಯಲ್ಲಿ ಹೇಳುತ್ತ ತಮ್ಮ ಪ್ರೀತಿಯ ಕವಿವರ್ಯರಿಗೆ ಶ್ರದ್ಧಾಂಜಲಿ ಸಮರ್ಪಿಸಿದರು.

ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರ ಶ್ರದ್ಧಾಂಜಲಿ

"ಶತಮಾನದ ಕವಿಯಾದ ಡಾ|| ದ. ರಾ. ಬೇಂದ್ರೆಯವರ ನಿಧನದಿಂದ ಕನ್ನಡದ ಕೀರ್ತಿಕಳಶವೊಂದು ಕಳಚಿ ಬಿದ್ದಂತಾಗಿದೆ" ಎಂದು ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ|| ಹಾ. ಮಾ. ನಾಯಕ ಅವರು ದಿನಾಂಕ ೨೭-೧೦-೮೧ರಂದು ಮೈಸೂರಿನಲ್ಲಿ ನೀಡಿದ ತಮ್ಮ ಪತ್ರಿಕಾ-ಪ್ರಕಟನೆಯಲ್ಲಿ ತಿಳಿಸುತ್ತ ದಿವಂಗತ ಕವಿವರ್ಯ ಬೇಂದ್ರೆಯವರಿಗೆ ತಮ್ಮ ಶ್ರದ್ಧಾಂಜಲಿಯನ್ನು ಸಲ್ಲಿಸಿದರು.

ಸಾಧನಕೇರಿಯಲ್ಲಿ ಶೋಕಸಭೆ, ಶಂ. ಬಾ. ಜೋಶಿ ಅವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ

ದಿನಾಂಕ ೨೬-೧೦-೮೧ರಂದು ಮುಂಬಯಿಯಲ್ಲಿ ಕವಿವರ್ಯ ಬೇಂದ್ರೆಯವರು ನಿಧನರಾದ ವಾರ್ತೆ ಧಾರವಾಡವನ್ನು ತಲುಪುತ್ತಲೇ ಕಳೆದ ಐವತ್ತು ವರುಷಗಳಿಂದಲೂ ಕವಿವರ್ಯರ ಅಚ್ಚುಮೆಚ್ಚಿನ ನಿವಾಸಸ್ಥಾನವಾಗಿದ್ದ ಧಾರವಾಡದ ಸಾಧನಕೇರಿ ಬಡಾವಣೆಯಲ್ಲಿನ ಅವರ ಸ್ವಂತ ಮನೆ 'ಶ್ರೀಮಾತಾ'ದ ಒಳಿ ಸಾಧನಕೇರಿಯ ನಿವಾಸಿಗಳು (ಇವರುಗಳಲ್ಲಿ ಅನೇಕರು ಹೆಸರಾಂತ ಸಾಹಿತಿಗಳು) ಸುಪ್ರಸಿದ್ಧ ಭಾಷಾ ಶಾಸ್ತ್ರಜ್ಞರೂ, ಸಂಶೋಧಕರೂ, ಐವತ್ತುನಾಲ್ಕನೆಯ ಅಖಿಲ ಭಾರತ


ಕನ್ನಡ ಸಾಹಿತ್ಯ-ಸಮ್ಮೇಳನದ ನಿಯೋಜಿತ ಅಧ್ಯಕ್ಷರೂ. ಕವಿವರ್ಯ ಬೇಂದ್ರೆ ಯವರ ಒಡನಾಡಿಗಳೂ, ನೆರೆಹೊರೆಯವರೂ ಆದ ಡಾ|| ಶಂ. ಬಾ. ಜೋಶಿ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ 'ಹಿತ್ತಲ ಗಿಡ'ದಂತಿದ್ದರೂ ತಮಗೆ ಅಮೂಲ್ಯ ವಾದ 'ಮದ್ದು' ಆಗಿದ್ದ—'ನಿತ್ಯ ಸಂಜೀವನಿ' ಆಗಿದ್ದ ಕವಿವರ್ಯ ಬೇಂದ್ರೆಯವರ ನಿಧನಕ್ಕೆ ತಮ್ಮ ಅತ್ಯಂತ ದುಃಖತಪ್ತ, ಅಪ್ತ ಸಂತಾಪವನ್ನು ವ್ಯಕ್ತಪಡಿಸಿದರು. "ಅಗs-(ಕತ್ತಲು ಕವಿದ)-ಸಂsಜೆಯಾಗಿತ್ತು."

ನಾಡಿನ ವಿವಿಧ ಸಂಘ-ಸಂಸ್ಥೆಗಳ ಶ್ರದ್ಧಾಂಜಲಿ

ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯ. ಮಂಗಳೂರು ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯ, ಕನ್ನಡ ಚಳವಳಿಗಾರರ ಕೇಂದ್ರ, ದೇಶದ ಎಲ್ಲಾ ರಾಷ್ಟ್ರೀಯ ರಾಜಕೀಯ ಪಕ್ಷಗಳ ಕರ್ನಾಟಕದ ಪ್ರಾದೇಶಿಕ ಸಮಿತಿಗಳು ಮತ್ತು ಕಮಿಟಿಗಳು, ಕರ್ನಾಟಕ ರಾಜ್ಯದ ಸರ್ಕಾರಿ ನೌಕರರ ಸಂಘ, ಕಾರ್ಮಿಕರ ವಿವಿಧ ಸಂಘ-ಸಂಸ್ಥೆಗಳು, ಬೆಂಗಳೂರು ನಗರದ ಆಟೋ ಚಾಲಕರ ಸಂಘ, ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳ ನೌಕರರ ಸಂಘ. ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ, ಬಂಡಾಯ ಸಾಹಿತ್ಯ ಸಂಘಟನಾ ಕೇಂದ್ರ ಸಮಿತಿ, ಮುಂತಾದ ನಾಡಿನ ವಿವಿಧ ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕ, ಕಾರ್ಮಿಕ, ಔದ್ಯೋಗಿಕ, ರಾಜಕೀಯ ಮತ್ತು ಸಾಮಾಜಿಕ ಸಂಘ-ಸಂಸ್ಥೆಗಳು ಕವಿವರ್ಯ ಬೇಂದ್ರೆಯವರ ನಿಧನವನ್ನು ಕುರಿತು ತಮ್ಮ ತೀವ್ರ ಶೋಕವನ್ನು ವ್ಯಕ್ತಪಡಿಸಿ ದಿವಂಗತ ಕವಿವರ್ಯರಿಗೆ ತಮ್ಮ ಹಾರ್ದಿಕ ಶ್ರದ್ಧಾಂಜಲಿಯನ್ನು ಸಮರ್ಪಿಸಿದವು.

ಬೇಂದ್ರೆ : ಜೀವನ, ಕೃತಿಸೂಚಿ

ಸಂಗ್ರಹ : ನಾ. ಗೀತಾಚಾರ್ಯ



1. ಬೇಂದ್ರೆ–ಬದುಕು (ಕೆಲವು ಪ್ರಮುಖ ಘಟ್ಟಗಳು)

೩೧–೧–೧೮೯೬ ಧಾರವಾಡದಲ್ಲಿ ಜನನ. ಮಾಘಶುದ್ಧ ಪ್ರತಿಪದೆ, ಗುರು ಪ್ರತಿಪದೆ, ಮನ್ಮಥ ನಾಮ ಸಂವತ್ಸರ.

೧೯೦೭ ತಂದೆ ರಾಮಚಂದ್ರರ (ತಾತಂಭಟ್ಟ) ಮರಣ.

೧೯೧೩ ಮ್ಯಾಟ್ರಿಕ್ ಮುಗಿಸಿ ಪುಣೆ ಫರ್ಗ್ಯೂಸನ್ ಕಾಲೇಜಿಗೆ ಸೇರಿದ್ದು.

೧೯೧೫ 'ಶಾರದಾಮಂಡಲ' ಸ್ನೇಹಿತರ ಕೂಟ ಆರಂಭ.

೧೯೧೬ ಪುಣೆ ಕರ್ನಾಟಕ ಸಂಘದಲ್ಲಿ ಪ್ರಥಮವಾಗಿ ಕವಿತಾವಾಚನ.

೧೯೧೭ ವಧುಪರೀಕ್ಷೆ – ವಧುವಿನ ಜಾತಕವನ್ನು ತಮ್ಮ ಜಾತಕದೊಡನೆ ತಾವೇ ಹೋಲಿಸಿ ನೋಡಿಕೊಂಡದ್ದು.

೧೯೧೮ ಬಿ. ಎ. ಪಾಸು. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಿಂದ ಶಿಕ್ಷಕ ವೃತ್ತಿಗೆ ಆಹ್ವಾನ.

೧೯೧೯ ಲಕ್ಷ್ಮೀಬಾಯಿಯವರೊಡನೆ ವಿವಾಹ ; ಹುಬ್ಬಳ್ಳಿಯಲ್ಲಿ.

೧೯೨೨ ಮೊದಲ ಪುಸ್ತಕ (ಕೃಷ್ಣಕುಮಾರಿ–ಷಟ್ಪದಿ) ಪ್ರಕಟನೆ. ಮೊದಲನೇ ಮಗ ಕ್ಷೇಮೇಂದ್ರನ ಜನನ.

೧೯೨೩ ಕ್ಷೇಮೇಂದ್ರನ ನಿಧನ.

೧೯೨೪ ಎರಡನೇ ಮಗ ರಾಮನ ಜನನ, "ಗೆಳೆಯರ ಗುಂಪು" ಸಾರ್ವಜನಿಕವಾದದ್ದು, ತಾಯಿ ಅಂಬಕ್ಕ/ಅಂಬಿಕ (ಪಾರ್ವತಿ) ಅವರ ನಿಧನ.

೧೯೨೬ ನಾಡಹಬ್ಬದ ಆಚರಣೆಯನ್ನು ಆರಂಭಿಸಿದ್ದು.

೧೯೨೭ ಮೂರನೇ ಮಗ ಭಾಸ್ಕರನ ಜನನ ಮತ್ತು ನಿಧನ.

೧೯೨೮ ನಾಲ್ಕನೇ ಮಗ ಪಾಂಡುರಂಗನ ಜನನ.

೧೯೨೯ ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ' ಕವಿತಾವಾಚನ.

೧೯೩೦ ಗೆಳೆಯರ ಗುಂಪಿನ ಕವಿಗಳ ಕವನ ಸಂಕಲನ 'ಹಕ್ಕಿ ಹಾರುತಿದೆ' ಪ್ರಕಟನೆ; ಮೈಸೂರಿನಲ್ಲಿ ಲೇಖಕರ ಗೋಷ್ಠಿಯ ಅಧ್ಯಕ್ಷತೆ.

೧೯೩೨ 'ಗರಿ' ಪ್ರಥಮ ಕವನ ಸಂಕಲನ ಪ್ರಕಟನೆ (ಮಾಸ್ತಿಯವರಿಂದ) ಮತ್ತು 'ನರಬಲಿ' ಕವನದ ನಿಮಿತ್ತ ಜೇಲುವಾಸ.

೧೯೩೪ ಮೊದಲನೇ ಮಗಳು ಲಲಿತೆಯ ಜನನ ಮತ್ತು ನಿಧನ.

೧೯೩೫ ಎಂ. ಎ. ಪಾಸು; ಮುಂಬೈ ಕವಿ ಸಮ್ಮೇಳನದ ಅಧ್ಯಕ್ಷತೆ; ಐದನೇ ಮಗ ವಾಮನನ ಜನನ.

೧೯೩೬ ವಿಜಯನಗರ ಷಟ್‌ಸಾಂವತ್ಸರಿಕ ಉತ್ಸವದ ನಿಮಿತ್ತ ಜಿ. ಬಿ. ಜೋಶಿ ಯವರೊಡನೆ ಹಣ ಸಂಗ್ರಹಕ್ಕಾಗಿ ಓಡಾಟ.

೧೯೩೭ ಎರಡನೇ ಮಗಳು ಪ್ರೇಮಳ ಜನನ ಮತ್ತು ನಿಧನ.

೧೯೩೯ ಮೂರನೆ ಮಗಳು ಮಂಗಲೆಯ ಜನನ.

೧೯೪೦ ಗದುಗಿನ ಸಮಿತಿ ಹೈಸ್ಕೂಲಿನಿಂದ ಮುಖ್ಯೋಪಾಧ್ಯಾಯ ಹುದ್ದೆಗೆ ಆಮಂತ್ರಣ.

೧೯೪೧ರ ಕೊನೆ ಬೆಳವಡಿಯಲ್ಲಿ ಭಾಷಣ–ಬಿ ಎಂ ಶ್ರೀ ಯವರೊಡನೆ ೨೧ ಎತ್ತಿನ ಜೋಡಿ ಗಳನ್ನು ಹೂಡಿದ್ದ ಬಂಡಿಯಲ್ಲಿ ಸಂಭ್ರಮದ ಮೆರವಣಿಗೆ.

೧೯೪೨ ಧಾರವಾಡದ ನ್ಯೂ ಇಂಗ್ಲೀಷ್ ಹೈಸ್ಕೂಲಿನಲ್ಲಿ 'ವಾರದಾಗ ಮೂರು ಸರತಿ ಬಂದು ಹೋಗುವ' ಶಿಕ್ಷಕ ಕೆಲಸ.

೧೯೪೩ ಪುಣೆ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ; ಶ್ರೀಮಾತಾ ಅರವಿಂದರ ದರ್ಶನ ಭಾಗ್ಯ.

೨೬–೧೨–೧೯೪೩ ಶಿವಮೊಗ್ಗದ ೨೭ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೪೪ ೬ನೇ ಮಗ ಆನಂದನ ಜನನ ಮತ್ತು ನಿಧನ. ಹಾಗೂ ಎರಡನೆ ಮಗ ರಾಮನ ನಿಧನ; ಡಿ. ಎ. ವಿ. ಕಾಲೇಜು, ಸೊಲ್ಲಾಪುರ ಇವರಿಂದ ಕನ್ನಡ ಪ್ರಾಧ್ಯಾಪಕರಾಗಿ ಆಹ್ವಾನ.

೧೯೪೬ ಸೊಲ್ಲಾಪುರದ ಹೊಲೆಯರ ಸಮಾಜದ ಚಿತ್ರಕಾರರ ಸಭೆಯಲ್ಲಿ ಭಾಷಣ. ಧಾರವಾಡದಲ್ಲಿ ೫೦ನೇ ಹುಟ್ಟುಹಬ್ಬ, ೧೦ ಸಾವಿರ ರೂ. ನಿಧಿ ಅರ್ಪಣೆ.

೧೯೫೪ ಅಪಘಾತಕ್ಕೀಡಾಗಿ ಕಾಲಿಗೆ ಪ್ಲಾಸ್ಟರ್ ಹಾಕಿಸಿಕೊಂಡದ್ದು.

೧೯೫೬ ಆಕಾಶವಾಣಿ ಧಾರವಾಡ ಕೇಂದ್ರದ ಸಾಹಿತ್ಯ ಸಲಹಾಕಾರರಾಗಿ ಆಯ್ಕೆ; ಕಾಲೇಜಿನಿಂದ ಬೀಳ್ಕೊಡುಗೆ; ೬೦ನೇ ಹುಟ್ಟುಹಬ್ಬದ ಸನ್ಮಾನ–ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ.

೧೯೫೯ 'ಅರಳು-ಮರಳು' ಕವನ ಗುಚ್ಛಕ್ಕೆ ಕೇಂದ್ರ ಸಾಹಿತ್ಯ ಅಕಡೆಮಿ ಪ್ರಶಸ್ತಿ.

೧೯೬೩ ತುಮಕೂರಿನ ಪುರಸಭೆಯವರಿಂದ ಸನ್ಮಾನ.

೧೯೬೪ ಮೈಸೂರು ದಸರಾ ಉತ್ಸವ ಸಮಿತಿಯವರಿಂದ ಸನ್ಮಾನ.

೧೯೬೬ 'ಸಂವಾದ' ಮರಾಠಿ ಗ್ರಂಥಕ್ಕೆ ಮಹಾರಾಷ್ಟ್ರದ ಕೇಳಕರರ ಪ್ರಶಸ್ತಿ.

೧೭–೮–೧೯೬೬ ಪತ್ನೀವಿಯೋಗ.

೧೯೬೬ ಶಿರಹಟ್ಟಿಯಲ್ಲಿ ೭೦ನೇ ಹುಟ್ಟುಹಬ್ಬ: ಶಿರಹಟ್ಟಿಯಲ್ಲಿ ಅಜ್ಜನ ಮನೆಗೆ "ಬೇಂದ್ರೆ ಕುಟೀರ" ಎಂದು ನಾಮಕರಣ. ಮೈಸೂರು ಸರ್ಕಾರದಿಂದ ಆಜನ್ಮ ಗೌರವ ವಿಶ್ರಾಂತಿ ವೇತನ. ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್; ಹೈದರಾಬಾದ್ ಹಿಂದಿ ಪ್ರಚಾರ ಸಭಾದವರಿಂದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ.

೧೯೬೮ ಪದ್ಮಶ್ರೀ ಪ್ರಶಸ್ತಿ–ಮೈಸೂರಿನಲ್ಲಿ ಸನ್ಮಾನ; ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.

೧೯೬೯ ಸಾಹಿತ್ಯ ಅಕಡೆಮಿ, ಡೆಲ್ಲಿ, ಅವರಿಂದ 'ಫೆಲೋ' ಪದವಿ ನೀಡಿಕೆ.

೧೯೭೨ ಶ್ರೀ ಅದಮಾರು ಮಠ–ಉಡುಪಿ ಪರ್ಯಾಯದಿಂದ 'ಕರ್ನಾಟಕ ಕವಿ ಕುಲ ತಿಲಕ' ಪ್ರಶಸ್ತಿ; ೭೫ನೇ ಹುಟ್ಟುಹಬ್ಬ—ಸೊಲ್ಲಾಪುರ ಪುಣೆಗಳಲ್ಲಿ; ಕರ್ನಾಟಕ ಸರ್ಕಾರದಿಂದ ಸಾಕ್ಷ್ಯಚಿತ್ರ ತಯಾರಿಕೆ.

೧೯೭೨ ಸೊಲ್ಲಾಪುರದ 'ಅಮೃತ ಮಹೋತ್ಸವ' ಸಭೆಯಲ್ಲಿ ವಿಠಲ ಮೂರ್ತಿ ಕಾಣಿಕೆ.

೧೯೭೩ ಧಾರವಾಡದ ಆಕಾಶವಾಣಿಯಲ್ಲಿ ಸಂಖ್ಯಾಶಾಸ್ತ್ರದ ಬಗೆಗೆ ಡಾ|| ಸರೋಜಿನಿ ಮಹಿಷಿಯವರೊಡನೆ ಸಂಭಾಷಣೆ.

೮–೧೧–೧೯೭೪ 'ನಾಕುತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ; ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕವಿ ಬೇಂದ್ರೆ ವಿಚಾರ ಸಂಕಿರಣ.

೧೯–೨–೧೯೭೬ ವಾರಾಣಸಿಯ ಕಾಶಿ ವಿದ್ಯಾಪೀಠದಿಂದ ಗೌರವ ಡಾಕ್ಟರೇಟ್ ಪದವಿ.

೨೬–೧೦–೧೯೮೧ ನಿಧನ; ಮುಂಬಯಿಯಲ್ಲಿ. ದುರ್ಮತಿ ಸಂವತ್ಸರ ಆಶ್ವಯುಜ ಬಹುಳ ಚತುರ್ದಶಿ.

2. ಬೇಂದ್ರೆ ಬರಹ

೧. ಬೇಂದ್ರೆ ಅವರಿಂದ

[ವಿ. ಸೂ: ನಿರ್ದೇಶಿಸದೆ ಇರುವವುಗಳೆಲ್ಲ ಕವನ ಸಂಕಲನಗಳು; ಮ. ಗ್ರಂ.ಮಾ: ಮನೋಹರ ಗ್ರಂಥ ಮಾಲಾ; ಪ್ರ. ಗ್ರಂ. ಮಾ: ಪ್ರತಿಭಾ ಗ್ರಂಥ ಮಾಲಾ; ಸ. ಪು: ಸಮಾಜ ಪುಸ್ತಕಾಲಯ; ಧಾ: ಧಾರವಾಡ; ಮೈ: ಮೈಸೂರು; ಬೆಂ: ಬೆಂಗಳೂರು; ಮೊ. ಮು: ಮೊದಲ ಮುದ್ರಣ; ಅನು: ಅನುವಾದ.]

ಅರಳು-ಮರಳು (ಐದು ಸಂಕಲನಗಳ ಸಂಗ್ರಹ): ಸ.ಪು.,ಧಾ. ೧೯೫೭

ಇದು ನಭೋವಾಣಿ: ಸ.ಪು.,ಧಾ. ೧೯೭೦

ಉದ್ಧಾರ (ನಾಟಕ): ಸ.ಪು.,ಧಾ. ೧೯೭೯ (ಮೊ. ಮು. ೧೯೫೦)

ಉತ್ತರಾಯಣ: ಸ.ಪು.,ಧಾ. ೧೯೭೦

ಉಪನಿಷದ್ ರಹಸ್ಯ ಅಥವಾ ಭಾರತೀಯ ಅಧ್ಯಾತ್ಮಶಾಸ್ತ್ರ ಪೀಠಿಕೆಯು (ಅನು): (ರಂಗನಾಥ ದಿವಾಕರ ಮತ್ತು ಶಂ. ಬಾ. ಜೋಶಿಯವರೊಡನೆ) ಆಧ್ಯಾತ್ಮ ಕಾರ್ಯಾಲಯ, ಧಾ. ೧೯೩೮

ಉಯ್ಯಾಲೆ: ಕಾವ್ಯಾಲಯ, ಮೈ. ೧೯೫೦ (ಮೊ. ಮು. ೧೯೩೮)

ಎರಡು ಆವಿದ್ಧ ನಾಟಕಗಳು (ಉದ್ಧಾರ ಮತ್ತು ನಗೆಯ ಹೊಗೆ): ಶೇಷೋ ಗೋವಿಂದ ಕುಲಕರ್ಣಿ, ಧಾ. ?

ಒಲವೆ ನಮ್ಮ ಬದುಕು (ಆಯ್ದ ಕವನಗಳು): ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ, ಉಡುಪಿ, ೧೯೭೭

ಕನ್ನಡ ಮೇಘದೂತ (ಅನು): ಸ.ಪು.,ಧಾ. ೧೯೬೩ (ಮೊ. ಮು. ೧೯೪೩)

ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು (ವಿಮರ್ಶೆ): ಕರ್ನಾಟಕ ವಿಶ್ವವಿದ್ಯಾಲಯ, ಧಾ. ೧೯೬೮

ಕಬೀರ ವಚನಾವಲಿ (ಅನು): ಸಾಹಿತ್ಯ ಅಕಡೆಮಿ, ನವದೆಹಲಿ, ೧೯೬೮

ಕೃಷ್ಣಾಕುಮಾರಿ: ? ? ೧೯೨೨

ಕೃಷ್ಣಾಕುಮಾರಿ ಮತ್ತು ಹಾಡು ಪಾಡು: ಸ.ಪು.,ಧಾ. ೧೯೫೬

ಕಾವ್ಯೋದ್ಯೋಗ (ವಿಮರ್ಶೆ): ಸ.ಪು.,ಧಾ. ೧೯೬೨

ಕುಮಾರವ್ಯಾಸ ಪುಸ್ತಿಕೆ (ವಿಮರ್ಶೆ): ? ? ೧೯೭೬

ಗಂಗಾವತರಣ: ಪ್ರ.ಗ್ರಂ.ಮಾ.,ಧಾ. ೧೯೬೪ (ಮೊ. ಮು. ೧೯೫೦)

ಗರಿ: ಮ.ಗ್ರಂ.ಮಾ.,ಧಾ. ೧೯೫೧ (ಮೊ.ಮು. ೧೯೩೨)

ಗುರು ಗೋವಿಂದಸಿಂಗ್ (ಅನು): (ಇತರರೊಡನೆ), ಗುರು ಗೋವಿಂದಸಿಂಗ್ ಸಂಸ್ಥೆ, ಚಂಡೀಗಢ, ೧೯೬೬

ಗೋಲ್ (ನಾಟಕ): ಸ.ಪು.,ಧಾ. ೧೯೭೬ (ಮೊ. ಮು. ೧೯೩೬)

ಚಂದ್ರಹಾಸ (ಸಂಪಾದನೆ): ಮ.ಗ್ರಂ.ಮಾ.,ಧಾ. ೧೯೪೮

ಚತುರೋಕ್ತಿ ಮತ್ತು ಇತರ ಕವನಗಳು: ? ? ೧೯೭೮

ಚೀನದ ಬಾಳು ಬದುಕು (ಅನು. ಕಥಾಸಂಗ್ರಹ): (ಇತರರೊಡನೆ) ಮ.ಗ್ರಂ.ಮಾ.,ಧಾ. ೧೯೫೦

ಚೈತ್ಯಾಲಯ: ಸ.ಪು.,ಧಾ. ೧೯೫೭

ಜಾತ್ರೆ (ನಾಟಕ): ಸ.ಪು.,ಧಾ. ೧೯೭೬ (ಮೊ. ಮು. ೧೯೫೦)

ಜೀವನಲಹರಿ: ಸ.ಪು ,ಧಾ. ೧೯೫೭

ಜೈಮಿನಿ ಭಾರತಕ್ಕೆ ಮುನ್ನುಡಿ (ವಿಮರ್ಶೆ): ಬೇಂದ್ರೆ, ಸೊಲ್ಲಾಪುರ, ೧೯೫೪

ತಿರುಕರ ಪಿಡುಗು (ನಾಟಕ): ಸ.ಪು.,ಧಾ. ೧೯೭೯ (ಮೊ. ಮು. ೧೯೩೬)

ದೆವ್ವದ ಮನೆ (ನಾಟಕ): ಸ.ಪು ,ಧಾ. ೧೯೭೯ (ಮೊ. ಮು. ೧೯೩೬)

ನಗೆಯ ಹೊಗೆ (ನಾಟಕ): ಸ.ಪು.,ಧಾ. ೧೯೭೯ (ಮೊ. ಮು. ೧೯೫೦)

ನನ್ನದು ಈ ಕನ್ನಡ ಹಾಡು: ಜೋಶಿ ಶಂಕರರಾಯರು, ಧಾ. ೧೯೭೮

ನಮನ: ಸ.ಪು.,ಧಾ. ೧೯೫೮

ನಾಕು ತಂತಿ: ಪ್ರ.ಗ್ರಂ.ಮಾ., ಧಾ. ೧೯೭೪ (ಮೊ. ಮು. ೧೯೬೪)

ನಾದಲೀಲೆ: ಕರ್ನಾಟಕ ಸಂಘ, ಶಿವಮೊಗ್ಗ, ೧೯೩೮

ನಿರಾಭರಣ ಸುಂದರಿ (ಸಣ್ಣ ಕಥೆ, ಹರಟೆ): ಸಮನ್ವಯ ಪ್ರಕಾಶನ, ಗದಗ, ೧೯೫೬ (ಮೊ. ಮು. ೧೯೪೦)

ಬಾ ಹತ್ತರ (ಆಯ್ದ ಕವನಗಳು): ಗೀತಾ ಬುಕ್ ಹೌಸ್, ಮೈ. ೧೯೬೯

ಭಗ್ನಮೂರ್ತಿ (ಅನು): ಪ್ರ.ಗ್ರಂ.ಮಾ.,ಧಾ. ೧೯೭೨

ಭಾರತೀಯ ನವಜನ್ಮ (ಅನು): ? ? ೧೯೩೬

ಮಂದೀ ಮಕ್ಕಳು (ನಾಟಕ): ಸ.ಪು.,ಧಾ. ೧೯೮೦ (ಮೊ.ಮು. ೧೯೫೦)

ಮಂದೀ ಮದಿವಿ „ „ „ „

ಮಂದೀ ಮನಿ „ „ „ „

ಮತಧರ್ಮ ಮತ್ತು ಆಧುನಿಕ ಮಾನವ (ಭಾಷಣ): ? ? ೧೯೭೯

ಮತ್ತೆ ಶ್ರಾವಣ ಬಂತು: ಸ.ಪು.,ಧಾ. ೧೯೭೩

ಮರ್ಯಾದ: ಸ.ಪು.,ಧಾ. ೧೯೬೬

ಮಹಾರಾಷ್ಟ್ರ ಸಾಹಿತ್ಯ (ವಿಶೇಷೋಪನ್ಯಾಸ): ಮೈಸೂರು ವಿಶ್ವವಿದ್ಯಾಲಯ, ಮೈ. ೧೯೫೯

ಮಾತೆಲ್ಲ ಜ್ಯೋತಿ (ಭಾಷಣ): ಅಕಡೆಮಿ ಆಫ್ ಜನರಲ್ ಎಜುಕೇಶನ್, ಮಣಿಪಾಲ, ೧೯೭೨

ಮುಕ್ತಕಂಠ: ಸ.ಪು.,ಧಾ. ೧೯೭೬ (ಮೊ.ಮು. ೧೯೫೬)

ಮುಗಿಲ ಮಲ್ಲಿಗೆ: ಪ್ರ.ಗ್ರಂ.ಮಾ.,ಧಾ. ೧೯೬೧

ಮೂರ್ತಿ-ಕಾಮಕಸ್ತೂರಿ: ಪ್ರ.ಗ್ರಂ.ಮಾ.,ಧಾ. ೧೯೫೫ (ಮೊ.ಮು. ೧೯೩೪)

ಯಕ್ಷ-ಯಕ್ಷಿ: ಪ್ರ.ಗ್ರಂ.ಮಾ ,ಧಾ. ೧೯೬೨

ವಿಚಾರ ಮಂಜರಿ (ವಿಮರ್ಶೆ): ಮಿಂಚಿನಬಳ್ಳಿ, ಧಾ. ೧೯೪೫

ವಿಟ್ಠಲ ಸಂಪ್ರದಾಯ–ಒಂದು ಭಾಷಣ: (ಮರಾಠಿಯಲ್ಲಿ) ? ? ೧೯೬೫

ವಿನಯ (ಆಯ್ದ ಕವನಗಳು): ಗೀತಾ ಬುಕ್ ಹೌಸ್, ಮೈ. ೧೯೮೦ (ಮೊ.ಮು. ೧೯೭೩)

ಶಾಂತಲಾ (ಕಾದಂಬರಿ, ಅನು): (ಮರಾಠಿಗೆ) ? ? ೧೯೭೩

ಶ್ರೀ ಅರವಿಂದರ ಯೋಗ ಆಶ್ರಮ ಮತ್ತು ತತ್ತ್ವೋಪದೇಶ (ಅನು): ? ? ೧೯೪೭

ಶ್ರೀಮಾತಾ: ಸ.ಪು.,ಧಾ. ೧೯೬೮

ಸಂಚಯ: ಸ.ಪು.,ಧಾ. ೧೯೫೯

ಸಂತ ಮಹಂತಾಂಚಾ ಪೂರ್ಣ ಶಂಭೋ ವಿಟ್ಠಲ: (ಮರಾಠಿಯಲ್ಲಿ) ? ? ೧೯೮೦

ಸಂವಾದ (ಕವನ ಮತ್ತು ವಿಮರ್ಶೆ): (ಮರಾಠಿಯಲ್ಲಿ) ? ? ೧೯೬೫

ಸಖೀಗೀತ: ಮ.ಗ್ರಂ.ಮಾ.,ಧಾ. ೧೯೫೧ (ಮೊ.ಮು. ೧೯೩೪)

ಸಾಯೋ ಆಟ (ನಾಟಕ): ಸ.ಪು.,ಧಾ. ೧೯೭೯ (ಮೊ.ಮು. ೧೯೩೬)

ಸಾಹಿತ್ಯದ ವಿರಾಟ್ ಸ್ವರೂಪ (ವಿಮರ್ಶಾ ಸಂಕಲನಗಳ ಸಂಗ್ರಹ): ಸ.ಪು.,ಧಾ. ೧೯೭೪

ಸಾಹಿತ್ಯ ಮತ್ತು ವಿಮರ್ಶೆ (ವಿಮರ್ಶೆ): ಮ.ಗ್ರಂ.ಮಾ.,ಧಾ. ೧೯೪೯ (ಮೊ.ಮು. ೧೯೩೭)

ಸಾಹಿತ್ಯ ಸಂಶೋಧನೆ (ವಿಮರ್ಶೆ): ಮ.ಗ್ರಂ.ಮಾ.,ಧಾ. (೧೯೪೦)

ಸೂರ್ಯಪಾನ: ಸ.ಪು.ಧಾ., ೧೯೫೬

ಸೊಂಡಿಗಣಪ್ಪ ಬಂದಾ (ಮಕ್ಕಳ ನಾಟಕಗಳು): ಸ.ಪು.,ಧಾ. ೧೯೭೯

ಹಳೆಯ ಗೆಣೆಯರು (ನಾಟಕ): ಸ.ಪು.,ಧಾ. ೧೯೭೯ (ಮೊ.ಮು. ೧೯೩೬)

ಹೃದಯ ಸಮುದ್ರ: ಸ.ಪು.,ಧಾ. ೧೯೫೬

ಹಾಡು–ಪಾಡು: ರಾಮಾಚಾರ್ಯ ಕಾಖಂಡಿಕಿ, ಜಮಖಂಡಿ, ೧೯೪೬

ಹುಚ್ಚಾಟಗಳು (ನಾಟಕ ಸಂಕಲನ): ಮಾಧವ ಸನ್ಸ್, ಬೆಂ. ೧೯೩೬

ಹೊಸಗನ್ನಡ ಕಾವ್ಯಶ್ರೀ (ಸಂಪಾದನೆ): (ಎಂ. ಮರಿಯಪ್ಪಭಟ್ಟರೊಡನೆ)
ಶ್ರೀಕೃಷ್ಣ ಪ್ರೆಸ್, ಬೆಂ. ೧೯೫೭

ಹೊಸ ಸಂಸಾರ ಮತ್ತು ಇತರ ಏಕಾಂಕಗಳು (ನಾಟಕ ಸಂಕಲನ): ಮ.ಗ್ರಂ.ಮಾ,.ಧಾ. ೧೯೫೦

೨. ಬೇಂದ್ರೆ ಮೇಲೆ

ಅ) ಪುಸ್ತಕ ರೂಪದಲ್ಲಿ:

ಇಳಿದು ಬಾ ತಾಯಿ (ಸಂಭಾವನೆ): ಸಂ: ಡಾ|| ಬುದ್ದಣ್ಣ ಹಿಂಗಮಿರೆ, ಸಾಹಿತ್ಯ ಮಂಟಪ, ಹುಬ್ಬಳ್ಳಿ ಮತ್ತು ಸ.ಪು.,ಧಾ. ೧೯೭೭

Eagle and the arrow : ಕೀರ್ತಿನಾಥ ಕುರ್ತಕೋಟಿ, ವ್ಯೈ.ವಿ.ವಿ. (ಅಪ್ರಕಟಿತ)

ಕಂಪಿನ ಕರೆ: ಗೌರೀಶ ಕಾಯ್ಕಿಣಿ, ಸ.ಪು.,ಧಾ. ೧೯೪೦

ಕವಿ ಅಂಬಿಕಾತನಯದತ್ತ: ಸಂ: ಶೇ. ಗೋ. ಕುಲಕರ್ಣಿ, ? ?

ಕವಿ ಬೇಂದ್ರೆ: ಸಂ: ಜಿ. ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂ. ೧೯೭೫

ಕವಿವರ ಬೇಂದ್ರೆ: ಲಲಿತ ಸಾಹಿತ್ಯ ಮಾಲೆ, ಧಾ. ೧೯೪೬

ಕವಿ ಶ್ರೀಮಾಲಾ: (ಹಿಂದಿ?) ಸಂ: ಎನ್. ಎಸ್. ಕೃಷ್ಣಮೂರ್ತಿ, ರಾಷ್ಟ್ರಭಾಷಾ ಪ್ರಚಾರ ಸಮಿತಿ, ವರ್ಧಾ, ೧೯೬೨

ಕಾವ್ಯತರಂಗಿಣಿ (ಸಂಪುಟ ೨): ಸಂ: ಸಿ. ಜಿ. ಪುರುಷೋತ್ತಮ ? ?

ಜೀವನ–ಬೇಂದ್ರೆ ವಿಶೇಷಾಂಕ: ಸಂ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ೭–೨, ಬೆಂ. ೧೯೪೬

ಜೋಗಿಯ ನಾದಧ್ವನಿ: ಆರ್. ಜಿ. ಕುಲಕರ್ಣಿ, ಶ್ರೀ ಅರವಿಂದ ಮಂಡಳ ಪ್ರಕಾಶನ, ಬೆಂ. ೧೯೬೯

Dr. D. R. Bendre's 'Four strings'—Selection from Naku tanti :
ಅನು: ಡಾ|| ಕೆ. ರಾಘವೇಂದ್ರರಾವ್, ಡಾ|| ವಿ. ಡಿ. ಬೇಂದ್ರೆ, ಪ್ರೊ|| ಕೆ. ಎಸ್. ಶರ್ಮ, ? ? ?

ದತ್ತವಾಣಿ: ಮಿರ್ಜಿ ಅಣ್ಣಾರಾಯ, ಮ.ಗ್ರಂ.ಮಾ ,ಧಾ. ೧೯೪೬

ದತ್ತಸಾಹಿತ್ಯ: ಸಿ. ಪಿ. ಲಿಂಗಣ್ಣ, ಸಾಧನ ಪ್ರಕಾಶನ, ಧಾ. ?

ದರ್ಶನಾಗೇದ–ಮುಕ್ತನಾಗಿಲ್ಲ: ಡಾ|| ಶಿವ, ಆನಂದ ಪ್ರಕಾಶನ, ಹುಬ್ಬಳ್ಳಿ, ೧೯೭೯

ನಂದನವನ: ಸಂ: ತ. ಸು. ಶಾಮರಾಯ, ಆನಂದ ಸೇವಾಶ್ರಮ ವಿಶ್ವಸ್ಥ ಸಮಿತಿ, ಮಲ್ಲಾಡಿಹಳ್ಳಿ, ೧೯೭೮

ನಾಕು ತಂತಿ: (ಹಿಂದಿ) ಡಾ|| ಪುತ್ರನ್, ಭಾರತೀಯ ಜ್ಞಾನಪೀಠ ಪ್ರಕಾಶನ, ? ೧೯೭೮

ಬೇಂದ್ರೆ: ಬಿ. ಎಚ್. ಶ್ರೀಧರ, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜ್, ಉಡುಪಿ, ೧೯೫೬

ಬೇಂದ್ರೆ ಕೃತಿ ಮತ್ತು ವ್ಯಕ್ತಿ–ಒಂದು ಚಿಂತನೆ: ಆರ್. ವೆಂಕಟೇಶ್, ವಿಶ್ವಸಮಾಜ ಪ್ರಕಾಶನ, ತಲಕಾಡು, ೧೯೭೯

ಬೇಂದ್ರೆ ಕಾವ್ಯ ಮತ್ತು ಜೀವನ: ಸದಾನಂದನಾಯಕ, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂ. ೧೯..೮

ಬೇಂದ್ರೆ ಜೀವನ ಕಾವ್ಯ: ಕೀರ್ತಿನಾಥ ಕುರ್ತಕೋಟಿ, ಬೆಂ.ವಿ.ವಿ. (ಅಪ್ರಕಟಿತ)

Bendre–Poet and Seer: ಡಾ|| ವಿ. ಕೃ. ಗೋಕಾಕ್, ಸೌಮ್ಯ (Somiya) ಪ್ರಕಾಶನ, ಬೊಂಬಾಯಿ ೧೯೭೦

ಬೇಂದ್ರೆಯವರ ಜೀವನ ಪರಿಚಯ: ಡಾ|| ವಾಮನ ಬೇಂದ್ರೆ, ಸ.ಪು.,ಧಾ. ೧೯೭೮

ಬೇಂದ್ರೆಯವರ ಭಾವಗೀತೆಗಳು (ಪಿ ಎಚ್.ಡಿ. ನಿಬಂಧ): ಪರ್ವತೀಕರ್, ಕ.ವಿ.ವಿ. (ಅಪ್ರಕಟಿತ)

ಬೇಂದ್ರೆ ವಾಙ್ಮಯ ದರ್ಶನ: ಸಂ: ಎಚ್. ಜಿ. ಜೋಶಿ, ರಾಮಾಚಾರ್ಯ ಕಾಖಂಡಿಕಿ, ಜಮಖಂಡಿ, ೧೯೪೩

ಬೇಂದ್ರೆ ವಾಙ್ಮಯ ದರ್ಶನ: ಸಂ: ಪಂಡರೀನಾಥಾಚಾರ್ಯ ಗಲಗಲಿ, ಪಂಚಾಮೃತ ಪ್ರಕಾಶನ, ಗದಗ, ೧೯೭೪

ಬೇಂದ್ರೆ ಸಾಹಿತ್ಯ ಸೌರಭ: ಸಂ: ಕೊಟ್ಟಲಗಿ ಗದಗಕರ, ಸ.ಪು.,ಧಾ. ೧೯೭೫

ಬೇಂದ್ರೆ ಹಾಗೂ ಕನ್ನಡ ಕಾವ್ಯಸ್ವರೂಪ: ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಘ, ಕಲಬುರ್ಗಿ, ೧೯೬೨

ಭೃಂಗದ ಬೆನ್ನೇರಿ: ಕೀರ್ತಿನಾಥ ಕುರ್ತಕೋಟಿ, ಮ.ಗ್ರಂ.ಮಾ.,ಧಾ. ೧೯೭೫

ವರಕವಿ: ಸಂ: ಸು. ರಂಗಸ್ವಾಮಿ, ಹಂಸಧ್ವನಿ ಪ್ರಕಾಶನ, ಬೆಂ. ೧೯೭೫

ಶ್ರೀ ಬೇಂದ್ರೆಯವರ ಕಾವ್ಯಮೀಮಾಂಸೆ: ಶಂಕರ ಮೊಕಾಶಿ ಪುಣೇಕರ, ಸ.ಪು.,ಧಾ. ೧೯೬೨

ಶೂದ್ರ–ಬೇಂದ್ರೆ ವಿಶೇಷಾಂಕ: ಸಂ: ಶೂದ್ರ ಶ್ರೀನಿವಾಸ, ೭–೧, ಬೆಂ. ೧೯೮೧

ಸಂಕಿರಣ (ಬೇಂದ್ರೆ ಭಾಗ): ಎನ್ಕೆ, ಜೂನಿಯರ್ ಕಾಲೇಜ್, ಸಾಹಿತ್ಯ ಸಂಘ, ಮಲ್ಲಾಡಿಹಳ್ಳಿ, ೧೯೭೯

ಆ) ಲೇಖನರೂಪದಲ್ಲಿ (ನಿಧನಾನಂತರದ)

ಅಂಬಿಕೆಯ ಮಡಿಲಿಗೆ ವರಕವಿ ಅಂಬಿಕಾತನಯದತ್ತ: ಕನ್ನಡ ಪ್ರಭ, ೨೮–೧೦–೧೯೮೧ ಬೆಂ.

ಅಂಬಿಕಾತನಯದತ್ತನತ್ತ ಡಾಮರ್ ಪೋರೇಸ್, ಚಂಪಾರ ವಾರೆನೋಟ: ಚಂದ್ರಶೇಖರ ಪಾಟೀಲ, ಲಂಕೇಶ್ ಪತ್ರಿಕೆ, ೮–೧೧–೧೯೮೧, ಬೆಂ.

ಅಗಲಿದ ವರಕವಿ-ರಸಋಷಿ ಬೇಂದ್ರೆಗೆ ನಾಡಿನ ನಮನ: ಸಂಯುಕ್ತ ಕರ್ನಾಟಕ, ಬೆಂ. ೨೮–೧೦–೧೯೮೧

ಅಮರ ಬೇಂದ್ರೆ (ಕವನ): ಸೌ. ಗಿರಿಜಾ ಬಸವರಾಜ, ಪ್ರಪಂಚ, ಪು. ೨೯, ೨೯–೧೧–೧೯೮೧, ಹುಬ್ಬಳ್ಳಿ

ಅಮರರಾದ ಅಂಬಿಕಾತನಯದತ್ತ: ಕನ್ನಡ ನುಡಿ, ಪು. ೧೭, ೧–೧೧–೧೯೮೧, ಬೆಂ.

ಅನುಭವಿ, ಸಾಧಕ, ಗಾರುಡಿಗ, ಸಿದ್ಧಪುರುಷ–ಕವಿ ಬೇಂದ್ರೆ: ಸುಧಾ, ಪು. ೨೬, ೧೫–೧೧–೧೯೮೧, ಬೆಂ.

ಅಶ್ರುತರ್ಪಣ (ಕವನ): ರಮೇಶ್ಚಂದ್ರ ಕುಲಕರ್ಣಿ, ಪರಂಜ್ಯೋತಿ, ಪು. ೨೬೧, ಡಿಸೆಂಬರ್ ೧೯೮೧, ಹುಬ್ಬಳ್ಳಿ

ಅವಿಸ್ಮರಣೀಯ ಅಂಬಿಕಾತನಯದತ್ತ: ರಾಮಪ್ರಸಾದ, ಕನ್ನಡಪ್ರಭ, ೨೮-೧೦-೧೯೮೧, ಬೆಂ.

ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದ ಒಂದು ದೊಡ್ಡ ಸತ್ವ: ವಿ. ಸೀತಾರಾಮಯ್ಯ, ಪು. ೩, ಗ್ರಂಥಲೋಕ, ೧-೧೨-೧೯೮೧, ಮೈ.

ಇದು ಬರಿ ಬೆಡಗಲ್ಲೋ ಅಣ್ಣಾ: ಕು. ಶಿ. ಹರಿದಾಸಭಟ್ಟ, ಉದಯವಾಣಿ, ೨೮-೧-೧೯೮೧, ಮಣಿಪಾಲ

ಎಲ್ಲಿಯೋ ಹೋಗಿಬಿಟ್ಯಾ (ಕವನ): ಹುಬ್ಬಳ್ಳಿ ಹೂಗಾರ, ಪ್ರಪಂಚ, ಪು. ೨೯, ೨೯-೧೧-೧೯೮೧, ಹುಬ್ಬಳ್ಳಿ

ಐದು ಐದೆಯರ ಮಗ-ಜೀವಸೃಷ್ಟಿಯ ಸೋಜಿಗ: ಡಾ|| ಸಿದ್ದಯ್ಯ ಪುರಾಣಿಕ, ಪ್ರಜಾಮತ, ಪು. ೧೭, ೨೨-೧೧-೧೯೮೧, ಬೆಂ.

ಕಣ್ಮರೆಯಾದ ವರಕವಿ ಡಾ|| ದ. ರಾ. ಬೇಂದ್ರೆ: ಜಯಸಿಂಹ, ಪಾರಿಜಾತ ಕುಸುಮ, ಪು. ೬೦, ನವೆಂಬರ್ ೧೯೮೧, ಬೆಂ.

ಕತ್ತಲು ಕವಿದ ಸಾಧನಕೇರಿ: ಕನ್ನಡ ನುಡಿ, ಪು ೨೦, ೧-೧೧-೧೯೮೧, ಬೆಂ.

ಕತ್ತಲು ಕವಿದ ಸಾಧನಕೇರಿ: ಪ್ರಜಾವಾಣಿ, ೨೮-೧೦-೧೯೮೧, ಬೆಂ.

ಕನ್ನಡ ಕಾವ್ಯಲೋಕದ ಗಾರುಡಿಗ: ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಪ್ರಜಾವಾಣಿ, ೮-೧೧-೧೯೮೧, ಬೆಂ.

Kannada Poet Bendre dead: ಹಿಂದು, 27-10-1981, ಮದ್ರಾಸು.

ಕರ್ನಾಟಕದ ಕಾವ್ಯ ಚಕ್ರವರ್ತಿ ವರಕವಿ ಬೇಂದ್ರೆ ಇನ್ನಿಲ್ಲ: ಡಾ|| ನಾಡಿಗ ಕೃಷ್ಣಮೂರ್ತಿ, ಪ್ರಪಂಚ, ಪು. ೨೯, ೧೫-೧೧-೧೯೮೧, ಹುಬ್ಬಳ್ಳಿ

ಕವಿಗಳ ಕವಿ ಬೇಂದ್ರೆ: ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕನ್ನಡಪ್ರಭ, ೨೯-೧೦-೧೯೮೧, ಬೆಂ.

ಕವಿ ದಾರ್ಶನಿಕ: ಕನ್ನಡ ನುಡಿ, ೧-೨-೧೯೮೨, ಬೆಂ.

ಕವಿ ದಾರ್ಶನಿಕ: ಪ್ರಜಾವಾಣಿ, ೨೮-೧೦-೧೯೮೧, ಬೆಂ.

ಕವಿಪುಂಗವ ಊದಿದ ಸಂಖ್ಯೆಯ ಪುಂಗಿ (The Open Eyesನಲ್ಲಿರುವ ಡಾಮ್ ಮೊರೇಸ್‌ನ ಬೇಂದ್ರೆ ಸಂದರ್ಶನದ ಕನ್ನಡಾನುವಾದ): ನಚ್ಚಿ, ಲಂಕೇಶ್ ಪತ್ರಿಕೆ, ೮-೧೧-೧೯೮೧, ಬೆಂ.

ಕವಿ ಬೇಂದ್ರೆ: 'ಗಂಗಾಧರ', ಸೇವಾಮೃತ, ಪು. ೧೬, ಜನವರಿ ೧೯೮೨

ಕವಿ ಬೇಂದ್ರೆಯವರು ನಮ್ಮಿಂದ ದೂರವಾದರು: ಎಂ. ಜೀವನ, ಪ್ರಪಂಚ, ಪು. ೧೯, ೮-೧೧-೧೯೮೧, ಹುಬ್ಬಳ್ಳಿ

ಕವಿಯೊಡನೆ ಕೆಲವು ತಾಸುಗಳು: ಜಿ. ಪಿ. ಬಸವರಾಜು, ಮಯೂರ, ಪು. ೧೫, ಜನವರಿ ೧೯೮೨, ಬೆಂ.

ಕಾವ್ಯಲೋಕದ ಯುಗಪುರುಷ ಬೇಂದ್ರೆ: ಬೈರಮಂಗಲ ರಾಮೇಗೌಡ, ಸ್ಪ್ರಿಂಗ್ ಇಂಡಿಯ, ಡಿಸೆಂಬರ್ ೧೯೮೧, ಹೊಸಕೋಟೆ

ಜಗತ್ತಿನ ಅತಿದೊಡ್ಡ ಕವಿಗಳಲ್ಲೊಬ್ಬರು: ಪ್ರಭುಶಂಕರ, ಗ್ರಂಥಲೋಕ, ಪು. ೫, ೧-೧೨-೧೯೮೨, ಮೈ.

ದತ್ತ ಸಿದ್ಧ (ಕವನ): ಎನ್ಕೆ, ಪರಂಜ್ಯೋತಿ, ಪು. ೩೬೧, ಡಿಸೆಂಬರ್ ೧೯೮೧, ಹುಬ್ಬಳ್ಳಿ

ದುರ್ದರ ಪ್ರಸಂಗ: ಶಂ. ಬಾ. ಜೋಶಿ, ಸಂಯುಕ್ತ ಕರ್ನಾಟಕ, 29-10-1981, ಬೆಂ.

ದೇವರದೊಂದು ಗೋರಿಯ ಕಟ್ಟಿ ಧರ್ಮದ ಧೂಪಕೆ ಬೆಂಕಿಯನಿಕ್ಕಿ: ಹಳಪೇಟೆ ಚಿಂತಾಮಣಿ, ಪ್ರಪಂಚ, ಪು. ೨೫, ೪-೧-೧೯೮೨, ಹುಬ್ಬಳ್ಳಿ

ನಮ್ಮ ಬೇಂದ್ರೆಯವರು: ಚಿ. ನ. ಮಂಗಳ, ಕನ್ನಡ ಪ್ರಭ, ೩೦-೧೦-೧೯೮೧, ಬೆಂ.

ನಾಕು ತಂತಿಯ ಮಿಡಿತ ಕಿನ್ನರ ಜೋಗಿಗೆ (ಕವನ): ಜಿ. ಲಕ್ಷ್ಮೀನಾರಾಯಣರಾವ್, ವಿದ್ಯಾ, ನವೆಂಬರ್ ೧೯೮೧, ಬೆಂ.

ನಾಡಿಗೆ ನುಡಿಯ ಮೋಡಿ ಹಾಕಿದ ಗಾರುಡಿಗ: ಜಯರಾಮ ಅಡಿಗೆ, ಕನ್ನಡ ಪ್ರಭ, ೨೮-೧೦-೧೯೮೧, ಬೆಂ.

ನಾದಲೀಲೆಯ ಗಾರುಡಿಗ ವರಕವಿ ದ. ರಾ. ಬೇಂದ್ರೆ: ಪಾಟೀಲ ಪುಟ್ಟಪ್ಪ, ಪ್ರಪಂಚ, ಪು. ೧೯, ೧೫-೧೨-೧೯೮೧, ಹುಬ್ಬಳ್ಳಿ

ನಾನಿನ್ನು ಹ್ಯಾಂಗೆ ನೋಡಲಿ ನಿನ್ನ?: ಪಿ. ಎಲ್., ಲಂಕೇಶ್ ಪತ್ರಿಕೆ, ೧-೧೧-೧೯೮೧, ಬೆಂ.

ನಿನಗೂ ನಮಗೂ ಅಂಟಿದ ನಂಟು: ಗನೂರ, ಉದಯವಾಣಿ, ೨೮-೧೧-೧೯೮೧ ?

ನಿಷ್ಕಾಮಿ, ಶ್ರದ್ಧಾಳು (ಸಂಪಾದಕೀಯ): ಕನ್ನಡ ಡ ಪ್ರಭ, ೨೭-೧೦-೧೯೮೧, ಬೆಂ.

ನೆನಪಿನ ನಾಣ್ಯ: ಡಾ|| ಹಾ. ಮಾ. ನಾಯಕ, ಗ್ರಂಥಲೋಕ, ಪು. ೧, ೧-೧೨-೧೯೮೨, ಮೈ.

ನೆರೆಮನೆಯ ಬೇಂದ್ರೆ-ಒಂದು ನೆನಪು: ಉಮಾ ಶಂಕರರಾವ್, ಕನ್ನಡ ಪ್ರಭ, ೧೦-೧೧-೧೯೮೧, ಬೆಂ.

ಬದುಕಿನ ಹಿರಿಮೆಯನ್ನು ಉಕ್ಕಂದವಾಗಿ ಹಾಡಿದ ಕವಿ ಬೇಂದ್ರೆ: ಅಬ್ಬಿಗೇರಿ ವಿರೂಪಾಕ್ಷಪ್ಪ, ಪ್ರಪಂಚ, ಪು. ೪೪, ೧೫-೧೧-೧೯೮೧, ಹುಬ್ಬಳ್ಳಿ

ಬದುಕಿರುವಾಗ ಸತ್ತಂತೆ, ಸತ್ತಾಗ ಚಿತಾಭಸ್ಮ ಮೆರವಣಿಗೆ: ಕೋ. ಚನ್ನಬಸಪ್ಪ, ಪ್ರಜಾಮತ, ಪು. ೫, ೬-೧೨-೧೯೮೧, ಬೆಂ.

ಬದುಕೇ ಜೀವನದ ಗುರಿ: ವಿ. ಕೃ. ಗೋಕಾಕ್, ಗ್ರಂಥಲೋಕ, ಪು. ೬, ೧-೧೨-೧೯೮೧, ಮೈ.

Between you and me ಅಂಕಣದಲ್ಲಿ: CHP, ಹಿಂದು, 9-11-1981, ಮದ್ರಾಸು

ಬಿದ್ದ ಪುಚ್ಛಗಳಲ್ಲಿ ಹುಡುಕುವೆ ಹಾರಿಹೋಗಿಹ ಹಕ್ಕಿಯ: ಶಿವರಾಮ ಪಡಿಕ್ಕಲ್, ವಿಕ್ರಮ, ೮-೧೧-೧೯೮೧, ಬೆಂ.

ಬೇಂದ್ರೆ (ಕವನ): ಸುಮತೀಂದ್ರ ನಾಡಿಗ, ಕನ್ನಡ ಪ್ರಭ, ೬-೧೨-೧೯೮೧, ಬೆಂ.

Bendre (ಸಂಪಾದಕೀಯ): Deccan Herald, 26-10-1981, ಬೆಂ.

ಬೇಂದ್ರೆ ಅಣ್ಣಾ: ಶ್ರೀಮತಿ ಶಕುಂತಲಾ ನಾಯಿಕ; ಅನುಬಂಧ (ಮರಾಠಿ ತ್ರೈಮಾಸಿಕ); ಜನವರಿ-ಮಾರ್ಚ್, 1982, ಗುಲ್ಬರ್ಗ

ಬೇಂದ್ರೆ ಅಂದ್ರ ಎಂಥಾವಾ (ಕವನ): ಬಿ. ಕೆ. ನಾಲ್ವಾಡ, ಪ್ರಪಂಚ, ಪು. ೨೯,
೨೯-೧೧-೧೯೮೧, ಹುಬ್ಬಳ್ಳಿ

ಬೇಂದ್ರೆ ಅವರನ್ನು ನಾನು ಕಂಡ ಬಗೆ: ಸ. ಸ. ಮಾಳವಾಡ, ಗ್ರಂಥಲೋಕ, ಪು. ೨,
೧-೧೨-೧೯೮೧, ಮೈ.

Bendre is no more: Deccan Herald, 26-10-1981, ಬೆಂ.

Bendre: A Poet of the Poet's: Deccan Herald, 26-10-1981, ಬೆಂ.

ಬೇಂದ್ರೆ - ಒಂದು ಅವಲೋಕನ: ಶಂಕರ ಮೊಕಾಶಿ ಪುಣೇಕರ, ಗ್ರಂಥಲೋಕ, ಪು. ೭,
೧-೧೨-೧೯೮೧, ಮೈ.

ಬೇಂದ್ರೆ - ಒಂದು ಒಳನೋಟ: ಶಂಕರ ಮೊಕಾಶಿ ಪುಣೇಕರ, ಮಯೂರ, ಪು. ೧೦,
ಜನವರಿ ೧೯೮೨, ಬೆಂ.

ಬೇಂದ್ರೆ - ಗುಡುಗಾಡಿದ ದನಿ ಈಗ ಮೌನ: ಕೀರ್ತಿನಾಥ ಕುರ್ತಕೋಟಿ,
ಪ್ರಜಾವಾಣಿ, ೧೪-೧೨-೧೯೮೧, ಬೆಂ.

ಬೇಂದ್ರೆ ಧ್ವನಿ: ವರದರಾಜ ಹುಯಿಲುಗೋಳ, ಗ್ರಂಥಲೋಕ, ಪು. ೪, ೧-೧೨-೧೯೮೧, ಮೈ.

ಬೇಂದ್ರೆ ಬಂದು ಹೋದರು: ಕೆ. ಟಿ. ವೇಣುಗೋಪಾಲ್,
ಉದಯವಾಣಿ, ೬-೧೧-೧೯೮೧, ಮಣಿಪಾಲ

ಬೇಂದ್ರೆ ಬೆಳಕು: ಡಾ|| ಹಾ. ಮಾ. ನಾಯಕ, ಪ್ರಜಾಮತ, ಪು. ೧೭, ೧೫-೧೦-೧೯೮೧, ಬೆಂ.

ಬೇಂದ್ರೆಯವರ ನಲ್ಲ ನಲ್ಲೆಯರ ಲಲ್ಲೆ: ಶಂಕರ ಮೊಕಾಶಿ ಪುಣೇಕರ, ಋಜುವಾತು, ಪು. ೮೧,
ಜನವರಿ - ಮಾರ್ಚ್ ೧೯೮೨, ಮೈ.

ಬೇಂದ್ರೆಯವರ 'ಮಗುವಿನ ಕರೆ': ಗಿರಡ್ಡಿ ಗೋವಿಂದರಾಜ, ಮಲ್ಲಿಗೆ, ಪು. ೫೫,
ಫೆಬ್ರವರಿ ೧೯೮೨, ಬೆಂ.

ಬೇಂದ್ರೆಯವರ ಸಾಧನೆ-ಸಾಹಿತ್ಯ ವಿಮರ್ಶೆಯ ಭಾರತೀಕರಣ: ಪ್ರೊ|| ಆರ್. ಜಿ. ಕುಲಕರ್ಣಿ,
ಸಂಯುಕ್ತ ಕರ್ನಾಟಕ, ೬-೧೨-೧೯೮೧, ಬೆಂ.

Bendre - Lyrical Poet: Indian Express, 28-10-1981, ಬೆಂ.

ಬೇಂದ್ರೆ - ವೈಯಾರ ಮತ್ತು ವೈರಾಗ್ಯದ ನಡುವಿನ ಸಂವೇದನೆ: ಎಸ್. ಆರ್. ವಿಜಯ
ಶಂಕರ್, ಕಸ್ತೂರಿ, ಪು. ೧೯, ಡಿಸೆಂಬರ್ ೧೯೮೧

ಮಣ್ಣಿನ ವಾಸನೆಯ ಛಾಂದಸ ಕವಿ ಬೇಂದ್ರೆ ನಿಧನ: ಉದಯವಾಣಿ,
೨೭-೧೦-೧೯೮೧, ಮಣಿಪಾಲ

ಮನೆ ಮನ ಬೆಳಗಿದ ದ್ರಷ್ಟಾರ: ಕನ್ನಡ ನುಡಿ, ಪು. ೯, ೧೫-೧೧-೧೯೮೧, ಬೆಂ.

ಯುಗದ ಕವಿ ಬೇಂದ್ರೆ (ಸಂಪಾದಕೀಯ): ಋಜುವಾತು, ಪು. ೧೦೮,
ಜನವರಿ-ಮಾರ್ಚ್ ೧೯೮೨, ಮೈ.

ರಸ ಋಷಿ (ಸಂಪಾದಕೀಯ): ಕನ್ನಡಪ್ರಭ, ೨೮-೧೦-೧೯೮೧, ಬೆಂ.

ವರಕವಿಗೆ ನಮನ (ಸಂಪಾದಕೀಯ): ಪ್ರಜಾಮತ, ೮-೧೧-೧೯೮೧, ಬೆಂ.

ವರಕವಿ, ದಾರ್ಶನಿಕ, ರಸಋಷಿ, ಅಂಬಿಕಾತನಯದತ್ತ : ಸಾಹಿತ್ಯ ಮಾಲೆ (ಸಾಹಿತ್ಯ ಸಂಘ, ಬಿ.ಇ.ಎಲ್) ಪು. ೫೧, ೧೯೮೧, ಬೆಂ.

ವರಕವಿ ಬೇಂದ್ರೆ ಸತ್ತರು, ಸರಕಾರವೇನು ಮಾಡಿತು? : ಪಾಟೀಲ ಪುಟ್ಟಪ್ಪ, ಪ್ರಪಂಚ, ಪು. ೧೦, ೮-೧೧-೧೯೮೧, ಹುಬ್ಬಳ್ಳಿ

ವರಕವಿಯ ಕೊನೆಯ ದಿನಗಳು: ಹೆಚ್. ಜಿ. ಬೆಳಗಾಂವಕರ, ಕನ್ನಡಪ್ರಭ, ೧೦-೧೨-೧೯೮೧, ಬೆಂ.

ಶ್ರದ್ಧಾಂಜಲಿ-ಅಂಬಿಕಾತನಯದತ್ತನಿಗೆ: ಕೆ. ಟಿ. ವೇಣುಗೋಪಾಲ್, ಉದಯವಾಣಿ, ೨೨-೧೨-೧೯೮೧, ಮಣಿಪಾಲ

ಸಂಧ್ಯಾರಾಗ (ಕವನ): ನಾ. ಗೀತಾಚಾರ್ಯ, ವಾರ್ತಾಪತ್ರ, ಬಿ.ಎಂ.ಶ್ರೀ. ಪ್ರತಿಷ್ಠಾನ, ಮಾರ್ಚ ೧೯೮೨, ಬೆಂ.

ಸಂಪಾದಕೀಯ: ಮಲ್ಲಿಗೆ, ಡಿಸೆಂಬರ್ ೧೯೮೧, ಬೆಂ.

ಸ್ವರ್ಗೀಯ ಬೇಂದ್ರೆ-ಕೆಲವು ನೆನಪುಗಳು: ಎಂ. ರಾಮಚಂದ್ರ, ಉದಯವಾಣಿ, ೨೭-೧೨-೧೯೮೧, ಮಣಿಪಾಲ.

ಸಾಧನಕೇರಿಯ ಸಾಧಕ ಇನ್ನಿಲ್ಲ: ಎಸ್. ವಿ. ಪ್ರಭಾವತಿ, ವಿದ್ಯಾ, ಪು. ೯, ನವೆಂಬರ್ ೧೯೮೧, ಬೆಂ.

ಸಾರಸ್ವತ ಲೋಕದ ಗಾರುಡಿಗ: ಸಂಯುಕ್ತ ಕರ್ನಾಟಕ, ೨೮-೧೦-೧೯೮೧, ಬೆಂ.

ಸಾವಿಲ್ಲ (ಸಂಪಾದಕೀಯ): ಸಂಯುಕ್ತ ಕರ್ನಾಟಕ, ೨೯-೧೦-೧೯೮೧, ಬೆಂ.

— ಪರಿಶಿಷ್ಟ —

ಬೇಂದ್ರೆ ಅವರಿಂದ—

ಮಕ್ಕಳು ಅಡಿಗೆ ಮನೆ ಹೊಕ್ಕರೆ (ಮಕ್ಕಳ ನಾಟಕ): ಸ.ಪು., ಧಾ, ೧೯೮೦

ಶೋಭನಾ (ಮಕ್ಕಳ ನಾಟಕ): ಸ ಪು., ಧಾ. ೧೯೮೦

ಬೇಂದ್ರೆ ಅವರ ಮೇಲೆ: ಪುಸ್ತಕ ರೂಪದಲ್ಲಿ—

ಅಂಕಣ-ಬೇಂದ್ರೆ ವಿಶೇಷಾಂಕ: ಪ್ರ: ಪಿ. ಪಿ. ಬಳಗ, ಬೆಂ., ಮಾರ್ಚ್ ೧೯೮೧

ನಂ ನಮಸ್ಕಾರ ನಿಮಗ: ತಾಯಿನುಡಿ-ಬೇಂದ್ರೆ ವಿಶೇಷಾಂಕ, ಮುಂಬಯಿ, ಜನವರಿ ೧೯೮೧

ಶ್ರಾವಣದ ಹಕ್ಕಿ: ಸಂ: ಶ್ರೀಧರ್ ನಾಯಕ್, ನಿಶಾಂತ ಪ್ರಕಾಶನ, ಉಡುಪಿ, ೧೯೮೧

[ಈ ಸೂಚಿಯ ತಯಾರಿಕೆಯಲ್ಲಿ ನೆರವಾದ 'ಇಳಿದು ಬಾ ತಾಯಿ' ಗ್ರಂಥಕ್ಕೆ ನಾನು ಋಣಿ. ಸೂಚಿ ಕೂಡಿದಮಟ್ಟಿಗೂ ಸಮಗ್ರವಾಗಿರುವಂತೆ ಪ್ರಯತ್ನಪಟ್ಟಿದೆ. 'ಬೇಂದ್ರೆಯವರ ಭಾವಗೀತೆಗಳು' ಎಂಬುದನ್ನು 'ಅಂಬಿಕಾತನಯದತ್ತರ ಭಾವಗೀತೆಗಳು-ಸೌ|| ರುಕ್ಮಿಣಿ ಪರ್ವತಿ' ಎಂದು ತಿದ್ದಿಕೊಳ್ಳಿ.]

ಪ್ರಕಾಶನ ನಿಧಿಗೆ ಧನಸಹಾಯ ಮಾಡಿರುವವರು

ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್	ರೂ. ೧೦೦-೦೦
ಪ್ರೊ|| ಎಂ. ವಿ. ಸೀತಾರಾಮಯ್ಯ	ರೂ. ೧೦೦-೦೦
ಡಾ|| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿ	ರೂ. ೨೫೦-೦೦
ಶ್ರೀಮತಿ ಎಸ್. ವಿ. ಪ್ರಭಾವತಿ	ರೂ. ೨೫೦-೦೦

ಪ್ರತಿಷ್ಠಾನದ ಪ್ರಕಟನೆಗಳು

೧. ಕೀರ್ತನ ಕುಸುಮಾಂಜಲಿ ರೂ. ೧೦–೦೦

೨. ಬೇಂದ್ರೆ ಸ್ಮೃತಿ ರೂ. ೫–೦೦

೩. ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ) ರೂ. ೫೦–೦೦

(ಸಿದ್ಧತೆಯಲ್ಲಿ : ಕೇಂದ್ರ ಸರ್ಕಾರದ ನೆರವಿನಿಂದ)

೧. ಸರ್ವಜ್ಞ ವಚನಗಳು

೨. ಸೂತಭಾರತ (ಸ್ವರ್ಗಾರೋಹಣ ಪರ್ವ : ಅಜ್ಞಾತಕವಿ)

೩. ತಿಮ್ಮಪ್ಪದಾಸರ ಕೃಷ್ಣಬಾಲಲೀಲೆ (ಪೂರ್ವಭಾಗ)

೪. ರಸಮಂಜರಿ (ಜಾಯೇಂದ್ರಕೃತ)